Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–17 ಸಂಚಿಕೆ–9 ಫೆಬ್ರವರಿ 27 – ಮಾರ್ಚ್ 5, 2023 ಪುಟ 16 ರೂ. 10/–
Volume-17 Issue-9 February 27 - March 5, 2023 Pages:16 Price: 10/-



ಮೋದಿಯವರು ರಾಜಕೀಯ ವಿಶ್ವಾಸಾರ್ಹತೆಯನ್ನು ಉಳಿಸಿಕೊಳ್ಳುತ್ತಾರೆಯೇ?

ಬಿಎಸ್‌ವೈ ಸದನಕ್ಕೆ ವಿದಾಯ ಉಳಿದ ಮಾತುಗಳು




ಜನತೆಯನ್ನು ತಲುಪಿರಿ ವರ್ಗ ಐಕ್ಯತೆಯನ್ನು ಕಟ್ಟಿರಿ ಕೃಷಿ ಕೂಲಿಕಾರರ 10ನೇ ಅಖಿಲ ಭಾರತ ಸಮ್ಮೇಳನ ಕರೆ

ರಾಜ್ಯಗಳಿಗೆ ಸಂಪನ್ಮೂಲ ವರ್ಗಾವಣೆ ಇಳಿಕೆ

‘ವೀರ’ ಸಾವರ್ಕರ್–ಏಳು ಮಿಥ್ಯೆಗಳು

ಮಿಥ್ಯೆಗಳನ್ನು ಸತ್ಯಸಂಗತಿಗಳಿಂದ ಬೇರ್ಪಡಿಸುವ ಒಂದು ಪ್ರಾಮಾಣಿಕ ಆಕಾಂಕ್ಷೆಯಿಂದ ರಚಿಸಿರುವ ಡಾ.ಶಮ್ಸುಲ್ ಇಸ್ಲಾಮ್ ರವರ ‘ಸಾವರ್ಕರ್ ಅನ್‌ಮಾಸ್ಕ್ಡ’ ಸಾವರ್ಕರ್‌ರವರನ್ನು ಕುರಿತ ಏಳು ಮಿಥ್ಯೆಗಳನ್ನು ದಾಖಲೆಗಳ ಬೆಳಕಿನಲ್ಲಿ ಪರಿಶೀಲಿಸುತ್ತದೆ.

ಭಾಗ–18



ಡಾ. ಶಮ್ಸುಲ್‌ಇಸ್ಲಾಂ
ಅನು: ಟಿ.ಸುರೇಂದ್ರರಾವ್

ಮಿಥ್ಯೆ 3

ಸಾವರ್ಕರ್ ಅವರ ಕ್ಷಮಾಯಾಚನೆಯ ಅರ್ಜಿಗಳು ಸ್ವಾತಂತ್ರ್ಯ ಗಳಿಕೆಗೆ ಒಂದು ತಂತ್ರವಷ್ಟೆ!

ಸಾವರ್ಕರ್ ಕ್ಷಮಾಯಾಚನೆಯ ಅರ್ಜಿಗಳನ್ನು ಸಲ್ಲಿಸಿದ್ದು ತಾಯ್ನಾಡಿನ ವಿಮೋಚನೆಗಾಗಿ ಕೆಲಸ ಮಾಡುವ ಸಲುವಾಗಿ ಜೈಲಿನಿಂದ ಬಿಡುಗಡೆ ಹೊಂದುವ ಒಂದು ತಂತ್ರವಷ್ಟೆ ಎಂದು ಅವರ ಬೆಂಬಲಿಗರು ಹೇಳುತ್ತಾರೆ.

ಜೈಲಿನಿಂದ ಬಿಡುಗಡೆ ಪಡೆಯಲು ಸಾವರ್ಕರ್ ಬ್ರಿಟಿಷರೊಂದಿಗೆ ಶಾಮೀಲಾಗಿದ್ದರು ಎನ್ನುವುದನ್ನು ಸಾಬೀತುಪಡಿಸಲು ಯಾವ ಪುರಾವೆಗಳು ಇಲ್ಲ. ನಿಜ ಹೇಳಬೇಕೆಂದರೆ, ಬಿಡುಗಡೆಗಾಗಿನ ಅವರ ಮನವಿ ಒಂದು ತಂತ್ರವಷ್ಟೆ. ಹೊರಗಿನ ರಾಜಕೀಯ ಬೆಳವಣಿಗೆಗಳ ಬಗ್ಗೆ ಅವರಿಗೆ ಚೆನ್ನಾಗಿ ತಿಳಿದಿತ್ತು ಮತ್ತು ಅದರ ಭಾಗವಾಗಲು ಬಯಸಿದ್ದರು. ಆದ್ದರಿಂದ ಅವರು ಬಿಡುಗಡೆಗಾಗಿ ವಿನಂತಿ ಮಾಡುತ್ತಲೇ ಇದ್ದರು ಎಂದು ಸಾವರ್ಕರ್‌ವಾದಿಗಳು ಪ್ರತಿಪಾದಿಸುತ್ತಾರೆ.

ಒಬ್ಬ ಪ್ರಮುಖ ಆರ್.ಎಸ್.ಎಸ್. ಕಾರ್ಯನಿರ್ವಾಹಕರ ಪ್ರಕಾರ, ಶಿವಾಜಿಯ ಉತ್ಕಟ ಅನುಯಾಯಿಯಾಗಿದ್ದ ಸಾವರ್ಕರ್ ಕಾದಾಡುತ್ತಲೇ ಮರಣ ಹೊಂದಬೇಕು ಎಂದು ಬಯಸಿದ್ದರು. ಇದೊಂದೇ ದಾರಿ ಎಂದು ನಿರ್ಣಯಿಸಿದ ಅವರು ತಮ್ಮ ಬಿಡುಗಡೆಗಾಗಿ ಬ್ರಿಟಿಷರಿಗೆ ಆರು ಪತ್ರಗಳನ್ನು ಬರೆದರು.

ಸಾವರ್ಕರ್ ಅವರ ಕ್ಷಮಾಪತ್ರಗಳನ್ನು ಸಮರ್ಥಿಸುತ್ತಾ ಆರ್.ಎಸ್.ಎಸ್. ನ ಪತ್ರಿಕೆ ಆರ್ಗನೈಸರ್ ಹೀಗೆ ಬರೆಯಿತು:

> ಅವರು ಒಬ್ಬ ಸಮರ್ಥ ತಂತ್ರಗಾರ. ವಸಾಹತುಶಾಹಿಯನ್ನು ಹಿಮ್ಮೆಟ್ಟಿಸಲು ದೇಶವು ಅತ್ಯುಗ್ರವಾಗಿ ಹೋರಾಡುತ್ತಿರುವಾಗ ಜೈಲಿನಲ್ಲಿ ಬ್ರಿಟಿಷರಿಂದ ಚಿತ್ರಹಿಂಸೆಗೆ ಒಳಗಾಗಿ ತಾನು ತನ್ನ ಬದುಕಿನ ಬಹು ಮುಖ್ಯ ಸಮಯವನ್ನು ವ್ಯರ್ಥಮಾಡಿಕೊಳ್ಳುತ್ತಿದ್ದೇನೆ ಎಂದು ಭಾವಿಸಿದರು.. .. ..ದರಿದ್ರ ಜೈಲಿನಿಂದ ಹೊರಬಂದು ಸಕ್ರಿಯ ರಾಜಕೀಯ ಮತ್ತು ಸ್ವಾತಂತ್ರ್ಯ ಚಳವಳಿಗೆ ಹಿಂದಿರುಗುವ ಸಲುವಾಗಿ ಅವರು ಪತ್ರಗಳನ್ನು ಬರೆದಿದ್ದು ಸಮರ್ಥನೀಯವೇ ಸರಿ.

ವಾಸ್ತವಾಂಶಗಳು

ಮುಘಲ್ ದೊರೆಗಳ ಕಣ್ಣಿಗೆ ಮಣ್ಣೆರಚಲು ಶಿವಾಜಿ ಬಳಸಿದ ತಂತ್ರವನ್ನು ಸಾವರ್ಕರ್ ಅವರೂ ಬಳಸಿ ಕ್ಷಮಾ ಪತ್ರಗಳನ್ನು ಬರೆಯುವ ಮೂಲಕ ಬ್ರಿಟಿಷರನ್ನು ಮೋಸಗೊಳಿಸಲು ಬಯಸಿದ್ದರು ಎಂಬುದು ಹಸೀ ಸುಳ್ಳಲ್ಲದೇ ಮತ್ತೇನೂ ಅಲ್ಲ. ಸಾವರ್ಕರ್ 1913 ಮತ್ತು 1920 ರಲ್ಲಿ ಬರೆದ ಕ್ಷಮಾಯಾಚನೆಯ ಪತ್ರದ ಮೂಲ ಪಠ್ಯವನ್ನು ಓದಿದರೆ ಹಿಂದುತ್ವ ಪಡೆಗಳ ನಿರ್ಲಜ್ಜ ಅಪ್ರಾಮಾಣಿಕತೆ ಬಯಲಾಗುತ್ತದೆ. ಅದು ಅವರ ಮೂರ್ಖತನ ಮತ್ತು ಶಿವಾಜಿಗೆ ಮಾಡುವ ಬಹಿರಂಗ ಅವಮಾನವಷ್ಟೆ. 1913 ರ ನವಂಬರ್ 14 ರಂದು ವಿ.ಡಿ.ಸಾವರ್ಕರ್ (ಖೈದಿ ನಂ.32778) ಅವರು ಖುದ್ದಾಗಿ ಗೌರ್ನರ್ ಜನರಲ್ ಮಂಡಳಿಯ ಗೃಹ ಸದಸ್ಯರಾಗಿ ಜೈಲಿಗೆ ಭೇಟಿ ನೀಡಿದ್ದ ಸರ್ ರೆಜಿನಾಲ್ಡ್ ಕ್ರಡಕ್ ಅವರಿಗೆ ಸಲ್ಲಿಸಿದ ಮೂಲ ಮನವಿ ಪತ್ರ ಬೇರೆಯೇ ಕತೆ ಹೇಳುತ್ತದೆ: (ಪತ್ರದ ಕೆಲವು ಪ್ರಮುಖ ಸಾಲುಗಳನ್ನು ಮಾತ್ರ ಇಲ್ಲಿ ಓದುಗರ ಗಮನಕ್ಕಾಗಿ ಉಲ್ಲೇಖಿಸಲಾಗುತ್ತಿದೆ.)

“ನಾನು ತಮ್ಮ ಅವಗಾಹನೆಗಾಗಿ ಈ ಕೆಳಗಿನ ಅಂಶಗಳನ್ನು ಸಲ್ಲಿಸಲು ಅವಕಾಶವನ್ನು ಬೇಡುತ್ತೇನೆ:

* 1911 ರಲ್ಲಿ ನಾನು ಇಲ್ಲಿ ಬಂದಾಗ, ನನ್ನ ಪಕ್ಷದ ಇತರ ಖೈದಿಗಳೊಂದಿಗೆ ನನ್ನನ್ನು ಚೀಫ್ ಕಮಿಶನರ್ ಕಛೇರಿಗೆ ಕರೆದೊಯ್ಯಲಾಯಿತು. ನನ್ನನ್ನು ‘ಡಿ’ ಗುಂಪೆಂದು, ಅಂದರೆ ಅಪಾಯಕಾರಿ ಖೈದಿಯೆಂದು ವರ್ಗೀಕರಿಸಲಾಯಿತು; ಇತರ ಅಪರಾಧಿಗಳನ್ನು ‘ಡಿ’ ಗುಂಪೆಂದು ವರ್ಗೀಕರಿಸಲಿಲ್ಲ. ನಂತರ ನಾನು ಪೂರ್ಣ ಆರು ತಿಂಗಳ ಕಾಲ ಏಕಾಂಗಿ ಸೆರೆಯಲ್ಲಿದ್ದೆ. ಇತರ ಅಪರಾಧಿಗಳು ಹಾಗಿರಲಿಲ್ಲ. ಆ ಅವಧಿಯಲ್ಲಿ ನನ್ನ ಕೈಗಳು ರಕ್ತಸಿಕ್ತವಾಗಿದ್ದರೂ ನನ್ನನ್ನು ಕತ್ತವನ್ನು ಕುಟ್ಟುವ ಕೆಲಸಕ್ಕೆ ಹಾಕಿದ್ದರು. ನಂತರ ನನ್ನನ್ನು ಜೈಲಿನ ಕಡು ಕಷ್ಟದ ಕೆಲಸವಾದ ಎಣ್ಣೆ ಗಿರಣಿಗೆ ಕಳಿಸಿದರು. ಈ ಎಲ್ಲಾ ಅವಧಿಯಲ್ಲಿ ನನ್ನ ನಡವಳಿಕೆಯು ಅಸಾಧಾರಣವಾಗಿ ಒಳ್ಳೆಯದಾಗಿದ್ದಾಗ್ಯೂ ಆರು ತಿಂಗಳ ಅಂತ್ಯದಲ್ಲಿ ನನ್ನನ್ನು ಜೈಲಿನಿಂದ ಹೊರಗೆ ಕಳಿಸಲಿಲ್ಲ; ಆದರೆ ನನ್ನ ಜತೆ ಬಂದಿದ್ದ ಇತರ ಅಪರಾಧಿಗಳನ್ನು ಹೊರಗೆ ಕಳಿಸಿದ್ದರು. ಅಂದಿನಿಂದ ಇಂದಿನವರೆಗೂ ನನ್ನ ವರ್ತನೆಯನ್ನು ಸಾಧ್ಯವಾದಷ್ಟೂ ತೃಪ್ತಿಕರವಾಗಿಯೇ ಇಟ್ಟುಕೊಳ್ಳಲು ಯತ್ನಿಸಿದ್ದೇನೆ.
* ನಾನು ಬಡ್ತಿಗಾಗಿ ಅರ್ಜಿ ಸಲ್ಲಿಸಿದಾಗ, ನಾನು ವಿಶೇಷ ವರ್ಗದ ಖೈದಿಯಾದ್ದರಿಂದ ಬಡ್ತಿ ನೀಡಲಾಗದು ಎಂದರು. ನಮ್ಮಲ್ಲಿ ಯಾರಾದರೂ ಒಳ್ಳೆಯ ಆಹಾರ ಬೇಕು ಎಂದಾಗಲೀ ಅಥವಾ ನಮ್ಮನ್ನು ವಿಶೇಷವಾಗಿ ಪರಿಗಣಿಸಿ ಎಂದು ಕೇಳಿಕೊಂಡಾಗಲಾಗಲೀ “ನೀವು ಸಾಮಾನ್ಯ ಖೈದಿಗಳು ಮತ್ತು ಬೇರೆಯವರು ತಿನ್ನುವುದನ್ನೇ ತಿನ್ನಬೇಕು” ಎಂದು ಹೇಳುತ್ತಾರೆ. ಆದ್ದರಿಂದ ಮಹಾಸ್ವಾಮಿ, ಕೇವಲ ವಿಶೇಷ ಅನಾನುಕೂಲಗಳಿಗಾಗಿ ನಮ್ಮನ್ನು ವಿಶೇಷ ಖೈದಿಗಳೆಂದು ವರ್ಗೀಕರಿಸಿದ್ದಾರೆ ಎನ್ನುವುದನ್ನು ಖಾವಂದರಾದ ತಾವು ನೋಡುತ್ತಿದ್ದೀರಿ.
* ನಮ್ಮ ಬಹುಪಾಲು ಸಹಖೈದಿಗಳನ್ನು ಹೊರಗೆ ಕಳಿಸಿದಾಗ, ನಾನು ನನ್ನ ಬಿಡುಗಡೆಗಾಗಿ ಕೋರಿಕೊಂಡೆ. ಕೆಲವರು ಹತ್ತಾರು ಬಾರಿ ಹೊಡೆತ ತಿಂದಿದ್ದವರನ್ನು ಹೊರಗೆ ಕಳಿಸಿದ್ದಾರೆ, ಆದರೆ ನಾನು ಕೇವಲ ಎರಡು ಮೂರು ಬಾರಿ ಮಾತ್ರ ಬೆತ್ತದ ಹೊಡೆತ ತಿಂದಿದ್ದರೂ ಇತರರೊಂದಿಗೆ ನನ್ನನ್ನು ಹೊರಗೆ ಬಿಡಲಿಲ್ಲ. ಏಕೆಂದರೆ ನಾನು ಅವರ ಸಹಖೈದಿಯಂತೆ. ಆದರೆ ಕೊನೆಗೂ ನನ್ನ ಬಿಡುಗಡೆಯ ಆದೇಶವನ್ನು ನೀಡಿದ ಮೇಲೂ, ಆಗತಾನೇ ಹೊರಗಡೆಯ ಕೆಲವು ರಾಜಕೀಯ ಖೈದಿಗಳು ತೊಂದರೆ ಮಾಡಿದಾಗ ನಾನು ಅವರ ಸಹಖೈದಿಯೆಂದು ಅವರ ಜತೆಯಲ್ಲಿ ನನ್ನನ್ನೂ ಸೇರಿಸಿ ಕೂಡಿ ಹಾಕಿದರು.
* ನಾನು ಭಾರತದಲ್ಲೇ ಜೈಲಿನಲ್ಲಿ ಇದ್ದಿದ್ದರೆ ಇಷ್ಟು ಹೊತ್ತಿಗೆಲ್ಲಾ ನನಗೆ ಕ್ಷಮೆ ಸಿಗುತ್ತಿತ್ತು, ಮನೆಗೆ ಪತ್ರ ಬರೆಯಬಹುದಿತ್ತು, ಭೇಟಿಗಳೂ ಆಗಬಹುದಿತ್ತು. ನನಗೆ ಗಡೀಪಾರು ಶಿಕ್ಷೆಯಾಗಿದ್ದರೆ ಅತ್ಯಂತ ಸುಲಭವಾಗಿ ಇಷ್ಟು ಹೊತ್ತಿಗೆಲ್ಲಾ ಈ ಜೈಲಿನಿಂದ ಬಿಡುಗಡೆ ಹೊಂದುತ್ತಿದ್ದೆ, ಅನುಮತಿ ಚೀಟಿಗಾಗಿ ಕಾಯುತ್ತಿರಬಹುದಿತ್ತು. ಆದರೆ ಸದ್ಯದಲ್ಲಿ, ಭಾರತದ ಜೈಲಿನ ಅಥವಾ ಅಪರಾಧಿ ಕಾಲೋನಿಯ ನಿಬಂಧನೆಯ ಅನುಕೂಲವಾಗಲೀ ಸಿಗುತ್ತಿಲ್ಲ; ಎರಡರ ಅನಾನುಕೂಲಗಳನ್ನು ಮಾತ್ರ ನಾನಿಲ್ಲಿ ಅನುಭವಿಸಬೇಕಿದೆ.
* ಆದ್ದರಿಂದ, ಖಾವಂದರಾದ ತಾವು, ಭಾರತದ ಜೈಲಿಗೆ ನನ್ನನ್ನು ಕಳಿಸುವುದರ ಮೂಲಕವೋ ಅಥವಾ ಬೇರೆಲ್ಲಾ ಖೈದಿಗಳಿಗೆ ನೀಡಿದಂತೆ ನನ್ನನ್ನು ಗಡೀಪಾರು ಅಪರಾಧಿ ಎಂದು ಪರಿಗಣಿಸಿಯೋ ಈಗ ನಾನಿರುವ ಈ ಅಸಂಬದ್ಧ ಸನ್ನಿವೇಶದಿಂದ ನನಗೆ ಮುಕ್ತಿ ನೀಡಿ. ಜಗತ್ತಿನ ಸ್ವತಂತ್ರ ದೇಶಗಳ ಯಾವುದೇ ನಾಗರಿಕ ಆಡಳಿತದಲ್ಲಿ ರಾಜಕೀಯ ಖೈದಿಗಳಿಗೆ ನಿರೀಕ್ಷಿಸಬಹುದಾಗಿದ್ದ ಆದ್ಯತೆಯ ಆಧಾರದಲ್ಲಿ ಪರಿಗಣಿಸಿ ಎಂದು ನಾನು ಇಲ್ಲಿ ಬೇಡುತ್ತಿಲ್ಲ. ಆದರೆ ನೀತಿಗೆಟ್ಟ ಹಾಗೂ ರೂಢಿಗತ ಅಪರಾಧಿಗಳಿಗೆ ತೋರಿದ ರಿಯಾಯಿತಿ ಹಾಗೂ ಕೃಪೆಯನ್ನು ನನಗೂ ತೋರಬಹುದಿತ್ತಲ್ಲವೇ? ಸರ್, ಕಡಿಮೆ ಅವಧಿಯ ಖೈದಿಗಳ ವಿಷಯ ಬೇರೆ, ಅದರೆ ನಾನು ಇನ್ನೂ ಐವತ್ತು ವರ್ಷಗಳ ಕಾಲ ಇಲ್ಲಿ ಕೊಳೆಯಬೇಕಲ್ಲ. .. .. ..ನನ್ನನ್ನು ಭಾರತದ ಜೈಲಿಗೆ ಕಳಿಸಿಕೊಡಿ. ಅಲ್ಲಿ ನನಗೆ (ಅ) ಕ್ಷಮಾದಾನ ದೊರಕಬಹುದು; (ಆ) ಪ್ರತಿ ನಾಲ್ಕು ತಿಂಗಳಿಗೊಮ್ಮೆ ನನ್ನ ಬಂಧು ಭಗಿನಿಯರು, ನೆಂಟರಿಷ್ಟರು ಬಂದು ಭೇಟಿಯಾದರೆ ಅದು ನೈತಿಕ ಸ್ಥೈರ್ಯವನ್ನು ನೀಡಬಹುದು; (ಸಿ) ಅದಕ್ಕೂ ಮಿಗಿಲಾಗಿ ನೈತಿಕವಾಗಿ, ಕಾನೂನುಬದ್ಧವಾಗಿ ಅಲ್ಲದಿದ್ದರೂ, 14 ವರ್ಷಗಳಲ್ಲಿ ಕ್ಷಮಾದಾನದ ಹಕ್ಕಿಗೆ ನಾನು ಅರ್ಹನಾಗುತ್ತೇನೆ; (ಡಿ) ಹೆಚ್ಚು ಪತ್ರಗಳು ಹಾಗೂ ಮತ್ತಿತರ ಸಣ್ಣಪುಟ್ಟ ಅನುಕೂಲಗಳು ಸಿಗಬಹುದು. ಅಥವಾ ಭಾರತಕ್ಕೆ ನನ್ನನ್ನು ಕಳಿಸಲು ಸಾಧ್ಯವಾಗುವುದೇ ಇಲ್ಲ ಅಂತಾದರೆ, ಬೇರೆಲ್ಲಾ ಅಪರಾಧಿಗಳಿಗಿರುವಂತೆ, ನನ್ನನ್ನು ಬಿಡುಗಡೆ ಮಾಡಿ ಹೊರಗೆ ಕಳಿಸಿ, ಐದು ವರ್ಷಗಳ ನಂತರ ಭೇಟಿಗೆ, ನಾನು ಹೊರಗೆ ಹೋಗಲು ಅನುಮತಿ ಸಿಗಬಹುದು ಮತ್ತು ನನ್ನ ಕುಟುಂಬದವರನ್ನು ಕರೆಸಬಹುದು. ಇದನ್ನು ಮಂಜೂರು ಮಾಡಿದರೆ, ಇನ್ನು ಒಂದೇ ಒಂದು ಕೊರಗು ಉಳಿಯುತ್ತದೆ, ಅದೆಂದರೆ ನನ್ನ ತಪ್ಪುಗಳಿಗೆ, ಬೇರಾರೂ ಅಲ್ಲ, ನಾನೇ ಹೊಣೆಗಾರ ಎಂದು ಹೇಳಬಹುದು. ಶೋಚನೀಯ ಸಂಗತಿಯೆಂದರೆ, ಪ್ರತಿಯೊಬ್ಬ ಮನುಷ್ಯನಿಗೂ ಅದೊಂದು ಮೂಲಭೂತ ಹಕ್ಕಾಗಿರುವಾಗ, ನಾನು ಅದಕ್ಕಾಗಿ ಗೋಗರೆಯಬೇಕಾಗಿದೆ. . . .ಆದರೆ ನನಗೆ ಹೊರಹೋಗುವ ಅವಕಾಶ ಬಹಳ ಕಡಿಮೆ ಇದೆ.

ಅಂತಿಮವಾಗಿ, 1911 ರಲ್ಲಿ ನಾನು ಸಲ್ಲಿಸಿದ ಕ್ಷಮಾದಾನಕ್ಕಾಗಿನ ಪತ್ರವನ್ನೊಮ್ಮೆ ನೋಡಿ ಮತ್ತು ಮಂಜೂರಾತಿಗಾಗಿ ಭಾರತ ಸರ್ಕಾರಕ್ಕೆ ಕಳಿಸಿಕೊಡಿ ಎಂದು ನೆನಪಿಸಬಹುದೆ? ಭಾರತೀಯ ರಾಜಕೀಯದ ಇತ್ತೀಚಿನ ಬೆಳವಣಿಗೆ ಮತ್ತು ಸರ್ಕಾರದ ಸಮಾಧಾನಕಾರಕ ನೀತಿಯು ಮತ್ತೊಮ್ಮೆ ಸಾಂವಿಧಾನಿಕ ಹಾದಿಯನ್ನು ತೆರೆದಿಟ್ಟಿದೆ. 1906–1907 ರಲ್ಲಿ ಭಾರತದ ಉದ್ವೇಗ ಹಾಗೂ ಹತಾಶೆಯ ಸನ್ನಿವೇಶದಲ್ಲಿ ಶಾಂತಿ ಹಾಗೂ ಪ್ರಗತಿಯ ಹಾದಿಯಿಂದ ನಮ್ಮನ್ನು ವಿಚಲಿತಗೊಳಿಸಿದಂತೆ, ಈಗ ಭಾರತದ ಒಳಿತನ್ನು ಬಯಸುವ ಹಾಗೂ ಹೃದಯದಲ್ಲಿ ಮಾನವೀಯತೆಯನ್ನು ಹೊಂದಿರುವ ಯಾವ ಮನುಷ್ಯನೂ ಕಲ್ಲುಮುಳ್ಳುಗಳ ಹಾದಿಯನ್ನು ಕುರುಡಾಗಿ ತುಳಿಯುವುದಿಲ್ಲ. ಆದ್ದರಿಂದ ಸರ್ಕಾರವು ತಮ್ಮ ಪರಿಪರಿಯ ಉಪಕಾರ ಹಾಗೂ ಅನುಕಂಪದಿಂದ ನನ್ನನ್ನು ಬಿಡುಗಡೆ ಮಾಡಿದರೆ, ಇಂಗ್ಲಿಷ್ ಸರ್ಕಾರಕ್ಕೆ ಸಾಂವಿಧಾನಿಕ ಪ್ರಗತಿಯ ಹಾಗೂ ನಿಷ್ಠೆಯ ಅತ್ಯಂತ ವಿಶ್ವಾಸಾರ್ಹ ಪ್ರಿಪಾದಕನಾಗದೇ ಬೇರೇನೂ ಆಗಲು ಸಾಧ್ಯವಿಲ್ಲ. ಏಕೆಂದರೆ ಅದು ಈ ಪ್ರಗತಿಯ ಬಹುಮುಖ್ಯ ಷರತ್ತಾಗುತ್ತದೆ.

ರಕ್ತಸಂಬಂಧವು ಉಳಿದೆಲ್ಲಾ ಸಂಬಂಧಕ್ಕಿಂತ ಗಟ್ಟಿಯಾಗಿರುತ್ತದೆ ಎಂಬ ನಾಣ್ನುಡಿಯಂತೆ ನಾವು ಇಲ್ಲಿ ಜೈಲಿನಲ್ಲಿ ಇರುವ ತನಕ ಘನತೆವೆತ್ತ ಭಾರತ ಸರ್ಕಾರದ ನಿಷ್ಠಾವಂತ ಪ್ರಜೆಗಳ ನೂರಾರು ಸಾವಿರಾರು ಮನೆಗಳಲ್ಲಿ ನಿಜವಾದ ನೆಮ್ಮದಿ ಹಾಗೂ ಸಂತೋಷ ಇರಲು ಸಾಧ್ಯವಿಲ್ಲ; ನಮ್ಮನ್ನು ಬಿಡುಗಡೆ ಮಾಡಿದ್ದೇ ಆದರೆ ಜನರು ಸರ್ಕಾರಕ್ಕೆ ಸ್ವಪ್ರೇರಣೆಯಿಂದ ಸಂತೋಷ ಹಾಗೂ ಉಪಕಾರ ಸ್ಮರಣೆ ಮಾಡುತ್ತಾರೆ. ದಂಡನೆ ಹಾಗೂ ಪ್ರತೀಕಾರಕ್ಕಿಂತಲೂ ಹೆಚ್ಚಾಗಿ ಅವರಿಗೆ ಕ್ಷಮಿಸುವುದು ಹಾಗೂ ತಿದ್ದುಕೊಳ್ಳುವುದು ಚೆನ್ನಾಗಿ ಗೊತ್ತು. ಅದಕ್ಕಿಂತಲೂ ಹೆಚ್ಚಾಗಿ, ಸಾಂವಿಧಾನಿಕ ನಿಲುವಿಗೆ ನನ್ನ ಪರಿವರ್ತನೆಯು, ಮಾರ್ಗದರ್ಶನಕ್ಕಾಗಿ ನನ್ನನ್ನು ಗುರುವೆಂದು ಪರಿಭಾವಿಸಿದ ಭಾರತದಲ್ಲಿ ಮತ್ತು ವಿದೇಶಗಳಲ್ಲಿ ಹಾದಿ ತಪ್ಪಿರುವ ಯುವಕರೆಲ್ಲರನ್ನು ಹಿಂದಕ್ಕೆ ಕರೆತರುತ್ತದೆ.

ಪುಟ 04 ಕ್ಕೆ

ಮಿಥ್ಯೆ 1: ‘ಸಾವರ್ಕರ್ ಒಬ್ಬ ದಂತಕತೆಯಾದ ಸ್ವಾತಂತ್ರ್ಯ ಹೋರಾಟಗಾರ’!

ಈ ಮಿಥ್ಯೆ ಎಂತಹ ಅರೆ ಸತ್ಯಗಳು ಮತ್ತು ಸುಳ್ಳುಗಳಿಂದ ಕೂಡಿದೆ ಎಂಬುದನ್ನು ಓದಿದ್ದೀರಿ. ತನ್ನ ರಾಜಕೀಯ ಜೀವನದ ಮೊದಲ ಘಟ್ಟದಲ್ಲಿ ಕೋಮು ಸಾಮರಸ್ಯದ ಸ್ವತಂತ್ರ ಭಾರತದ ಆದರ್ಶಕ್ಕಾಗಿ ತುಡಿಯುತ್ತಿದ್ದ ಕ್ರಾಂತಿಕಾರಿಯಾಗಿದ್ದ ಸಾವರ್ಕರ್, ಸೆಲ್ಯುಲರ್ ಜೈಲಿನಲ್ಲಿನ ಕಾರಾಗೃಹವಾಸ ಮತ್ತು ಅಲ್ಲಿನ ಘೋರ ಯಾತನೆ ಕಂಡು ಕ್ಷಮಾಯಾಚನೆಯ ಅರ್ಜಿಯೊಂದಿಗೆ ಆರಂಭಿಸಿದ ಎರಡನೇ ಘಟ್ಟದಲ್ಲಿ ಬ್ರಿಟಿಷ್ ದೊರೆಗಳ ಒಡೆದು ಆಳುವ ಯೋಜನೆಯಲ್ಲಿ ನೆರವಾದರು, ಧರ್ಮದ ಹೆಸರಿನಲ್ಲಿ ದೇಶಾತೀತ ಸ್ವಾಮಿನಿಷ್ಠೆಯನ್ನು ಪ್ರದರ್ಶಿಸಿದರು, ರಾಷ್ಟ್ರೀಯ ಆಂದೋಲನ ಅಂಗೀಕರಿಸಿದ್ದ ತ್ರಿವರ್ಣ ಬಾವುಟವನನು ವಿರೋಧಿಸಿದರು, ಬ್ರಿಟಿಷರ ಬಂಟರಾಗಿದ್ದ ಹಿಂದೂ ರಾಜರುಗಳ ಮಹಾಸಮರ್ಥಕರಾಗಿದ್ದರು ಎಂಬುದನ್ನು ಓದಿದ್ದೀರಿ.

ಮಿಥ್ಯೆ 2: ಸಾವರ್ಕರ್ ತಮ್ಮ ಬದುಕಿನ ಬಹುಭಾಗವನ್ನು ಅಂಡಮಾನಿನ ಸೆಲ್ಯುಲರ್ ಜೈಲಿನಲ್ಲಿ ಕಳೆದರು!

ಸಾವರ್ಕರ್ ನಿಜವಾಗಿಯೂ ಕ್ರಾಂತಿಕಾರಿಯಾಗಿದ್ದಾಗ ಅವರಿಗೆ ಬ್ರಿಟಿಷರು ಎರಡು ವಿಭಿನ್ನ ಪ್ರಕರಣಗಳಲ್ಲಿ ಒಟ್ಟು 50 ವರ್ಷ ಗಡೀಪಾರಿನ ಶಿಕ್ಷೆ ವಿಧಿಸಿದ್ದು ನಿಜ. ಆದರೆ ಅದರಲ್ಲಿ ಅವರು ಅಂಡಮಾನಿನ ಸೆಲ್ಯುಲರ್ ಜೈಲಿನಲ್ಲಿ ಶಿಕ್ಷೆ ಅನುಭವಿಸಿದ್ದು ಕೇವಲ 10 ವರ್ಷ. ಆದರೆ ಸಾವರ್ಕರ್ ಅವರ ಸಮಕಾಲೀನರಲ್ಲಿ ಅವರಂತೆ ಮಾಫಿ ಪಡೆಯದ, ಮಾಫಿ ಕೇಳದ ಕ್ರಾಂತಿಕಾರಿಗಳ ದೊಡ್ಡ ಪಟ್ಟಿಯೇ ಸಿಗುತ್ತದೆ. ಅಂತಹ ಕರಾಳ ಪರಿಸ್ಥಿತಿಯಲ್ಲೂ ಹೋರಾಟ ಮುಂದುವರೆಸಿದ, ಜೈಲಿನಲ್ಲೇ ಅಕಾಲಿಕ ವೃದ್ಧರಾದವರ, ಹುತಾತ್ಮರಾದವರ ದೊಡ್ಡ ಪಟ್ಟಿಯೇ ಇದೆ. ಅಂಥಹ ಒಬ್ಬರ ಹೆಸರೂ ಸಾವರ್ಕರ್ ಭಕ್ತರಿಗೆ ಗೊತ್ತಿರಲು ಸಾಧ್ಯವಿಲ್ಲ. ಅಂಥಹ ಕೆಲವು ಸಾಹಸಿಗಳನ್ನು ಲೇಖಕರು ಈ ಅಧ್ಯಾಯದಲ್ಲಿ ನೆನಪಿಸಿಕೊಂಡಿದ್ದಾರೆ.

ಈಗ ಮೂರನೇ ಮಿಥ್ಯೆಯನ್ನು ನೋಡಿ:

ಸಂಪಾದಕೀಯ

ಸಾಮರಸ್ಯ ಹಾಳುಗೆಡಹುವ ಕೃತ್ಯಗಳನ್ನು ಮಟ್ಟ ಹಾಕಬೇಕು

ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲದ ಬಳಿ ನಡೆಯುತ್ತಿದ್ದ ವಿದ್ಯಾರ್ಥಿಗಳ ಶೈಕ್ಷಣಿಕ ಕಾರ್ಯಾಗಾರದ ಮೇಲೆ ಹಿಂದೂ ಜಾಗರಣಾ ವೇದಿಕೆಯ ಕಾರ್ಯಕರ್ತರು ನಡೆಸಿದ ಧಾಳಿ ಖಂಡನೀಯ. ನುಸ್ರತುಲ್ ಯೆಂಗ್ ಮನ್ಸ್ ಅಸೋಸಿಯೇಷನ್ ಸಂಸ್ಥೆ ಹಮ್ಮಿಕೊಂಡಿದ್ದ ಕಾರ್ಯಾಗಾರದ ಮೇಲಿನ ಧಾಳಿಗೆ ಅಲ್ಲಿ ಧಾರ್ಮಿಕ ಪ್ರವಚನ ನೀಡಲಾಗುತ್ತಿದೆ ಎಂಬುದು ಕೇವಲ ಒಂದು ದುರುದ್ದೇಶಪೂರಿತ ಆರೋಪವಾಗಿದೆ. ಅದು ಎಲ್ಲರಿಗೂ ಮುಕ್ತವಾದ, ಪಾರದರ್ಶಕವಾಗಿದ್ದ ಕಾರ್ಯಕ್ರಮವಾಗಿದ್ದರೂ, ಅಂತಹ ಯಾವುದೂ ಇರಲಿಲ್ಲವಾದರೂ ಶಿಕ್ಷಣದ ಕಲಿಕೆಯನ್ನು ಹಾಳುಗೆಡಹುವ ಉದ್ದೇಶಕ್ಕೆ ಮತೀಯವಾದೀ ಬಣ್ಣ ಹಚ್ಚಲಾಗಿದೆ. ತರಗತಿಗಳಿಗೆ ನುಗ್ಗಿ ದಾಂಧಲೆ ನಡೆಸಿದವರ ಮೇಲೆ ಕ್ರಮ ವಹಿಸುವುದಕ್ಕೆ ಬದಲಾಗಿ ಧಾಳಿಗೊಳಗಾದವರ ಮೇಲೆಯೇ ಮೊಕದ್ದಮೆ ಹೂಡಿರುವ ಪೋಲೀಸರ ಕ್ರಮ ಅತ್ಯಂತ ಆಕ್ಷೇಪಣೆಯ ನಡೆ ಮಾತ್ರವಲ್ಲ, ಮುಂಬರುವ ಅಪಾಯಗಳ ದಿನಗಳ ಸ್ಪಷ್ಟ ನಿದರ್ಶನವಾಗಿದೆ.

ಬಿಜೆಪಿ ಮತ್ತು ಸಂಘ ಪರಿವಾರಗಳು ಮುಂಬರುವ ಚುನಾವಣೆಯಲ್ಲಿ ರಾಜಕೀಯ ಲಾಭವನ್ನು ಹೊಡೆದುಕೊಳ್ಳಲು ಯಾವ ಮಾರ್ಗಕ್ಕೆ ಎಳೆಸಲು ಹಿಂಜರಿಯುತ್ತಿಲ್ಲ ಎನ್ನುವುದು ಪ್ರತಿ ಘಟನೆಗಳಲ್ಲೂ ಸ್ಪಷ್ಟವಾಗಿ ವ್ಯಕ್ತವಾಗುತ್ತಿದೆ. ಗೋ ರಕ್ಷಣೆ, ರಕ್ಷಕರ ಹೆಸರಿನಲ್ಲಿ ನಡೆಸುವ ಕ್ರಿಮಿನಲ್ ಕೃತ್ಯಗಳಿಗೆ ಬಹುದೊಡ್ಡ ಗೌರವವನ್ನು ಕಲ್ಪಿಸಿ ಕೊಡುವ ಪ್ರಯತ್ನಗಳು ಕರಾವಳಿಯ ಉದ್ದಕ್ಕೆ ನಡೆಯುತ್ತಲೇ ಇವೆ. ಅವು ಲವ್ ಜಿಹಾದ್, ಹಿಜಾಬ್, ಸಂಪ್ರದಾಯ ಪಾಲನೆ ಹೀಗೆ ಸಾಮಾಜಿಕ ಸಾಮರಸ್ಯವನ್ನು ನಾಶಗೊಳಿಸುವುದಕ್ಕೆ ಏನೇನೋ ಹೆಸರುಗಳನ್ನು ಹೊಂದಿರುತ್ತವೆ.

ಪದೇ ಪದೇ ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯದವರ ಮೇಲೆ ನಡೆಯುವ ಸಂಘಪರಿವಾರದ ಧಾಳಿಗಳು ಮತೀಯ ದ್ವೇಷ ಹೆಚ್ಚಿಸಿ, ವಿಭಜನೆ ತರುವ ದಿಕ್ಕಿನಲ್ಲಿವೆ. ವಿಟ್ಲದಲ್ಲಿನ ಶಿಕ್ಷಣ ಕಾರ್ಯಾಗಾರದಲ್ಲಿ ಹಾಜರಾದವರು ವಿವಿಧ ಮತಧರ್ಮ, ವಿವಿಧ ಜಾತಿಗಳಿಗೆ ಸೇರಿದವರು. ಇವೇನೇ ಇದ್ದರೂ ಕಲಿಯುವ ಹಂಬಲದ ವಿದ್ಯಾರ್ಥಿಗಳು. ಈ ಶಿಕ್ಷಣದ ಕ್ಯಾಂಪ್ ಗೆ ಬೇಕೋ ಬೇಡವೋ ಎನ್ನುವುದನ್ನು ನಿರ್ಧರಿಸಬೇಕಾದವರು ಅವರು ಹಾಗೂ ಪಾಲಕರು ಮಾತ್ರ. ಸದುದ್ದೇಶದ ಇಂತಹ ಖಾಸಗಿ ಕಾರ್ಯಕ್ರಮವನ್ನು ಹಾಳುಗೆಡಹುವುದು ಅಕ್ಷಮ್ಯ. ಇಲ್ಲಿ ಕಲಿಯಲು ಬಂದಿದ್ದವರು ವಿವಿಧ ಜಾತಿ, ಮತಧರ್ಮಗಳಿಗೆ ಸೇರಿದವರು ಎನ್ನುವುದು ಯುವಪೀಳಿಗೆಗೆ, ಸಮಾಜಕ್ಕೆ ಒಂದು ಸಶಕ್ತ ಸಂದೇಶವಾಗಿದೆ. ಆದರೆ ಅಂತಹ ಸೌಹಾರ್ದತೆ, ಸಾಮರಸ್ಯ ಬಲಗೊಳಿಸುವುದು, ಬೆಳೆಸುವುದನ್ನೇ ಅಪರಾಧವಾಗಿಸಿದ ಪೋಲೀಸ್ ಇಲಾಖೆಯ ಅಸಹನೆಯ ವರ್ತನೆಯೂ ಖಂಡನೀಯ. ದೇಶದ ಸಂವಿಧಾನ, ಕಾನೂನಿಗೆ ನಿಷ್ಠೆ ವ್ಯಕ್ತಪಡಿಸಬೇಕಿರುವವರು ಸಂವಿಧಾನ ವಿರೋಧಿ ಶಕ್ತಿಗಳ ಅಣತಿಯಂತೆ ವರ್ತಿಸುತ್ತಿರುವುದು ಪ್ರಜಾಪಭುತ್ವ ವಿರೋಧಿ ಕೃತ್ಯವಾಗಿದೆ.

ಮತೀಯ ಮೂಲಭೂತವಾದಿಗಳು ಮತ್ತು ಸಂಘಪರಿವಾರ ಶಿಕ್ಷಣ, ಜನಜಾಗೃತಿಯ ಕಡು ವಿರೋಧಿಗಳು ಎನ್ನುವುದು ಹಿಜಾಬ್ ವಿವಾದದ ಪ್ರಕರಣದಲ್ಲಿ ಎದ್ದು ಕಂಡಿತು. ಸರಕಾರವೇ ಈ ವಿವಾದ ವಿಸ್ತರಿಸಿ ಭುಗಿಲೇಳುವಂತೆ ಮಾಡಲು ಸಹಕರಿಸಿತು. ಕರಾವಳಿಯಲ್ಲಿ ಸಂಘಪರಿವಾರ ನಡೆಸುವ ಪುಂಡಾಟಿಕೆಗಳನ್ನು ಮಟ್ಟ ಹಾಕುವ ಬದಲು ಕುಮ್ಮಕ್ಕು ನೀಡುವ, ಸಮರ್ಥಿಸುವ ಕ್ರಮಗಳು ಅವು ಇನ್ನಷ್ಟು ಹೆಚ್ಚಾಗುವಂತೆ ಮಾಡುತ್ತಿವೆ. ಮಾತ್ರವಲ್ಲ, ಸಮಾಜ ವಿರೋಧಿ, ಕ್ರಿಮಿನಲ್ ಗಳಿಗೆ ಧರ್ಮ ರಕ್ಷಣೆಯ ಗೌರವದ ಸ್ಥಾನವನ್ನೂ ತಂದು ಕೊಡುತ್ತಿವೆ. ಎಳೆಯ ಪ್ರಾಯದಲ್ಲೇ ಆ ಮನಸ್ಸುಗಳಿಗೆ ವಿಷ ಉಣಿಸಿದಲ್ಲಿ ನಾಳಿನ ಸಮಾಜ ಹೇಗಿದ್ದೀತು ಎಂದು ಇವರು ಸ್ವಲ್ಪವಾದರೂ ಚಿಂತಿಸಿದ್ದಾರೆಯೇ?

ವಿಟ್ಲದಲ್ಲಿ ನಡೆದ ಪ್ರಕರಣವನ್ನು ಸರಕಾರ, ಪೊಲೀಸ್ ಇಲಾಖೆ ಗಂಭಿರವಾಗಿ ಪರಿಗಣಿಸಿ ದಾಂಧಲೆ ನಡೆಸಿ, ಕಲಿಯುವಿಕೆಯನ್ನು ಹಾಳುಗೆಡಹಿದ ಶಕ್ತಿಗಳ ವಿರುದ್ಧ ಕಠಿಣ ಕಾನೂನು ಕ್ರಮಗಳನ್ನು ತೆಗೆದುಕೊಳ್ಳಬೇಕು. ಕೋಮುವಾದಿಗಳ ಇಂತಹ ಕೃತ್ಯಗಳು ಬಡ, ಸಾಮಾನ್ಯ ಜನರ ಮಕ್ಕಳ ಶಿಕ್ಷಣದ ಉತ್ತಮ ಸಾಧನೆಯನ್ನು ತಡೆಯುವ ವಂಚಕ ಕೃತ್ಯಗಳು ಎಂಬುದನ್ನು ಸಾರ್ವಜನಿಕರೂ ಅರ್ಥ ಮಾಡಿಕೊಳ್ಳಬೇಕು. ಅವರ ಹುನ್ನಾರಗಳನ್ನು ಸೋಲಿಸಿ ಶಾಂತಿ, ಸಾಮರಸ್ಯ ಬಲಗೊಳಿಸಬೇಕು. ಪ್ರತಿಗಾಮಿಗಳಿಗೆ ಬುದ್ಧಿ ಕಲಿಸಬೇಕು.

ಬಿ.ಎಸ್.ವೈ: ವಿದಾಯ, ವಿಷಾದ ಆಡದೇ ಉಳಿದ ಮಾತುಗಳು

ಈ ವಾರ

ಎಸ್.ವೈ. ಗುರುಶಾಂತ್

'ನಾನು ಮತ್ತೆ ಸದನಕ್ಕೆ ಬರುವುದಿಲ್ಲ. ಇದೇ ನನ್ನ ಕೊನೆಯ ಅಧಿವೇಶನ. ಮುಂದಿನ ಚುನಾವಣೆಯಲ್ಲಿ ನಾನು ಸ್ಪರ್ಧಿಸುವುದಿಲ್ಲ' ಗದ್ಗದಿತ ಕಂಠದಲ್ಲಿ ಹೀಗೆ ಹೇಳುತ್ತಲೇ ಭಾವುಕರಾದರು. ಬಿ.ಎಸ್.ವೈ. ಮಾತನಾಡಲು ಸದನದಲ್ಲಿ ಎದ್ದು ನಿಂತದ್ದು ಬಸವರಾಜ್ ಬೊಮ್ಮಾಯಿ ಮಂಡಿಸಿದ ಬಜೆಟ್ಟಿನ ಮೇಲಿನ ಚರ್ಚೆಗೆಂದು. ಆದರದು ನೆಪವಾಗಿತ್ತು. ಅವರ ಮಾತುಗಳು ಪೂರ್ತಿಯಾಗಿ ವಿದಾಯದ ದಾಟಿಯಲ್ಲಿ ಸಾಗಿದ್ದವು. ಮೇ ತಿಂಗಳಲ್ಲಿ ಹೊಸ ವಿಧಾನಸಭೆ ಆಯ್ಕೆಯಾಗಬೇಕು. ಅದೇನಿದ್ದರೂ ಮಾರ್ಚ್ ಕೊನೆ ಅಥವಾ ಏಪ್ರಿಲ್ ನಲ್ಲಿ ಚುನಾವಣಾ ಪ್ರಕ್ರಿಯೆಗೆ ಚಾಲನೆ ಸಿಗಲೇಬೇಕು. ಅಂದರೆ ಈ ಬಜೆಟ್ ಅಧಿವೇಶನವೇ ಈಗಿನ ವಿಧಾನಸಭೆಯ ಕೊನೆಯ ಅಧಿವೇಶನ. 1970ರ ದಶಕದಲ್ಲಿ ಆರಂಭಗೊಂಡ ಬೂಕನಕೆರೆ ಸಿದ್ದಲಿಂಗಪ್ಪ ಯಡಿಯೂರಪ್ಪ ಅವರ ಶಾಸಕಾಂಗದ ಪಯಣ ಬಹುತೇಕ ಇಲ್ಲಿಗೆ ಕೊನೆಯಾಗಿದೆ. ಬಿಜೆಪಿ ವರಿಷ್ಠರು ಯಡಿಯೂರಪ್ಪನವರನ್ನು ಮುಂದೆ ಯಾವುದೇ ಚುನಾವಣೆಗಳಲ್ಲಿ ಸ್ಪರ್ಧಿಸಬಾರದೆಂದು ಸ್ಪಷ್ಟವಾದ ನಿರ್ಬಂಧವನ್ನು ವಿಧಿಸಿದ್ದಾರೆ. ಹಾಗೆ ನೋಡಿದರೆ ನಾಲ್ಕನೆಯ ಬಾರಿ ಮುಖ್ಯಮಂತ್ರಿ ಆಗಿ ಪ್ರಮಾಣ ವಚನ ಸ್ವೀಕರಿಸಿದ್ದು ಯಡಿಯೂರಪ್ಪನವರ ಹಠದಿಂದಲೇ. ವರ್ಷದ ಗಡುವಿನ ಒಪ್ಪಂದ ದಾಟಿದ ಮೇಲೆಯೂ ಮುಂದುವರಿದಿದ್ದು ಹೈಕಮಾಂಡ್ ಗೆ ಕೊಟ್ಟ ಪ್ರತಿರೋಧದಿಂದಲೇ. ಬಳಿಕ ಹೈ.ಬಲವಂತವಾಗಿ ರಾಜೀನಾಮೆ ಕೊಡಿಸಿದ ನಂತರ ಅವರು ಸದನವನ್ನು ಉದ್ದೇಶಿಸಿ ಮಾಡಿದ ದುಃಖದಾಯಕ ಭಾಷಣವೇ ವಿದಾಯಗಳ ಮಾತಾಗಿತ್ತು. ಆದರೂ ಒಂದಿಷ್ಟು ಆಶಾಭಾವನೆ ಇರಿಸಿಕೊಂಡಿದ್ದ ಬಿ.ಎಸ್.ವೈ ಗೆ ಬಿ.ಜೆ.ಪಿ– ಆರ್.ಎಸ್.ಎಸ್. ಗಳ ಹೈಕಮಾಂಡ್ ಪೂರ್ಣ ವಿರಾಮವನ್ನು ಘೋಷಿಸುವಂತೆ ಮಾಡಿದವು. ಹೀಗಾಗಿ ಮತ್ತೆಂದೂ ವಿಧಾನಸಭೆಗೆ ಪ್ರವೇಶಿಸಲಾರೆ ಎನ್ನುವ ಖಾತ್ರಿಯ ಆ ದುಃಖ, ನೋವು ಅವರ ಕಂಠದಿಂದ ಹೊರಟ ಶಬ್ದ ಶಬ್ದಗಳಲ್ಲಿ ಯಾತನೆ, ಹತಾಶೆ ಮಡುಗಟ್ಟಿದ್ದು ಒಸಗಿತು.

'ಬಿಜೆಪಿ ನನ್ನನ್ನು ಕಡೆಗಣಿಸಿಲ್ಲ. ನಾನು ಸುಮ್ಮನೆ ಕೂಡುವುದಿಲ್ಲ. ಮತ್ತೆ ಬಿಜೆಪಿ ಅಧಿಕಾರಕ್ಕೆ ತರಲು ನಿರಂತರ ಶ್ರಮಿಸುವೆ. ರಾಜ್ಯದಾದ್ಯಂತ ಓಡಾಡುವೆ. ಈ ಸರಕಾರ ಯಾರೂ ಕೊಡದಷ್ಟು ಯೋಜನೆಗಳನ್ನು ಕೊಟ್ಟಿದೆ. ಮೋದಿಯಂತವರು ಪ್ರಧಾನಿಯಾಗಿರುವುದು ನಮ್ಮ ಪುಣ್ಯ, ಇತ್ಯಾದಿ ಮಾತುಗಳು ಹೊರ ಬಂದವು ನಿಜ. ಆದರೆ ಆ ಯಾವ ಮಾತುಗಳಲ್ಲಿಯೂ ಜೀವ ಇರಲಿಲ್ಲ. ಸತ್ವ ಕಳೆದುಕೊಂಡ ಸತ್ತ ಮಾತುಗಳ ಅರ್ತನಾದದಂತೆ ಕೇಳಿಸುತ್ತಿತ್ತು.

1970 ರಲ್ಲಿ ಆರ್.ಎಸ್.ಎಸ್.ನ ಶಿಕಾರಿಪುರದ ಕಾರ್ಯವಾಹ, ಪುರಸಭೆಯ ಸದಸ್ಯ ಬಳಿಕ ಅದ್ಯಕ್ಷ, 1975 ರಲ್ಲಿ ತುರ್ತು ಪರಿಸ್ಥಿತಿ ವಿರೋಧಿಸಿದ್ದಕ್ಕೆ ಜೈಲುವಾಸ, 1983 ರಲ್ಲಿ ಶಾಸಕ ನಾಗಿ ಹೀಗೆ ಹಂತ ಹಂತವಾಗಿ ಸಾಗಿ ಬಂದವರು.

'ನನ್ನನ್ನು ಅಧಿಕಾರ ಬಿಡವಂತೆ ಯಾರೂ ಒತ್ತಾಯಿಸಲಿಲ್ಲ. ನಾನಾಗೆ ರಾಜೀನಾಮೆ ಕೊಟ್ಟು ಬಂದೆ. ನನಗೆ ಅತಿ ಹೆಚ್ಚಿನ ಅವಕಾಶಗಳನ್ನು ಕಲ್ಪಿಸಿ ಕೊಟ್ಟಿರುವುದು ಬಿಜೆಪಿ 'ಎಂದೇನೋ ಯಡಿಯೂರಪ್ಪ ಹೇಳಿದರು. ಆದರೆ ಅಂದು ರಾಜೀನಾಮೆ ಕೊಡಲು ತೀವ್ರ ಒತ್ತಡ ಹೇರಿದ್ದ ಹೈಕಮಾಂಡ್ ಎದುರಿನಲ್ಲಿ 'ನಾನು ರಾಜೀನಾಮೆ ಕೊಡುವ ಪ್ರಶ್ನೆಯೇ ಇಲ್ಲ' ಎಂದು ಸವಾಲಿನ ಮಾತುಗಳನ್ನು ಅಂದು ಬಿ.ಎಸ್. ವೈ. ಹೇಳಿದ್ದಾಕೆ? ಬಿ.ಎಸ್.ವೈ ಒಬ್ಬ ಹಿರಿಯ ನಾಯಕ, ಅವರಿಲ್ಲದ ಪಕ್ಷ ದುರ್ಬಲ ಎನ್ನುವುದು ಗೊತ್ತಿದ್ದರೂ ಬಿಜೆಪಿ ರಾಜ್ಯ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ 'ಬಿ.ಎಸ್.ವೈ. ಅನಿವಾರ್ಯ ಅಲ್ಲ' ಎಂದು ಅಂದಿದ್ದಾಕೆ ಎನ್ನುವ ಪ್ರಶ್ನೆಗಳು ಈ ಹೊತ್ತಿನಲ್ಲಿ ನೆನಪಾಗುತ್ತವೆ.

ಅಂತೂ ಯಡಿಯೂರಪ್ಪನವರು ಬಿಜೆಪಿ ಕೊಟ್ಟಿರುವ 'ಗೌರವ ನೆನೆದು ಈ ಮಾತುಗಳನ್ನು ಆಡುತ್ತಾ, ಸಿದ್ದರಾಮಯ್ಯನವರಿಗೆ ಚುಚ್ಚುತ್ತಾ (ಇವರ ನಡುವೆ ಒಳ ಒಪ್ಪಂದಗಳಿವೆ ಎನ್ನುವುದನ್ನು ನಿರಾಕರಿಸುವಂತೆ) ಸೂಚ್ಯಾರ್ಥವಾಗಿ ಹಿತೋಪದೇಶ ಮಾಡುತ್ತಾ ಒಂದಿಷ್ಟು ಮಾತನಾಡಿದರು ನಿಜ. ಆದರೆ ಯಡಿಯೂರಪ್ಪ ನವರ ಅಂತಿಮ ವಿದಾಯದ ಮಾತುಗಳನ್ನು ಆಡುವಾಗ ಅಬ್ಬರಿಸುತ್ತಿದ್ದ ಅವರಿಲ್ಲದೇ ಹೋಗುವ ಬಗ್ಗೆ ಬಹುತೇಕರಿಗೆ ಒಂದು ರೀತಿಯ ವಿಷಾದ, ಮ್ಲಾನತೆ ಕಾಡಿತು. ಅವರ ಬಲಪ್ರತಿಗಾಮಿ ಸಿದ್ಧಾಂತ, ವೈರುದ್ಯಾತ್ಮಕ ವ್ಯಕ್ತಿತ್ವ, ಕಳಂಕ, ದೌರ್ಬಲ್ಯಗಳ ಬಳಿಕವೂ ಕರ್ನಾಟಕ ಕಂಡ ಮಹತ್ವದ ಒಬ್ಬ ನಾಯಕ ಯಡಿಯೂರಪ್ಪ ಎನ್ನುವುದರಲ್ಲಿ ಅನುಮಾನವಿಲ್ಲ. ಅಂದರೆ ಕರ್ನಾಟಕದ ರಾಜಕಾರಣದಲ್ಲಿ ತಳ್ಳಿ ಹಾಕುವ ವ್ಯಕ್ತಿ ಅಲ್ಲ.

ಈ ಕಾಲಘಟ್ಟದಲ್ಲಿ ರಾಜ್ಯಗಳಲ್ಲಿ ಯಡಿಯೂರಪ್ಪನಂತಹ ಜನನಾಯಕರು ಅವಶ್ಯಕತೆಯೇ ಇಲ್ಲ ಎಂದೇ ಬಿಜೆಪಿ ಭಾವಿಸಿದೆ. ಏಕಸ್ವಾಮ್ಯ ಬಂಡವಾಳ, ರಾಜಕಾರಣದ ಏಕಸ್ವಾಮ್ಯದ ಪ್ರಕ್ರಿಯೆಯಲ್ಲಿ ರಾಜ್ಯ ಮಟ್ಟದಲ್ಲಿ ಅಂಥವರನ್ನು ಎಲ್ಲಿಯೂ ಇಲ್ಲವಾಗಿಸುವ ರಾಜಕಾರಣವೇ ರಾಷ್ಟ್ರೀಯ ಮಟ್ಟದಲ್ಲಿ ಮೇಲುಗೈ ಸಾಧಿಸುತ್ತಿದೆ.

ಯಡಿಯೂರಪ್ಪನವರದು ದೀರ್ಘ ಪಯಣ. ಆರ್.ಎಸ್.ಎಸ್.ನ ಕಟ್ಟಾಳುವಾಗಿದ್ದ ಬಿ.ಎಸ್.ವೈ. ಅಧಿಕಾರ ಅನುಭವಿಸಲು ನಾಲ್ಕು ದಶಕಗಳನ್ನೇ ಕಾಯಯಬೇಕಾಯಿತು. ರಾಜ್ಯದಲ್ಲಿ ಬಿಜೆಪಿಗೆ ಅಧಿಕಾರ ಸಿಗುವುದು ಅಸಾಧ್ಯ ಎನ್ನುವಾಗ ಹತಾಶೆ ಕಾಡಿತು. ಕನಿಷ್ಠ ಮಂತ್ರಿಯನ್ನಾದರೂ ಮಾಡಿ ಎಂದು ಜೆಡಿಎಸ್ ನಂತಹ ಪಕ್ಷದ ನಾಯಕರಿಗೆ ಗೋಗರೆದರಂತೆ.ಟ್ವೆಂಟಿ–ಟ್ವೆಂಟಿ ಸರಕಾರದಲ್ಲಿ ಉಪಮುಖ್ಯಮಂತ್ರಿಯಾದ ಬಿ.ಎಸ್.ವೈ. ಮುಂದೆ ಸಂಘ ಪರಿವಾರ ರೂಪಿಸಿದ ತಂತ್ರದಲ್ಲಿ ಮುಖ್ಯಮಂತ್ರಿಯಾದದ್ದು, ಭ್ರಷ್ಟಾಚಾರದ ಹಗರಣಗಳಲ್ಲಿ ಜೈಲು ಸೇರಿದ್ದು, ಬಿದ್ದಿದ್ದು ಎದ್ದಿದ್ದು ಎಲ್ಲವೂ ರಾಜಕೀಯ ಆಟದ ಅಂಗಳದಲ್ಲಿವೆ. ಹಾಗೆ ನೋಡಿದರೆ, ಯಡಿಯೂರಪ್ಪನವರು ಮುಖ್ಯಮಂತ್ರಿಯಾದ ಕಾಲಘಟ್ಟ, ಬಿಜೆಪಿಯ ಅಧಿಕಾರದ ಹಪಾಹಪಿ ರಾಜ್ಯದ ಇಡೀ ರಾಜಕೀಯ ಭಾಷೆ, ನಡವಳಿಕೆ, ಸಂಸ್ಕೃತಿಗಳನ್ನೇ ಬುಡಮೇಲು ಮಾಡಿತು. ಗಣಿಗಳ್ಳರ 'ಪ್ರತಿಷ್ಠಿತ' ಪ್ರವೇಶ ರಾಜಕಾರಣದಲ್ಲಿ ಮೇಲುಗೈ ಸಾಧಿಸಿತು. ಕಬ್ಬಿಣ ಗಣಿಗಾರಿಕೆಯಲ್ಲಿ ಖನಿಜಗಳ ಅಪಾರ ನೈಸರ್ಗಿಕ ಸಂಪನ್ಮೂಲದ ಲೂಟಿಯಾಯಿತು ಅನೈತಿಕ 'ಆಪರೇಷನ್ ಕ– ಮಲ' ಎನ್ನುವುದು ರಾಜಕೀಯ ತಂತ್ರಗಾರಿಕೆಯ ಹೆಚ್ಚುಗಾರಿಕೆ ಯಾಗಿ, ಒಂದು ಚಾಣಕ್ಯ ಮೌಲ್ಯ ಎಂಬಂತೆ ಬಿಂಬಿತವಾಯಿತು. ಹಣದ ಆಮಿಷ, ಅಧಿಕಾರ ಲಾಲಸೆ, ನೈತಿಕ ಅದಃಪತನ, ಬ್ರಹ್ಮಾಂಡ ಭ್ರಷ್ಟಾಚಾರ ತಾಂಡವಾಡಿತು. ಯಡಿಯೂರಪ್ಪನವರು ನಾಯಕನೆಂದು ಗುರುತಿಸಲ್ಪಟ್ಟಿದ್ದರೂ ಪುಟ 06 ಕ್ಕೆ

ಕಾಂ. ಕಾಮಣ್ಣ ರೈ ಸ್ಮಾರಕ ಡಿವೈಎಫ್ಐ ಕಟ್ಟಡ ಉದ್ಘಾಟನೆ



ವರದಿ: ವಾ.ಉ.

ನಾವು ಕೋಮುವಾದಿ ಶಕ್ತಿಗಳನ್ನು ದೂರವಿಟ್ಟು ಅಭಿವೃದ್ಧಿ ಹಾಗೂ ಸೌಹಾರ್ದ ರಾಷ್ಟ್ರವನ್ನು ಕಟ್ಟೋಣ ಎಂದು ರಾಜ್ಯಸಭೆ ಸದಸ್ಯ ಹಾಗೂ ಡಿವೈಎಫ್ಐ ಅಖಿಲ ಭಾರತ ಅಧ್ಯಕ್ಷ ಕಾಂ. ಎ.ಎ. ರಹೀಂ ಕರೆ ನೀಡಿದ್ದಾರೆ.



ಫೆ. 19ರಂದು ಹರೇಕಳದಲ್ಲಿ ನಿರ್ಮಾಣಗೊಂಡ ಹರೇಕಳ ಕಾಂ. ಕಾಮಣ್ಣ ರೈ ಸ್ಮಾರಕ ಡಿವೈಎಫ್ಐ ಕಟ್ಟಡದ ಉದ್ಘಾಟನಾ ಸಮಾರಂಭ ಹಾಗೂ ಯುವಜನ ಸಮಾವೇಶದಲ್ಲಿ ಅವರು ಮಾತನಾಡುತ್ತಿದ್ದರು.

ಜಾತಿ, ಧರ್ಮ, ಹಿಜಾಬ್ ವಿಷಯ ಸೇರಿದಂತೆ ಇಂದು ಅನೇಕ ವಿಷಯಗಳಲ್ಲಿ ವಿವಾದ ಸೃಷ್ಟಿಯಾಗುತ್ತಿದೆ. ಇದೆಲ್ಲವನ್ನೂ ಅಧಿಕಾರಕ್ಕಾಗಿ ಮಾಡುತ್ತಿದ್ದಾರೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಇವೆಲ್ಲವನ್ನು ಬಿಟ್ಟು ಭಾರತವು ಸೌಹಾರ್ದ ಹಾಗೂ ಅಭಿವೃದ್ಧಿಯ ರಾಷ್ಟ್ರವಾಗಬೇಕು ಎನ್ನುವುದು ಡಿವೈಎಫ್ಐ ಮುಖ್ಯ ಗುರಿಯಾಗಿದೆ ಎಂದು ರಹೀಂ ಹೇಳಿದರು.

ಡಿವೈಎಫ್ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಮಾತನಾಡಿ, ಹರೇಕಳದಲ್ಲಿ ಕಾಮಣ್ಣ ರೈಯವರ ಕಟ್ಟಡ ಎದ್ದು ನಿಂತಿರುವುದು ಸಮಾಜಪರ, ತ್ಯಾಗಮಯ ಬದ್ಧತೆಯ ಹೋರಾಟಕ್ಕೆ ಸಾಕ್ಷಿಯಾಗಿದೆ ಹಾಗೂ ಅವರ ನೆನಪನ್ನು ಶಾಶ್ವತವಾಗಿಸಿದೆ ಎಂದರು.

ಕಾರ್ಯಕ್ರಮದಲ್ಲಿ ಡಿವೈಎಫ್ಐ ಜಿಲ್ಲಾಧ್ಯಕ್ಷ ಬಿ.ಕೆ. ಇಮ್ತಿಯಾಜ್, ಉಳ್ಳಾಲ ವಲಯ ಅಧ್ಯಕ್ಷ ರಫೀಕ್ ಹರೇಕಳ, ಡಿವೈಎಫ್ಐ ಜಿಲ್ಲಾ ಉಪಾಧ್ಯಕ್ಷ ಜೀವನ್ ಕುತ್ತಾರ್, ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಸುನಿಲ್ ತೇವುಲ, ಯುವ ವಕೀಲ ನಿತಿನ್ ಕುತ್ತಾರ್, ಜೊತೆ ಕಾರ್ಯದರ್ಶಿ ರಝಾಕ್ ಮೊಂಟೆಪದವು, ಡಿವೈಎಫ್ಐ ಹರೇಕಳ ಗ್ರಾಮ ಸಮಿತಿ ಅಧ್ಯಕ್ಷ ಬಶೀರ್ ಲಚ್ಚಿಲ್ ಮತ್ತಿತರರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಹರೇಕಳ ಪದ್ಮಶ್ರೀ ಹಾಜಬ್ಬರವರನ್ನು ಸನ್ಮಾನಿಸಲಾಯಿತು. ನಿತಿನ್ ಕುತ್ತಾರ್ ಸ್ವಾಗತಿಸಿದರು. ರಿಝ್ವಾನ್ ಖಂಡಿಗ ಕಾರ್ಯಕ್ರಮ ನಿರೂಪಿಸಿದರು. ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್ ವಂದಿಸಿದರು.

ಮಿಥ್ಯೆ 3– ಸಾವರ್ಕರ್ ಅವರ ಕ್ಷಮಾಯಾಚನೆಯ ಅರ್ಜಿಗಳು ಸ್ವಾತಂತ್ರ್ಯಗಳಿಕೆಗೆ ಒಂದು ತಂತ್ರವಷ್ಟೆ!...

ಪುಟ 2 ರಿಂದ

ಸರಕಾರ ಬಯಸುವ ಯಾವುದೇ ಸ್ಥಾನದಲ್ಲಿ ನಾನು ಅದಕ್ಕೆ ಸೇವೆ ಸಲ್ಲಿಸಲು ಸಿದ್ಧನಿದ್ದೇನೆ, ಏಕೆಂದರೆ ನನ್ನ ಪರಿವರ್ತನೆಯು ಆತ್ಮಸಾಕ್ಷಿಗೆ ಅನುಗುಣವಾಗಿದೆ ಮತ್ತು ನನ್ನ ಭವಿಷ್ಯದ ನಡವಳಿಕೆಯೂ ಅದಕ್ಕೆ ಅನುಗುಣವಾಗಿಯೇ ಇರುತ್ತದೆ ಎಂಬ ವಿಶ್ವಾಸವಿದೆ. ಬಿಡುಗಡೆ ಮಾಡುವ ಬದಲು ನನ್ನನ್ನು ಜೈಲಿನಲ್ಲಿ ಇಡುವುದರಿಂದ ಏನೂ ಪ್ರಯೋಜನವಿಲ್ಲ. ಬಲಶಾಲಿಗಳು ಮಾತ್ರವೇ ಕರುಣಾಮಯಿಯಾಗಿರಲು ಸಾಧ್ಯ, ಆದ್ದರಿಂದ ದುರ್ಮಾರ್ಗದಿಂದ ಸನ್ಮಾರ್ಗಕ್ಕೆ ಹಿಂತಿರುಗಿದ ಮಗ ಸರ್ಕಾರದ ಪೋಷಕ ಮನೆ ಬಾಗಿಲಿಗೆ ಹಿಂತಿರುಗದೆ ಬೇರೆಲ್ಲಿಗೆ ಹೋಗುತ್ತಾನೆ? ಘನತೆವೆತ್ತ ತಾವುಗಳು ಈ ಅಂಶಗಳನ್ನು ದಯವಿಟ್ಟು ಪರಿಗಣನೆಗೆ ತೆಗೆದುಕೊಳ್ಳುತ್ತೀರೆಂದು ನಂಬಿದ್ದೇನೆ.

ಕ್ಷಮಾಯಾಚನಾ ಪತ್ರಗಳ ಸಲ್ಲಿಕೆ ಏನೂ ತಪ್ಪಲ್ಲ

ಸೆಲ್ಯುಲರ್ ಜೈಲಿನಲ್ಲಿದ್ದ ಖೈದಿಗಳು ಬ್ರಿಟಿಷ್ ಅಧಿಕಾರಿಗಳಿಗೆ ಕ್ಷಮಾ ಪತ್ರ ಸಲ್ಲಿಸುವುದರಲ್ಲಿ ಯಾವುದೇ ತಪ್ಪಿಲ್ಲ ಎನ್ನುವುದು ನಿಜವೇ ಸರಿ. ಅದು ಜೈಲಿನಲ್ಲಿರುವ ಅಪರಾಧಿಗಳಿಗೆ ಲಭ್ಯವಿರುವ ಬಹಳ ಮುಖ್ಯವಾದೊಂದು ಕಾನೂನುಬದ್ಧ ಹಕ್ಕು. ಸಾವರ್ಕರ್ ಜತೆಯಲ್ಲಿ ಇನ್ನೂ ಇತರ ಕ್ರಾಂತಿಕಾರಿಗಳು ಕೂಡ ಕ್ಷಮಾಯಾಚನಾ ಪತ್ರ ಸಲ್ಲಿಸಿದ್ದಾರೆ. ಅವರು ಹೃಷಿಕೇಶ್ ಕಾಂಜಿಲಾಲ್, ಬರೀಂದ್ರ ಕುಮಾರ್ ಘೋಷ್ ಮತ್ತು ನಂದಗೋಪಾಲ್. ಆದರೆ ಅವರಲ್ಲಿ ಸಾವರ್ಕರ್ ಮತ್ತು ಬರೀಂದ್ರ ಕುಮಾರ್ ಘೋಷ್ (ಅರೊಬಿಂದೋ ಘೋಷ್ ಅವರ ಸೋದರ) ಮಾತ್ರವೇ ತಮ್ಮ ವೈಯಕ್ತಿಕ ಸ್ವಾತಂತ್ರ್ಯ ಗಳಿಸಲು ಹಿಂದಿನ ಕ್ರಾಂತಿಕಾರಿ ಬದುಕನ್ನು ತೊರೆಯುವುದಾಗಿ ಮನವಿ ಸಲ್ಲಿಸಿದ್ದರು. ಸಾವರ್ಕರ್ ಅವರಂತೆ ಬರೀಂದ್ರ ಅವರ ಮನವಿ ಪತ್ರ ಹೀಗಿತ್ತು:

ಸೌಜನ್ಯಶೀಲರಾದ ತಾವು ದಯಾಳುಗಳಾದ ಘನತೆವೆತ್ತ ಲಾರ್ಡ್ ಹಾರ್ಡಿಂಜ್ ಸರ್ಕಾರದ ಪರಿಗಣನೆಗಾಗಿ ನನ್ನ ಈ ವಿನಯಪೂರ್ವಕ ಮನವಿ ಪತ್ರವನ್ನು ಅತ್ಯಂತ ಗೌರವ ಹಾಗೂ ವಿನೀತನಾಗಿ ಸಲ್ಲಿಸುತ್ತಿದ್ದೇನೆ . . . ನಾನು ದೈನ್ಯದಿಂದ ಬೇಡುವುದೇನೆಂದರೆ 20 ವರ್ಷಗಳ ಈ ಗಡೀಪಾರು ಶಿಕ್ಷೆಯು ನನ್ನ ಪಾಲಿಗೆ ಒಂದು ಮರಣ ಶಿಕ್ಷೆಯೇ ಆಗಿದೆ . . . ಇಲ್ಲಿ ಮತ್ತು ಅಲಿಪುರ್ ಜೈಲಿನಲ್ಲಿನ ಅತ್ಯಂತ ತೀವ್ರವಾದ ಕಟ್ಟುನಿಟ್ಟಿನ ಬದುಕನ್ನು ಅನುಭವಿಸಿದ್ದೇನೆ, ತಮ್ಮಂತಹ ಘನತೆವೆತ್ತ ದಯಾಳುಗಳಲ್ಲದೇ ಬೇರಾವ ಜೈಲು ಅಧಿಕಾರಿಗಳು ಎಷ್ಟೇ ಹೃದಯವಂತ ಹಾಗೂ ದಯಾವಂತರಾಗಿದ್ದರೂ ಸಹ ನನ್ನನ್ನು ಉಳಿಸಲು ಸಾಧ್ಯವಿಲ್ಲ. ಅತ್ಯಂತ ದಯಾಳುಗಳಾದ ಮಹಾಪ್ರಭುಗಳ ಪಟ್ಟಾಭಿಷೇಕದ ಸಂದರ್ಭದಲ್ಲಿ ನಮಗೆ ಕ್ಷಮೆ ದೊರಕಬಹುದೆಂಬ ನಮ್ಮ ಹುಚ್ಚು ಭರವಸೆ ಕೈಗೂಡಲೇ ಇಲ್ಲ. ಸತ್ತುಹೋಗಿದ್ದ ನಮ್ಮ ಭರವಸೆ ತಮ್ಮಂಥಹ ಗೌರವಾನ್ವಿತ ಅತಿಥಿಗಳ ಉಪಸ್ಥಿತಿಯಲ್ಲಿ ಮತ್ತೆ ಈಗ ಜೀವ ತಳೆದಿದೆ. ಸರ್ವಾಧಿಕಾರಿ ರಷ್ಯಾ ಸರ್ಕಾರವು ತನ್ನ ರಾಜಕೀಯ ಅಪರಾಧಿಗಳಿಗೆ ಮತ್ತೆ ಮತ್ತೆ ರಾಜಕೀಯ ಕ್ಷಮಾದಾನವನ್ನು ನೀಡಿದೆ, ನಾಗರೀಕತೆ ಹಾಗೂ ಸಂಸ್ಕೃತಿಯ ನೇತಾರರಾಗಿರುವ ನಮ್ಮ ಸರ್ಕಾರವು ಕೆಲವು ಹಾದಿತಪ್ಪಿದ ಯುವಜನರ ಹಿಂದಿನ ಅವಿವೇಕತನವನ್ನು ಮನ್ನಿಸುತ್ತದೆ ಎಂಬ ದೃಢವಿಶ್ವಾಸ ನಮಗಿದೆ. ಘನತೆವೆತ್ತ ಮಹಾಪ್ರಭುಗಳು ನಾನು ಎಲ್ಲಿರಬೇಕೆಂದು ಬಯಸುತ್ತಾರೋ ಹಾಗೆ ಎಲ್ಲಾ ಚಳವಳಿಗಳಿಂದ ದೂರವಾಗಿರಲು ಮತ್ತು ಲೇಷಮಾತ್ರದ ಆಶಯಗಳಿಗೂ ವಿಧೇಯನಾಗಿರಲು ನಾನಂತೂ ಬದ್ಧನಾಗಿರುತ್ತೇನೆ. ಇದಕ್ಕಿಂತಲೂ ಹೆಚ್ಚೇನನ್ನೂ ಈ ಮನವಿ ಪತ್ರದಲ್ಲಿ ನಾನು ಹೇಳಲು ಸಾಧ್ಯವಿಲ್ಲ.

ನಾವು ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ ಬರೀಂದ್ರ ಘೋಷ್ ಅವರ ಅರ್ಜಿ ಕೂಡ ವೈಯಕ್ತಿಕ ಕ್ಷಮಾ ಪತ್ರವಾಗಿದ್ದರೂ ಸಹ ಅದನ್ನು ಸಾವರ್ಕರ್ ಅವರ ಈ ಕ್ಷಮಾ ಪತ್ರಕ್ಕೆ ಹೋಲಿಸಲು ಸಾಧ್ಯವಿಲ್ಲ ಎನ್ನುವುದನ್ನು ನಾವು ಈಗಾಗಲೇ ನೋಡಿದ್ದೇವೆ. ಏಕೆಂದರೆ ಸಾವರ್ಕರ್ ಅವರ ಶರಣಾಗತಿಯು ಸಂಪೂರ್ಣವಾಗಿದೆ ಮತ್ತು ಎಲ್ಲಾ ಅಂಶಗಳನ್ನು ಒಳಗೊಂಡು ಸಮಗ್ರವಾಗಿದೆ. ಸಾವರ್ಕರ್ ಮತ್ತು ಬರೀಂದ್ರ ಅವರಲ್ಲದೇ ಉಳಿದಿಬ್ಬರು ಕ್ರಾಂತಿಕಾರಿಗಳು ವೈಯಕ್ತಿಕ ಅನುಕೂಲಗಳಿಗಾಗಿ ಗೋಗರೆಯುವ ಬದಲು ಎಲ್ಲಾ ರಾಜಕೀಯ ಖೈದಿಗಳನ್ನೂ ಮಾನವೀಯವಾಗಿ ಕಾಣಬೇಕು ಎಂದು ಒತ್ತಾಯಿಸಿದ್ದರು. ಮತ್ತು ತಮ್ಮ ಹಿಂದಿನ ನಡವಳಿಕೆಗೆ ಪಶ್ಚಾತ್ತಾಪವನ್ನು ವ್ಯಕ್ತಪಡಿಸಿಲ್ಲ. ಸೆಲ್ಯುಲರ್ ಜೈಲಿನಲ್ಲಿರುವ ರಾಜಕೀಯ ಅಪರಾಧಿಗಳಿಗೆ ನೀಡುತ್ತಿದ್ದ ಕಿರುಕುಳಗಳ ಬಗ್ಗೆ ಗಮನ ಸೆಳೆಯುತ್ತಾ ಕಾಂಜಿಲಾಲ್ ಅವರು ತಾನು ಕೂಡ ಬಹಳವಾಗಿ ಹಿಂಸೆಯನ್ನು ಅನುಭವಿಸಿದ್ದೇನೆ ಎಂದು ಹೇಳುವಾಗಲೇ "ಹಲವಾರು ನನ್ನ ಸಹಖೈದಿಗಳು ಜೈಲಿನೊಳಗಡೆ ಇನ್ನೂ ಹೆಚ್ಚಾದ ಕಿರುಕುಳ ಅನುಭವಿಸಿದ್ದಾರೆ. ಒಬ್ಬ ಸಹಖೈದಿ ಹಿಂಸೆಯನ್ನು ತಾಳಲಾರದೆ ಆತ್ಮಹತ್ಯೆ ಮಾಡಕೊಂಡ. ಹಿಂಸೆ ಎಷ್ಟು ಕ್ರೂರವಾಗಿತ್ತು ಎಂದರೆ ಮತ್ತೊಬ್ಬ ಸಹಖೈದಿ ಹುಚ್ಚನಾಗಿಬಿಟ್ಟ" ಎಂದು ಬರೆದಿದ್ದಾರೆ.

ಅವರ ಅರ್ಜಿಯಲ್ಲಿ ವೈಯಕ್ತಿಕವಾದದ್ದೇನಾದರೂ ಇದ್ದಿದ್ದರೆ ಆ ಮನವಿ ಹೀಗಿತ್ತು: "ನನ್ನನ್ನು ಭಾರತದ ಜೈಲಿಗೆ ಕಳಿಸಲು ಸರ್ಕಾರಕ್ಕೆ ಒಂದೊಮ್ಮೆ ಸಾಧ್ಯವಿಲ್ಲದಿದ್ದರೆ, ಭಾರತೀಯ ಜೈಲಿನಲ್ಲಿ ಇತರ ಖೈದಿಗಳಿಗೆ ಯಾವಾಗಲೂ ದೊರೆಯುತ್ತಿರುವ ಸವಲತ್ತುಗಳನ್ನು ನಮಗೆ ಇಲ್ಲಿಯೂ ಸರ್ಕಾರ ಮಂಜೂರು ಮಾಡಬೇಕಾಗುತ್ತದೆ. . ."

ಅಲಹಾಬಾದಿನ ಸ್ವರಾಜ್ ಪತ್ರಿಕೆಯ ಸಂಪಾದಕ ನಂದ ಗೋಪಾಲ್ ಅವರನ್ನು ಗಂಭೀರ ಬರವಣಿಗೆಗಾಗಿ ಪೋಷಕರ – ದೇಶದ್ರೋಹದ ಆಪಾದನೆಯ ಮೇಲೆ ಜೀವಾವಧಿ ಗಡೀಪಾರು ಶಿಕ್ಷೆಗೆ ಒಳಪಡಿಸಲಾಗಿತ್ತು. ಅವರೂ ಕೂಡ ತಮ್ಮ ವೈಯಕ್ತಿಕ ಅನುಕೂಲಗಳಿಗಾಗಿ ಗೋಗರೆಯಲಿಲ್ಲ, ಬದಲಿಗೆ ಸೆಲ್ಯುಲರ್ ಜೈಲಿನಲ್ಲಿ ಇತರ ರಾಜಕೀಯ ಖೈದಿಗಳಿಗೆ ನೀಡುತ್ತಿರುವ ಕ್ರೂರ ಹಿಂಸೆಯ ಬಗ್ಗೆ ಹೇಳಿದ್ದರು.

"ಜಗತ್ತಿನ ಅತ್ಯಂತ ಶಕ್ತಿಯುತ ಸರ್ಕಾರದ ಬಹಳ ಮುಖ್ಯವಾಗಿ ಭಾರತ ಸರ್ಕಾರದ ಅಧಿಕಾರಿಗಳಲ್ಲಿ ನಾನು ಮನವಿ ಮಾಡುವುದೇನೆಂದರೆ ನಮ್ಮಲ್ಲಿರುವ ದೇಶದ್ರೋಹದ ಕ್ರಿಮಿಗಳನ್ನು ನಾಶ ಮಾಡುವ ಸಲುವಾಗಿ ನಮ್ಮ ಸ್ಥಿತಿಯನ್ನು ಶೋಚನೀಯ ಹಾಗೂ ಸಂಕಟಕ್ಕೆ ಈಡು ಮಾಡಬೇಡಿ. ಕ್ರೈಸ್ತ ಧರ್ಮದ ಶತ್ರುಗಳು ಕ್ರೈಸ್ತಧರ್ಮದ ವಿರುದ್ಧ ಧಾರ್ಮಿಕ ಹುತಾತ್ಮರಾಗಲು ಪ್ರಾಣತ್ಯಾಗ ಮಾಡಿದ್ದರಿಂದ ಈ ಭೂಗೋಳದಿಂದ ಕ್ರೈಸ್ತಧರ್ಮ ನಾಶವಾಗಲಿಲ್ಲ. ಹಾಗೆಯೇ ಖಂಡಿತವಾಗಿಯೂ, ರಾಜಕೀಯ ಹುತಾತ್ಮತೆ ಭರತವರ್ಷದ ಪವಿತ್ರ ಮಣ್ಣಿನಿಂದ ಭಾರತೀಯ ರಾಷ್ಟ್ರೀಯತೆಯನ್ನು ಅಳಿಸುವುದಿಲ್ಲ."

ಎಂದು ಬರೆದಿದ್ದರು.

ಸಾವರ್ಕರ್ ಹಾಗೂ ಅವರ ರಾಜಕೀಯವನ್ನು ತೀವ್ರ ಆಸಕ್ತಿಯಿಂದ ಸಂಶೋಧನೆ ಮಾಡಿದ ಆರ್. ರವಿಶಂಕರ್ ಹೀಗೆ ಹೇಳುತ್ತಾರೆ: "ಕ್ಷಮಾದಾನಕ್ಕಾಗಿ ಮನವಿ ಮಾಡಿದ ಮಾತ್ರಕ್ಕೆ ಅವರನ್ನೇನು ಕಡಿಮೆ ವೀರ ಎಂದೇನೂ ತಿಳಿದುಕೊಳ್ಳಬೇಕಾಗಿಲ್ಲ. ತನ್ನ ಮಹಾನಾಯಕ ಶಿವಾಜಿಯು ಶತ್ರುಗಳನ್ನು ಕುತಂತ್ರ ಮಾಡಿ ಸೋಲಿಸಿದಂತೆ, ತನ್ನನ್ನು ಬಿಡುಗಡೆ ಮಾಡಿದರೆ ತಾನು ಮತ್ತೊಮ್ಮೆ ಸ್ವಾತಂತ್ರ್ಯ ಚಳವಳಿಯಲ್ಲಿ ಕ್ರಿಯಾಶೀಲವಾಗಿ ತೊಡಗಿಕೊಳ್ಳಬಹುದು ಎಂದು ಬ್ರಿಟಿಷರ ಬಳಿ ತಂತ್ರ ಮಾಡುತ್ತಿರಬಹುದು. ಆದರೆ ಅಂತಹ ಎಲ್ಲಾ ಭರವಸೆಗಳು ಅಕ್ಟೋಬರ್ 1939 ರಲ್ಲಿ ನುಚ್ಚುನೂರಾದವು; ಆಗ ಲಾರ್ಡ್ ಲಿನ್ಲಿತ್‌ಗ್ರೋರನ್ನು ಭೇಟಿ ಮಾಡಿದಾಗ ಸಾವರ್ಕರ್ ಪೂರ್ತಾ ಉಲ್ಟಾ ಹೊಡೆದರು: "ಆದರೆ ಈಗ ನಮ್ಮ ಹಿತಾಸಕ್ತಿಗಳು ಬಹಳ ನಿಕಟವಾಗಿ ಬಿಗಿದುಕೊಂಡಿರುವಾಗ ಹಿಂದೂವಾದ ಹಾಗೂ ಗ್ರೇಟ್ ಬ್ರಿಟನ್ ಆಪ್ತರಾಗುವುದು ತೀರ ಅಗತ್ಯವಾಗುತ್ತದೆ; ಮತ್ತು ಹಿಂದಿನ ವೈಷಮ್ಯದ ಅಗತ್ಯವೇ ಬೀಳುವುದಿಲ್ಲ." . . . ಒಟ್ಟಾರೆಯಾಗಿ, ರಾಜಕೀಯ ಖೈದಿಗಳ ಹೋರಾಟದಲ್ಲಿ ಭಾಗವಹಿಸದಿರಲು ಸಾವರ್ಕರ್ ನೀಡಿದ, ತನ್ನನ್ನು ರಕ್ಷಿಸಿಕೊಂಡು ತನ್ನ ಬಿಡುಗಡೆಯಾದ ನಂತರ ಸ್ವಾತಂತ್ರ್ಯ ಚಳವಳಿಯಲ್ಲಿ ಪಾಲ್ಗೊಳ್ಳಬಹುದು ನೆಪ, ಈಗ ಸಂಪೂರ್ಣ ತಲೆಕೆಳಗಾಯಿತು.

(ಮುಂದುವರೆಯುವುದು)

ಜನಶಕ್ತಿ ಕನ್ನಡ ವಾರಪತ್ರಿಕೆ

ಚಂದಾ ವಿವರ

ವಾರ್ಷಿಕ ಚಂದಾ : ರೂ.500.00
ದ್ವೈವಾರ್ಷಿಕ ಚಂದಾ : ರೂ.1000.00

ಚಂದಾದಾರರು ಸಂರ್ಕಿಸಿ :
ಕ್ರಿಯಾ ಪ್ರಕಾಶನ, ಸೂರಿ ಭವನ
ನಂ.40/5, 2ನೇ 'ಬಿ' ಮುಖ್ಯರಸ್ತೆ, 16ನೇ ಅಡ್ಡರಸ್ತೆ, ಸಂಪಂಗಿರಾಮನಗರ,
ಬೆಂಗಳೂರು 560027
ಕಛೇರಿ ದೂರವಾಣಿ : 080–22234369
ಫೋನ್ : 9448578021, 9483966467

ರಾಜ್ಯ ಬಜೆಟ್: ಮುಕ್ತ ಆರ್ಥಿಕ ನೀತಿಗಳ ಜಾರಿಯ ಮುಂದುವರಿದ ಭಾಗ

ಕರ್ನಾಟಕ ರಾಜ್ಯ ಸರ್ಕಾರ ಮಂಡಿಸಿದ 2023–24ರ ಬಜೆಟ್ ಬಗ್ಗೆ ಪ್ರತಿಕ್ರಿಯಿಸುತ್ತ 'ಇದೊಂದು ಚುನಾವಣಾ ಪ್ರಣಾಳಿಕೆಯಂತಿದೆ' ಎಂಬ ವಿರೋಧ ಪಕ್ಷಗಳ ಆರೋಪಗಳಿಗೆ ಸಾಕಷ್ಟು ಪುರಾವೆಗಳು ಸಿಗುತ್ತವೆಯಾದರೂ, ಅದಕ್ಕಿಂತ ಹೆಚ್ಚಾಗಿ ಹಲವು ವಿಷಯಗಳಲ್ಲಿ ಸ್ಪಷ್ಟತೆಯೇ ಇಲ್ಲದಿರುವುದನ್ನು ಕಾಣಬಹುದು. ಕೆಲವು ಹೊಸ ಯೋಜನೆಗಳನ್ನು ಘೋಷಣೆ ಮಾಡಲಾಗಿದೆಯಾದರೂ, ಅಂತಹ ಯೋಜನೆಗಳಿಗೆ ಹಣ ಮೀಸಲಿಟ್ಟ ಮಾಹಿತಿಯೇ ಇಲ್ಲ. ಮತ್ತೆ ಕೆಲವು ಕೇಂದ್ರ ಸರ್ಕಾರದ ಯೋಜನೆಗಳ ಪ್ರಸ್ತಾಪ ಮತ್ತು ಅವುಗಳಿಗೆ ಕಳೆದ 3 ವರ್ಷಗಳಿಂದ ಆಗಿರುವ ವೆಚ್ಚಗಳನ್ನು ಪ್ರಸ್ತಾಪ ಮಾಡುವ ಮೂಲಕ, ಈ ವೆಚ್ಚ ರಾಜ್ಯದ್ದೋ, ಕೇಂದ್ರದ್ದೋ ಎಂಬ ಗೊಂದಲ ಮೂಡಿಸುವ ಯತ್ನವನ್ನು ಉದ್ದೇಶಪೂರ್ವಕವಾಗಿ ನಡೆಸಿರುವುದು ಸ್ಪಷ್ಟವಾಗಿ ಕಾಣುತ್ತದೆ. ಕೇಂದ್ರದ ಎನ್.ಡಿ.ಎ. ಸರ್ಕಾರ ರಾಜ್ಯಕ್ಕೆ ನೀಡಿರುವ ಅನುದಾನಗಳು ಮತ್ತು ಸಾಧನೆಗಳನ್ನು ಅಲ್ಲಲ್ಲಿ ಪ್ರಸ್ತಾಪಿಸಲಾಗಿದೆ. ಕೆಲವೊಂದು ಯೋಜನೆಗಳ ಕುರಿತಾಗಿ ಪ್ರಸ್ತಾಪಿಸುವಾಗ ಕಳೆದ ಮೂರು ಅಥವಾ ಐದು ವರ್ಷಗಳ ಖರ್ಚು ವೆಚ್ಚ ಮತ್ತು ಸಾಧನೆಗಳ ಕುರಿತು ಮಾಹಿತಿ ನೀಡಲಾಗಿದೆ. ಈ ಯೋಜನೆಗಳ ಕುರಿತು ಪ್ರಸ್ತುತ ವರ್ಷದ ಜಾರಿಯ ಮಾಹಿತಿ ಮತ್ತು ಮುಂದಿನ ಆರ್ಥಿಕ ವರ್ಷಕ್ಕೆ ಇಡಲಾದ ಅನುದಾನಗಳ ಸ್ಪಷ್ಟ ಮಾಹಿತಿಯೇ ಇಲ್ಲ. 2024ರ ಸಾರ್ವತ್ರಿಕ ಚುನಾವಣೆಯ ಪ್ರಚಾರಕ್ಕೆ ಬಿಜೆಪಿಯವರು ಇಂದಿನಿಂದಲೇ ಸಿದ್ಧರಾಗಿದ್ದಾರೆ ಎಂಬದನ್ನು ಇದು ತೋರಿಸುತ್ತದೆ.

ಕೇಂದ್ರ ಸರ್ಕಾರದ ಅನುದಾನ ಕಡಿತ;

ಕೇಂದ್ರ ಸರ್ಕಾರದಿಂದ ಹಿಂದಿನ ಅವಧಿಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಅನುದಾನ ಪಡೆಯುವ ಪ್ರಯತ್ನಗಳನ್ನು ರಾಜ್ಯ ಸರ್ಕಾರ ಮಾಡಬೇಕಾಗುತ್ತದೆ. ಆದರೆ, 2022–23 ರಲ್ಲಿ ಅಂದಾಜು ಮಾಡಿದ ಕೇಂದ್ರ ಸರ್ಕಾರದ ಅನುದಾನವನ್ನೂ ಸಂಪೂರ್ಣವಾಗಿ ಪಡೆಯಲು ರಾಜ್ಯ ಬಿಜೆಪಿ ಸರ್ಕಾರಕ್ಕೆ ಸಾಧ್ಯವಾಗಲಿಲ್ಲ.

2022–23ರ ಅಯವ್ಯಯದಲ್ಲಿ ಅನುದಾನಗಳ ಅಂದಾಜು 17,281.01 ಕೋಟಿ ರೂ. ಗಳು.

2022–23ರ ಪರಿಷ್ಕೃತ ಅಂದಾಜು 12,391.58 ಕೋಟಿ ರೂ. ಗಳು.

ಅಂದರೆ ಕೇಂದ್ರದಿಂದ ಅಂದಾಜಿಗಿಂತ 4,889.43 ಕೋಟಿ ರೂ. ಗಳ ಅನುದಾನ ಬರಲಿಲ್ಲ. 2023–24ರ ಬಜೆಟ್ ನಲ್ಲಿ ಇದರ ಅಂದಾಜನ್ನು 13,005 ಕೋಟಿ ರೂ. ಗಳಿಗೆ ಇಳಿಸುವ ಮೂಲಕ ರಾಜ್ಯದ ಜನತೆಗೆ ಅನ್ಯಾಯ ಮಾಡಲಾಗಿದೆ. ಇದು ಕಳೆದ ಬಜೆಟ್ ಅಂದಾಜಿಗಿಂತ 4,276.01 ಕೋಟಿ ಕಡಿಮೆಯಾಗಿದೆ.

ಇಷ್ಟಾದರೂ ಕೇಂದ್ರ ಸರ್ಕಾರವನ್ನು ಹೊಗಳಿ ಬರೆಯಲಾಗಿದೆ.. "ಕೇಂದ್ರ ಸರ್ಕಾರವು, ರಾಜ್ಯದ ಆರ್ಥಿಕತೆಯನ್ನು ಉತ್ತೇಜಿಸಲು ಸತತವಾಗಿ ರಾಜ್ಯಕ್ಕೆ ಸಂಪೂರ್ಣ ಬೆಂಬಲ ನೀಡುತ್ತಾ ಬಂದಿದೆ. 2019–20 ರಿಂದ 2022–23 ರವರೆಗೂ, ಕೇಂದ್ರ ಸರ್ಕಾರವು ನಮ್ಮ ರಾಜ್ಯಕ್ಕೆ ಒಟ್ಟು 2,77,711 ಕೋಟಿ ರೂ. ಗಳನ್ನು ಬಿಡುಗಡೆ ಮಾಡಿದೆ. ಇದರಲ್ಲಿ 1,20,493 ಕೋಟಿ ರೂ. ಗಳು ತೆರಿಗೆಯಲ್ಲಿ ರಾಜ್ಯದ ಪಾಲು" ಎಂದು ಹೇಳಲಾಗಿದೆ. ಇದು ಮೂರು ವರ್ಷಗಳ ಲೆಕ್ಕ ಎಂಬುದನ್ನು ಗಮನಿಸಬೇಕು. ಆದರೆ, ಕೇಂದ್ರಕ್ಕೆ ರಾಜ್ಯದಿಂದ ಸಂಗ್ರಹವಾದ ತೆರಿಗೆ ಎಷ್ಟು, ರಾಜ್ಯಕ್ಕೆ ಬರಬೇಕಾದ ಎಷ್ಟು ಪಾಲು ತೆರಿಗೆ ಬಂದಿದೆ? ಇನ್ನೂ ಎಷ್ಟು ಬರಬೇಕಿದೆ? ಬರಬೇಕಾದ ರಾಜ್ಯದ ಪಾಲನ್ನು ತರಲು ಯಾವ ಮಾರ್ಗ ಅನುಸರಿಸುತ್ತೇವೆ ಎಂಬ ಮಾಹಿತಿಯೇ ಬಜೆಟ್ ಪತ್ರದಲ್ಲಿ ಇಲ್ಲ.

ರಾಷ್ಟ್ರೀಯ ಆರೋಗ್ಯ ಅಭಿಯಾನ, ಕೋವಿಡ್ ಲಸಿಕೆ, ಜಲಜೀವನ್ ಮಿಷನ್, ಅಮೃತ್ ಯೋಜನೆ, ಸ್ಮಾರ್ಟ್ ಸಿಟಿ ಯೋಜನೆ, ಫಸಲ್ ಬಿಮಾ ಯೋಜನೆ, ನರೇಗ ಯೋಜನೆ, ಪ್ರಧಾನ ಮಂತ್ರಿ ಆವಾಸ್ ಯೋಜನೆ ಸೇರಿದಂತೆ ಕೇಂದ್ರ ಸರ್ಕಾರದ 105 ಯೋಜನೆಗಳಡಿ ಕೇಂದ್ರ ಸರ್ಕಾರ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆ ಮಾಡಿರುವುದನ್ನೂ ರಾಜ್ಯಕ್ಕೆ ಮಾಡಿರುವ ದೊಡ್ಡ ಉಪಕಾರ ಎಂಬಂತೆ ಇಲ್ಲಿ ಬಿಂಬಿಸಲಾಗಿದೆ.

ಜಲಮಾರ್ಗ:

ಕರಾವಳಿ ಪ್ರದೇಶದಲ್ಲಿ ಖಾಸಗಿ ಸಹಭಾಗಿತ್ವದೊಂದಿಗೆ ಉಡುಪಿ ಜಿಲ್ಲೆಯ ಬೈಂದೂರಿನಲ್ಲಿ ಮರೀನಾವನ್ನು ಅಭಿವೃದ್ಧಿಪಡಿಲಾಗುವುದು.

ಗುರುಪುರ ಮತ್ತು ನೇತ್ರಾವತಿ ನದಿಗಳ ಪಾತ್ರದಲ್ಲಿ ಜಲಸಾರಿಗೆ ಸಂಪರ್ಕವನ್ನು ಕಲ್ಪಿಸಲು ಬಾರ್ಜ್ ಗಳ ಸೇವೆಗಳನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಪ್ರಾರಂಭಿಸಲಾಗುವುದು.

ಬಾಗಲಕೋಟೆ–ಕಂಕಣವಾಡಿ–ಕದಮ್ ಪುರ, ಕಲಬುರಗಿ–ಸನ್ನತಿ, ಶಿವಮೊಗ್ಗ–ಕೊರಗು–ಶಿಗ್ಲು, ಮಂಗಳೂರು–ಹಂಗಾರಕಟ್ಟೆಯಲ್ಲಿ ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ ಹೊಸ ಲೈಟ್ ಕಾರ್ಗೋ ಟ್ರಾನ್ಸ್ ಪೋರ್ಟ್ (ಎಲ್.ಸಿ.ಟಿ) ಬೋಟ್ ಸೇವೆಗಳನ್ನು ಪ್ರಾರಂಭಿಸಲಾಗುವುದು.

ಮಂಗಳೂರು–ಕಾರವಾರ–ಗೋವಾ–ಮುಂಬಯಿ ಜಲಮಾರ್ಗವನ್ನು ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲಾಗುವುದು.

ಮೀನುಗಾರಿಕೆಗೆ ಸೀಮೆಎಣ್ಣೆ ಸಬ್ಸಿಡಿ ಮತ್ತು ಮುಕ್ತ ಆರ್ಥಿಕ ನೀತಿ

ರಾಜ್ಯ ಬಿಜೆಪಿ ಸರಕಾರ ಮಂಡಿಸಿದ 2023–24ರ ಬಜೆಟ್ ನಲ್ಲಿ ಮುಕ್ತ ಆರ್ಥಿಕ ನೀತಿಗಳ ಜಾರಿಯ ಮುಂದುವರಿದ ಅಂಶಗಳೂ ಬಹಳಷ್ಟಿವೆ ಎಂಬುದನ್ನು ಗಮನಿಸಬೇಕು.

ಮುಕ್ತ ಆರ್ಥಿಕ ನೀತಿಗಳ ಅನುಸಾರ, ಪಡಿತರ ವ್ಯವಸ್ಥೆ ಮೂಲಕ ರಿಯಾಯಿತಿ ದರದಲ್ಲಿ ನೀಡುತ್ತಿರುವ ಜನಸಾಮಾನ್ಯರ ಬಳಕೆಯ ಅಗತ್ಯ ವಸ್ತುಗಳ ವಿತರಣೆಯನ್ನು ಸಂಪೂರ್ಣವಾಗಿ ನಿಲ್ಲಿಸಿ, ಎಲ್ಲವನ್ನೂ ಮುಕ್ತ ಮಾರುಕಟ್ಟೆಗೆ ತೆರೆದಿಡಬೇಕು.



ರೇಷನ್ ಕಾರ್ಡ್ ಮೂಲಕ ರಿಯಾಯಿತಿ ದರದಲ್ಲಿ ಸೀಮೆಎಣ್ಣೆ ಕೊಡುವುದನ್ನು ನಿಲ್ಲಿಸಿ ಎಷ್ಟೋ ವರ್ಷಗಳಾದವು. 'ಉಜ್ವಲ ಯೋಜನೆ' ಮೂಲಕ ಉಚಿತ ಅಡುಗೆ ಅನಿಲ ಸಂಪರ್ಕ (ಸಂಪರ್ಕ ಉಚಿತವಷ್ಟೆ, ಅನಿಲ ಉಚಿತವಲ್ಲ) ಎಂಬ ಘೋಷಣೆ ಮಾಡಿ, ಬಿಪಿಎಲ್ ಕುಟುಂಬಗಳಿಗೆ 1,600 ರೂ ಮೌಲ್ಯದ ಉಚಿತ ಸಿಲಿಂಡರ್ ಮತ್ತು ರೆಗ್ಯುಲೇಟರ್ ಕೊಟ್ಟು (ರಾಜ್ಯ ಸರ್ಕಾರ ಉಚಿತ ಸ್ಟೌವ್ ಕೊಟ್ಟಿತ್ತು), ಅಡುಗೆ ಮಾಡಲು ಬಡವರೂ ಅನಿಲ ಬಳಕೆ ಮಾಡುವಂತೆ ಮಾಡಿದ್ದು, ಅಡುಗೆ ಅನಿಲ ಬಳಕೆ ಮಾಡುವ ಕುಟುಂಬಗಳಿಗೆ ಸೀಮೆಎಣ್ಣೆ ವಿತರಣೆ ಇಲ್ಲದಂತೆ ಮಾಡಿದ್ದು, ಕ್ರಮೇಣ ಪಡಿತರ ಸೀಮೆಎಣ್ಣೆ ವಿತರಣೆಯನ್ನೇ ಸ್ಥಗಿತ ಮಾಡಿದ್ದು, ನಂತರ ಅಡುಗೆ ಅನಿಲದ ಮೇಲಿನ ಸಬ್ಸಿಡಿಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಿದ್ದು, ಆ ನಂತರ ಎರಡೂವರೆ ಪಟ್ಟು ದರ ಏರಿಸಿ, ಲಕ್ಷಾಂತರ ಬಡ ಕುಟುಂಬಗಳು ಅಡುಗೆ ಮಾಡಲು ಮತ್ತೆ ಸೌದೆ ಮೊರೆ ಹೋಗಿರುವುದು, ಇವೆಲ್ಲಾ ಎಲ್ಲರಿಗೂ ಗೊತ್ತಿರುವ ವಿಷಯವೇ.

ಮೀನುಗಾರಿಕೆ ದೋಣಿಗಳಿಗೆ ಬಳಕೆ ಮಾಡುವ ಸೀಮೆಎಣ್ಣೆ ಗೆ ಇನ್ನೂ ಸಬ್ಸಿಡಿ ನೀಡಲಾಗುತ್ತಿದೆ. (ಇದೂ ಸಹ ಮೀನುಗಾರರು ಹಲವು ಹೋರಾಟಗಳ ಮೂಲಕ ಉಳಿಸಿಕೊಂಡಿದ್ದು.) ಮುಕ್ತ ಆರ್ಥಿಕ ನೀತಿಗಳನ್ನು ಸಂಪೂರ್ಣವಾಗಿ ಜಾರಿ ಮಾಡಲು ಈ ಸಬ್ಸಿಡಿ ಸೀಮೆಎಣ್ಣೆ ವಿತರಣೆ ನಿಲ್ಲಿಸಲೇಬೇಕು. ಮೀನುಗಾರಿಕೆ ದೋಣಿಗಳಿಗೆ ಬಳಕೆ ಮಾಡುತ್ತಿರುವ ಸೀಮೆಎಣ್ಣೆಗೆ ಕೊಡುತ್ತಿರುವ ಸಬ್ಸಿಡಿ ಇಲ್ಲದಂತೆ ಮಾಡುವುದು ಹೇಗೆ? ಇದಕ್ಕೆ ರಾಜ್ಯ ಸರ್ಕಾರದ ಬಜೆಟ್ ನಲ್ಲಿ ಒಂದು ತಂತ್ರ ಹೆಣೆಯಲಾಗಿದೆ.

ಸೀಮೆಎಣ್ಣೆ ಬಳಕೆ ಮಾಡುತ್ತಿರುವ ದೋಣಿಗಳಿಂದ ಪರಿಸರ ಮಾಲಿನ್ಯ ವಾಗುತ್ತಿದೆ, ಈ ದೋಣಿಗಳು ಪೆಟ್ರೋಲ್ ಅಥವಾ ಡೀಸೆಲ್ ಮೋಟಾರ್ ಎಂಜಿನ್ ಅಳವಡಿಸಿಕೊಳ್ಳಬೇಕು. ಇದಕ್ಕೆ 2 ವರ್ಷಗಳ ಗಡುವು ನೀಡಲಾಗುವುದು. ಎಂಜಿನ್ ಬದಲಾವಣೆಗೆ ತಲಾ 50 ಸಾವಿರ ರೂಪಾಯಿ ಸಹಾಯ ಧನ ನೀಡಲಾಗುವುದು. ಇದಕ್ಕಾಗಿ ಈ ವರ್ಷ 40 ಕೋಟಿ ಮೀಸಲಿಡಲಾಗಿದೆ. 2 ವರ್ಷಗಳ ವರೆಗೆ ಸೀಮೆಎಣ್ಣೆ ಸಬ್ಸಿಡಿ ಮುಂದುವರಿಯುತ್ತದೆ. ಈ ರೀತಿ ನೀಡುವಾಗಲೂ ಪ್ರಸಕ್ತ ಸಾಲಿನಿಂದ 'ನೇರ ನಗದು ಯೋಜನೆ' (DBT) ಮೂಲಕ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಸೀಮೆಎಣ್ಣೆ ಸಬ್ಸಿಡಿ ಹಣವನ್ನು ಜಮಾ ಮಾಡಲಾಗುವುದು. ಇವಿಷ್ಟು ರಾಜ್ಯ ಬಜೆಟ್ ನಲ್ಲಿರುವ ಅಂಶಗಳು.

ಇದರ ಅರ್ಥ ಇಷ್ಟೆ. ಮೀನುಗಾರರು ಇನ್ನು ಮುಂದೆ ಮಾರುಕಟ್ಟೆ ದರದಲ್ಲಿ ಸೀಮೆಎಣ್ಣೆ ಖರೀದಿ ಮಾಡಬೇಕು. ಇದಕ್ಕಾಗಿ ಬಡ್ಡಿಗೆ ಸಾಲ ಮಾಡಬೇಕು. ತಾನು ಖರೀದಿ ಮಾಡಿದ ಡೀಸೆಲ್ ಎಷ್ಟು ಎಂಬುದನ್ನು ರಸೀದಿ ಸಮೇತ ಲೆಕ್ಕ ಬರೆದು ಇಡಬೇಕು. ಇದನ್ನು ಸರ್ಕಾರಕ್ಕೆ ಸಲ್ಲಿಸಿ ಸಬ್ಸಿಡಿ ಹಣ ಬ್ಯಾಂಕ್ ಖಾತೆಗೆ ಬರುವವರೆಗೂ ಕಾಯಬೇಕು. ಅಲ್ಲಿಯವರೆಗೂ ತಾನು ಡೀಸಲ್ ಖರೀದಿಸಲು ಮಾಡಿದ ಸಾಲಕ್ಕೆ ಬಡ್ಡಿ ಕಟ್ಟಬೇಕು. ಒಂದು ವೇಳೆ ಸಬ್ಸಿಡಿ ಹಣವೂ ಎಲ್ ಪಿಜಿ ಸಿಲಿಂಡರ್ ಸಬ್ಸಿಡಿಯಂತೆ ಬಾರದೇ ಇದ್ದರೆ ಸಾಲದ ಬಲೆಯಿಂದ ಹೊರಬರಲಾರದೆ ನರಳಬೇಕು.

ಇದು ಮುಂದಿನ ಎರಡು ವರ್ಷಗಳ ವರೆಗಿನ ಮಾತು. ಎರಡು ವರ್ಷಗಳ ನಂತರ ಸೀಮೆಎಣ್ಣೆ ಸಬ್ಸಿಡಿ ಇರುವುದಿಲ್ಲ ಎಂದು ಸರ್ಕಾರವೇ ಹೇಳಿದೆ.

ಇನ್ನು ಈ ಮೀನುಗಾರರನ್ನು ಮೀನುಗಾರಿಕೆಯಿಂದ ಹೊರಗಟ್ಟಿ ಕಾರ್ಪೋರೇಟ್ ಕಂಪನಿಗಳ ಹಿಡಿತಕ್ಕೆ ಒಪ್ಪಿಸುವ ಯೋಜನೆಗಳುಳ್ಳ ಹಲವು ಅಂಶಗಳೂ ಈ ಬಜೆಟ್ ನಲ್ಲಿವೆ.

ಹೇಗಿದೆ ನೋಡಿ ಸರ್ಕಾರದ ತಂತ್ರಗಳು. ಮುಕ್ತ ಆರ್ಥಿಕ ನೀತಿಗಳನ್ನು ಎಷ್ಟು ನಾಜೂಕಾಗಿ ಜಾರಿಗೆ ತರುತ್ತಾರೆ ನೋಡಿ.

ಅನುದಾನವೇ ಇಲ್ಲದ 'ಅಸಂಘಟಿತ ಕಾರ್ಮಿಕರ ಕಲ್ಯಾಣ ನಿಧಿ'

ರಾಜ್ಯದ ಅಸಂಘಟಿತ ವಲಯದಲ್ಲಿ ಕೆಲಸ ಮಾಡುತ್ತಿರುವ ಲಕ್ಷಾಂತರ ಶ್ರಮಜೀವಿಗಳ ಬದುಕಿಗೆ ಭದ್ರತೆ ಒದಗಿಸಲು 'ಕರ್ನಾಟಕ ಅಸಂಘಟಿತ ಕಾರ್ಮಿಕರ ಕಲ್ಯಾಣ ನಿಧಿ'ಯನ್ನು ಸ್ಥಾಪಿಸಲಾಗುವುದು. ಎಂದು ಬಜೆಟ್ ನಲ್ಲಿ ಹೇಳಲಾಗಿದೆಯಾದರೂ, ಬಜೆಟ್ ನಲ್ಲಿ ಯಾವುದೇ ಅನುದಾನ ಮೀಸಲಿಟ್ಟಿಲ್ಲ. ಅಥವಾ, ಕಲ್ಯಾಣ ನಿಧಿಗೆ ನಿಧಿಯ ಕ್ರೂಡೀಕರಣ ಹೇಗೆ ಎಂಬ ಸ್ಪಷ್ಟವಾದ ನಿರ್ಧಾರ ಇಲ್ಲ. "ಸದ್ಯಕ್ಕೆ ಆಸ್ತಿ ತೆರಿಗೆ ಮೇಲೆ ವಿಧಿಸಿರುವ ಸೆಸ್ ಪ್ರಮಾಣವನ್ನು ಹೆಚ್ಚಿಸದೆ ಆಂತರಿಕವಾಗಿ ಸೆಸ್ ದರಗಳನ್ನು ಮಾರ್ಪಾಡು ಗೊಳಿಸಲಾಗುವುದು. ಈ ಸೆಸ್ ಮೂಲಕ ನೊಂದಾಯಿತ 75 ಲಕ್ಷಕ್ಕೂ ಹೆಚ್ಚಿನ ಅಸಂಘಟಿತ ಕಾರ್ಮಿಕರಿಗೆ ವಿಶೇಷ ಯೋಜನೆಗಳನ್ನು ಜಾರಿಗೆ ತರಲಾಗುವುದು. ಎಂದು ಹೇಳಲಾಗಿದೆಯಾದರೂ, ಯಾವ ಪ್ರಮಾಣದಲ್ಲಿ ಸೆಸ್

ಪುಟ 10 ಕ್ಕೆ

ಭೂರಹಿತ

ಕೃಷಿ ಕೂಲಿಕಾರ ಮಹಿಳೆಯರಿಗೆ ಮಾಸಿಕ 500 ರೂ ನೆರವು ನೀಡುವ ಘೋಷಣೆ ಕೃಷಿಕೂಲಿಕಾರರ ನಿಜವಾದ ಬೇಡಿಕೆಗಳನ್ನು ಮರೆಮಾಚುವ ಸರ್ಕಾರದ ಪ್ರಯತ್ನವಾಗಿದೆ. ಗ್ರಾಮೀಣ ಪ್ರದೇಶದ ಕೃಷಿಕೂಲಿಕಾರರು ಮತ್ತು ಇತರೆ ಕಾರ್ಮಿಕರಿಗೆ ವರ್ಷವೊಂದರಲ್ಲಿ 100 ದಿನಗಳ ಕೆಲಸ ಮತ್ತು 309 ರೂ ಕೂಲಿ ಒದಗಿಸುವ ಗುರಿ ವೊಂದಿರುವ ನರೇಗಾ ಯೋಜನೆಗೆ ಕೇಂದ್ರ ಸರ್ಕಾರ ಕೊಡುವ ಅನುಧಾನವನ್ನು ಈ ಬಾರಿ ಮತ್ತಷ್ಟು ಕಡಿತ ಮಾಡಿದೆ. ಈ ಅನುಧಾನದಲ್ಲಿ ಕೇವಲ 40 ದಿನಗಳಷ್ಟೇ ಕೆಲಸ ಕೊಡಲು ಸಾಧ್ಯ ಎಂದು ಹೇಳಲಾಗುತ್ತಿದೆ.

ಮತ್ತೊಂದೆಡೆ, ವರ್ಷದಲ್ಲಿ 200 ದಿನಗಳ ಕೆಲಸ ಮತ್ತು 600 ರೂ. ಕೂಲಿ ನಿಗಧಿಮಾಡಬೇಕು ಮತ್ತು ಈ ಯೋಜನೆಯನ್ನು ನಗರ/ಪಟ್ಟಣಗಳಿಗೂ ವಿಸ್ತರಿಸಬೇಕು ಎಂಬ ಬೇಡಿಕೆಯನ್ನು ಕೃಷಿಕೂಲಿಕಾರರ ಸಂಘ ಸರ್ಕಾರದ ಮುಂದಿಟ್ಟಿದೆ. ರಾಜ್ಯ ಸರ್ಕಾರ ಈ ನಿಟ್ಟಿನಲ್ಲಿ ಯೋಜನೆ ರೂಪಿಸಲು ಮುಂದಾಗದೆ, ತಿಂಗಳಿಗೆ ಒಂದು ದಿನದ ಕೂಲಿಯನ್ನು ಪುಕ್ಕಟೆಯಾಗಿ ಕೊಡುವ ಘೋಷಣೆ ಮಾಡುವ ಮೂಲಕ ತಮ್ಮದು ಬಡವರ ಪರ ಎಂದು ಬಿಂಬಿಸಲು ಹೊರಟಿದೆ.



ಅಜೀಂ ಪ್ರೇಮ್ ಜಿ ವಿಶ್ವವಿದ್ಯಾಲಯದಲ್ಲಿ ಹೋರಾಟನಿರತ ವಿದ್ಯಾರ್ಥಿ ಸಾವು: ಸೂಕ್ತ ಕ್ರಮಕ್ಕೆ ಎಸ಼್ಎಫ಼್ಐ ಆಗ್ರಹ

ಬೆಂಗಳೂರಿನಲ್ಲಿರುವ ಪ್ರತಿಷ್ಠಿತ ಅಜೀಂ ಪ್ರೇಮ್ ಜಿ ಯೂನಿವರ್ಸಿಟಿಯ ಕ್ಯಾಂಪಸ್ ಒಳಗೆ ಅಲ್ಲಿನ ವಿದ್ಯಾರ್ಥಿಗಳು ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಡಳಿತ ಮಂಡಳಿಯನ್ನು ಒತ್ತಾಯಿಸಿ ಹೋರಾಟ ನಡೆಸುತ್ತಿದ್ದರು. ಈ ಹೋರಾಟಕ್ಕೆ ಆಡಳಿತ ಮಂಡಳಿ ಸೂಕ್ತವಾಗಿ ಸ್ಪಂದಿಸದ ಕಾರಣ 9 ದಿನಗಳ ಹೋರಾಟದ ನಂತರ ವಿದ್ಯಾರ್ಥಿಗಳ ಹೋರಾಟ ಸಮಿತಿ ಉಪವಾಸ ಸತ್ಯಾಗ್ರಹದ ಮೂಲಕ ತಮ್ಮ ಹೋರಾಟವನ್ನು ಮುಂದುವರೆಸಿದ್ದರು.
ಈ ಉಪವಾಸ ಸತ್ಯಾಗ್ರಹ ಹೋರಾಟದಲ್ಲಿ ಭಾಗಿಯಾಗಿದ್ದ ವಿದ್ಯಾರ್ಥಿ ಅಭಿಷೇಕ್ ಫೆಬ್ರವರಿ 24 ರಂದು ಪ್ರಜ್ಞೆ ತಪ್ಪಿ ಕುಸಿತು ಬಿದ್ದು ನಂತರ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾನೆ.

ಪ್ರಥಮ ವರ್ಷದ ಎಂಎ ಡೆವಲಪ್ಮೆಂಟ್ ವಿಭಾಗದ ವಿದ್ಯಾರ್ಥಿ ಅಭಿಷೇಕ್ ಸಾವಿಗೆ ಅಜೀಮ್ ಪ್ರೇಮ್ ವಿಶ್ವವಿದ್ಯಾಲಯದ ವಿದ್ಯಾರ್ಥಿ ವಿರೋಧಿ ನೀತಿ ಮತ್ತು ಅಸಡ್ಡತೆಯೇ ಕಾರಣವಾಗಿದೆ ಎಂದು ಸ್ಟೂಡೆಂಟ್ಸ್ ಫೆಡರೇಷನ್ ಆಫ್ ಇಂಡಿಯಾ (ಎಸ಼್ಎಫ಼್ಐ) ತಿಳಿಸಿದೆ.

ಅಜೀಂ ಪ್ರೇಮ್ ಜಿ ವಿಶ್ವವಿದ್ಯಾಲಯ ಕ್ಯಾಂಪಸ್ ನಿಂದ ಹಾಸ್ಟೆಲ್ ವಸತಿ ಸಮುಚ್ಚಯ ದೂರದಲ್ಲಿದೆ. ವಿದ್ಯಾರ್ಥಿಗಳು ಕ್ಯಾಂಪಸ್ ನಿಂದ ವಸತಿ ಸಮುಚ್ಚಯಕ್ಕೆ ಪ್ರತಿನಿತ್ಯ ವಾಹನಗಳಲ್ಲಿ ಪ್ರಯಾಣಿಸಬೇಕಾಗುತ್ತದೆ. ಇದರ ಪ್ರಯಾಣ ಶುಲ್ಕವನ್ನು ಕಳೆದ ವರ್ಷದ ದಾಖಲಾತಿ ಪಡೆದ ಮೊದಲ ವರ್ಷದ ವಿದ್ಯಾರ್ಥಿಗಳು ಒಂದು ವರ್ಷಕ್ಕೆ 8,500 ರೂ.ಗಳ ಲೆಕ್ಕದಲ್ಲಿ ಎರಡು ವರ್ಷಗಳ ಪ್ರಯಾಣ ಶುಲ್ಕ ಒಟ್ಟು 17,000 ರೂ.ಗಳನ್ನು ಕಟ್ಟಲು ಪ್ರತಿಯೊಬ್ಬ ವಿದ್ಯಾರ್ಥಿಗೆ ಅಜೀಮ್ ಪ್ರೇಮ್ ವಿಶ್ವವಿದ್ಯಾಲಯ ಇಮೇಲ್



ಕಳಿಸಿದೆ. ಆಡಳಿತ ಮಂಡಳಿ ಮೊದಲ ಬಾರಿ ಈ ಪದ್ದತಿ ಜಾರಿಗೆ ತಂದಿದೆ. ಇದರಿಂದ ಆತಂಕಿತರಾದ ವಿದ್ಯಾರ್ಥಿಗಳು ಈ ರೀತಿಯ ಪ್ರಯಾಣ ಶುಲ್ಕ ಕಟ್ಟಬೇಕೆಂದು ದಾಖಲಾತಿ ಸಮಯದಲ್ಲಿ ತಿಳಿಸಿರಲಿಲ್ಲ ಹಾಗೂ ಇದೇ ಮೊದಲ ಬಾರಿ ಏಕಾಏಕಿ ಪ್ರಯಾಣ ಶುಲ್ಕದ ಹೆಸರಿನಲ್ಲಿ ವಸೂಲಿ ಮಾಡಬೇಕೆಂದು ಇಮೇಲ್ ಕಳುಹಿಸಿರುವ ಆದೇಶವನ್ನು ವಾಪಸ್ ಪಡೆದುಕೊಳ್ಳಬೇಕು ಎಂದು ಕ್ಯಾಂಪಸ್ ಒಳಗಡೆಯೇ ಶಾಂತಿಯುತವಾಗಿ ಪ್ರತಿಭಟನೆಯನ್ನು ನಡೆಸಿ ಕುಲಪತಿಗಳಿಗೆ ಮನವಿ ಸಲ್ಲಿಸಿದ್ದರು. ಈ ಮನವಿ ಪತ್ರ ಸ್ವೀಕರಿಸಿದ ವಿವಿ ಕುಲಪತಿಗಳು ಹೋರಾಟದ ಬೇಡಿಕೆಗಳನ್ನು ಈಡೇರಿಸುವ ಬದಲು ಹೋರಾಟ ನಿರತ ವಿದ್ಯಾರ್ಥಿಗಳ ಮೇಲೆ ಕ್ರಮ ಕೈಗೊಳ್ಳುವುದಾಗಿ ಮತ್ತೊಮ್ಮೆ ಇಮೇಲ್ ಕಳುಹಿಸಿ ಬೆದರಿಸುವ ತಂತ್ರ ಅನುಸರಿಸಿದ್ದಾರೆ. ಈ ವಿಷಯ ಅಜೀಂ ಪ್ರೇಮ್ ಜೀ ವಿಶ್ವವಿದ್ಯಾಲಯ ಮತ್ತು ವಿದ್ಯಾರ್ಥಿಗಳ ನಡುವಿನ ಹೋರಾಟಕ್ಕೆ ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ ಪ್ರಯಾಣ ಶುಲ್ಕ ರದ್ದು ಮಾಡಬೇಕು, ವಿದ್ಯಾರ್ಥಿಗಳಿಗೆ ಸಂಬಂಧಿಸಿದ ನೀತಿ ನಿರೂಪಣೆಯ ಸಭೆಗಳಲ್ಲಿ ವಿಶ್ವವಿದ್ಯಾಲಯದ ಆಡಳಿತ ವಿದ್ಯಾರ್ಥಿ ಪ್ರತಿನಿಧಿಗಳಿಗೆ ಅವಕಾಶ ಕಲ್ಪಿಸಬೇಕು ಎಂಬ ಪ್ರಮುಖ ಬೇಡಿಕೆಗಳನ್ನಿಟ್ಟುಕೊಂಡು ವಿವಿ ಒಳಗಡೆಯೇ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ಶಾಂತಿಯುತ ಹೋರಾಟ ನಡೆಸುತ್ತಿದ್ದರು.
ಈ ವೇಳೆ ಕ್ಯಾಂಪಸ್ ಒಳಗೆ ಹೋರಾಟ ನಡೆಸಲು ಅನುಮತಿ ನೀಡುವುದಿಲ್ಲ ಎಂದು ಬೆದರಿಸಲು ಮುಂದಾದಾಗ ಅಜೀಂ ಪ್ರೇಮ್ ಜೀ ಯೂನಿವರ್ಸಿಟಿಯ ವಿದ್ಯಾರ್ಥಿ ವಿರೋಧಿ ಸರ್ವಾಧಿಕಾರದ ನೀತಿ ವಿರುದ್ದ ವಿದ್ಯಾರ್ಥಿಗಳ ಹೋರಾಟ ಸಮಿತಿ ಟ್ವಿಟ್ಟರ್ ಅಭಿಯಾನ ಸಹ ನಡೆಸಿದ್ದರು.

ಇಷ್ಟೆಲ್ಲಾ ಆದರು ವಿವಿ ಆಡಳಿತ ಮಂಡಳಿ ವಿದ್ಯಾರ್ಥಿಗಳ ಹೋರಾಟಕ್ಕೆ ಸ್ಪಂದಿಸದ ಕಾರಣ ಉಪವಾಸ ಸತ್ಯಾಗ್ರಹ ಹೋರಾಟ ಆರಂಭಿಸಿದರು. ಈ ಹೋರಾಟ ತೀವ್ರಗೊಂಡಿತ್ತು. ಈ ವೇಳೆ ಫೆಬ್ರವರಿ 24 ರಂದು ವಿಶ್ವವಿದ್ಯಾಲಯದ ಆಡಳಿತ ಮಂಡಳಿ ಹೋರಾಟ ನಿರತ ವಿದ್ಯಾರ್ಥಿಗಳ ಬೇಡಿಕೆಗಳನ್ನು ಚರ್ಚಿಸುವುದಾಗಿ ಮೌಖಿಕ ಭರವಸೆಯನ್ನಷ್ಟೇ ನೀಡಿತ್ತು. ಇದಾದ ಕೆಲವೇ ನಿಮಿಷಗಳಲ್ಲಿ ಉಪವಾಸ ಹೋರಾಟ ನಿರತರಾಗಿದ್ದ ವಿದ್ಯಾರ್ಥಿ ಅಭಿಷೇಕ್ ಸಾವಿನ ದುರಂತ ಘಟನೆ ನಡೆದಿದೆ. ಈ ಘಟನೆ ಬಗ್ಗೆ ಸರ್ಕಾರ ಸಮಗ್ರ ತನಿಖೆಯನ್ನು ನಡೆಸಿ ಅಜೀಂ ಪ್ರೇಮ್ ಜಿ ಯೂನಿವರ್ಸಿಟಿಯ ಆಡಳಿತ ಮಂಡಳಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಮತ್ತು ವಿದ್ಯಾರ್ಥಿಗಳ ಬೇಡಿಕೆಗಳನ್ನು ಈಡೇರಿಸಬೇಕು, ಕ್ಯಾಂಪಸ್ ಗಳಲ್ಲಿ ವಿದ್ಯಾರ್ಥಿಗಳ ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಗಾಗಿ ವಿದ್ಯಾರ್ಥಿ ಸಂಘದ ಚುನಾವಣೆಗಳನ್ನು ನಡೆಸಿ ಶಿಕ್ಷಣ ಸಂಸ್ಥೆಗಳ ನೀತಿ ನಿರೂಪಣೆಯ ಸಭೆಗಳಲ್ಲಿ ವಿದ್ಯಾರ್ಥಿ ಪ್ರತಿನಿಧಿಗಳಿಗೆ ಅವಕಾಶ ಕಲ್ಪಿಸಬೇಕು ಹಾಗೂ ಸಾವನ್ನಪ್ಪಿರುವ ವಿದ್ಯಾರ್ಥಿಯ ಕುಟುಂಬಕ್ಕೆ ಸೂಕ್ತ ಪರಿಹಾರ ಕೊಡಬೇಕು ಹಾಗೂ ಇಂತಹ ಘಟನೆಗಳು ಮರುಕಳಿಸದಂತೆ ಸರ್ಕಾರ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ಎಸ಼್ಎಫ಼್ಐ ಕರ್ನಾಟಕ ರಾಜ್ಯ ಸಮಿತಿ ಆಗ್ರಹಿಸಿದೆ.
ಹಾಗೂ ಅಜೀಂ ಪ್ರೇಮ್ ಜಿ ವಿಶ್ವವಿದ್ಯಾಲಯ ಮತ್ತು ಸರ್ಕಾರದ ವಿದ್ಯಾರ್ಥಿ ವಿರೋಧಿ ನೀತಿಗಳ ವಿರುದ್ಧ ರಾಜ್ಯಾದ್ಯಂತ ಹೋರಾಟ ನಡೆಸಲಾಗುವುದು ಎಂದು ಅದು ಹೇಳಿಕೆ ನೀಡಿದೆ.

ಬಿ.ಎಸ್.ವೈ: ವಿದಾಯ, ವಿಷಾದ ಆಡದೇ ಉಳಿದ ಮಾತುಗಳು.......... ಪುಟ 3 ರಿಂದ

ಲಿಂಗಾಯತ ನಾಯಕನೆಂದು ಗುರುತಿಸ ಲಾಗುತ್ತಿರಲಿಲ್ಲ. ಯಡಿಯೂರಪ್ಪನವರು ಮುಖ್ಯಮಂತ್ರಿಯಾದ ಮೇಲೆ ಎಲ್ಲ ಮಠಾಧೀಶರನ್ನು ಸರ್ಕಾರದ ಬಜೆಟ್ ಹಣ ಹಂಚಿಕೆಯ ಮೂಲಕ ಸೆಳೆದು ಜಾತಿ ಸುತ್ತ ಕ್ರೋಢೀಕರಣ ಪ್ರಯತ್ನ ನಡೆದು ಯಶಸ್ವಿಯಾಯಿತು. ಸಂಘ ಪರಿವಾರದ ಫ್ಯಾಸಿಸ್ಟ್ ಮಾದರಿಯ ಕೋಮುವಾದದ ರಾಜಕಾರಣ ನಿರ್ಭಯವಾಗಿ ನಡೆಯುತ್ತ ವಿಸ್ತರಿಸಿ ತಲೆಯತ್ತಿ ಆಡತೊಡಗಿತು. ನರಹತ್ಯೆಯ ಗುಜರಾತ್ ಮಾದರಿಯಲ್ಲಿ ಕರ್ನಾಟಕ ಸಾಗಬೇಕು ಎಂಬ ಕಲ್ಪನೆ ಚಾಲನೆಗೆ ಬಂತು. ದುರಾಡಳಿತಕ್ಕೆ ಬೇಸತ್ತ ಜನ ಬಿಜೆಪಿಯನ್ನು ಅಧಿಕಾರಕ್ಕೆ ಬರದಂತೆ ತಡೆದರು. ಬಿ.ಎಸ್.ವೈ. ಕಾಲದ ಅವ್ಯವಹಾರಗಳ ಬೆಣ್ಣೆಯಲ್ಲಿ ಸಮಪಾಲು ಅನುಭವಿಸಿದ ರಾಷ್ಟ್ರೀಯ 'ಸಂಘ' ಒಂದು ಹಂತದಲ್ಲಿ ಅವರನ್ನೇ ಕೈ ಬಿಡಲು ಹೊರಟದ್ದು, ಬಲವಂತವಾಗಿ ಶಕ್ತಿ ರಾಜಕಾರಣದಿಂದ ಅವರನ್ನು ಹೊರದಬ್ಬಿದ್ದು ಮತ್ತೊಂದು ಹಂತ.

ಇವೆಲ್ಲವುಗಳ ನಡುವಿನಲ್ಲಿಯೇ ಬಿ.ಎಸ್. ವೈ. ವಿದಾಯದ ಮಾತುಗಳನ್ನು ಆಡಿದ್ದಾರೆ. ಈಗಲೂ ಬಿಜೆಪಿಯ ಗೆಲುವಿಗೆ ಶ್ರಮಿಸುವುದಾಗಿ ಹೇಳಿದ್ದಾರೆ. ಎಲ್ಲವೂ ತಣ್ಣಗಿದೆ ಎನ್ನುವಂತೆ ಕಂಡರೂ ಅಂತರಂಗದ ಬೇಗುದಿ ಖಂಡಿತಕ್ಕೂ ಆರಿಲ್ಲ. ಅವರ ಮಗ ಬಿ.ವೈ.ವಿಜಯೇಂದ್ರನಿಗೆ ರಾಜಕೀಯ ಭದ್ರ ಜಾಗ ಇನ್ನೂ ಸಿಕ್ಕಿಲ್ಲ. ಬಿ.ಎಸ್. ವೈ. ಬಂಟ ನಂದೇ ಹೇಳಲಾಗಿದ್ದ ಬೊಮ್ಮಾಯಿಯವರ ಸ್ಥಾನವು ಅಲುಗಾಡುತ್ತಿರುವುದು ಸುಳ್ಳಲ್ಲ. ಮುಂಬರುವ ಚುನಾವಣೆಯಲ್ಲಿ ಈ 'ರಾಜಾಹುಲಿ' ಎತ್ತ,ಯಾವ ಕಡೆ ಹೆಜ್ಜೆ ಹಾಕುತ್ತದೆ ಎನ್ನುವುದು ಗೊತ್ತಿಲ್ಲ. ಬಿ.ಎಸ್.ವೈ ತನ್ನದೆಲ್ಲವೂ ಮುಗಿಯಿತು ಎಂದು ವಿಶ್ರಾಂತಿ ಪಡೆದರೂ ಅದು ಬಿಜೆಪಿಗೆ ಮರ್ಮಾಘಾತ ಆಗಲೂಬಹುದು. ಅಂದರೆ ಈಗಲೂ ಬಿ.ಎಸ್.ವೈ.ಯ ಬಲ ಅಷ್ಟಾಗಿ ಕುಂದಿಲ್ಲ ಎಂಬುದೂ ಗೊತ್ತಿದೆ. ಅಮಿತ್ ಶಾ ಅಂತವರು ಬಾಯಿ ಮಾತಿನಲ್ಲಾದರೂ ಬಿ.ಎಸ್. ವೈ. ಯನ್ನು ಹೊಗಳುತ್ತಿದ್ದಾರೆ. ಆದರೆ ತೆರೆಯ ಮರೆಯ ಮಸಲತ್ತುಗಳ ನಡುವೆ ಅಂತಹ ಮಾತುಗಳಿಗೆ ಅರ್ಥವೆಲ್ಲಿ?

* * *

ಗಣಿನಾಡಿಗೆ ಗಣಿಗಳ್ಳರು

ಚುನಾವಣಾ ಪ್ರವಾಸ, ಪ್ರಚಾರವನ್ನು ಮುಂದುವರಿಸಿರುವ ಗೃಹ ಸಚಿವ ಅಮಿತ್ ಶಾ ಮೋದಿ ಮತ್ತು ಯಡ್ಯೂರಪ್ಪನವರ ಮೇಲೆ ನಂಬಿಕೆ ಇರಿಸಿ ಮತ ನೀಡುವಂತೆ ಕೋರಿದ್ದಾರೆ. ಒಬ್ಬರು ದೇಶ ಮತ್ತು 'ವಿದೇಶಗಳ ನಾಯಕರು. ಮತ್ತೊಬ್ಬರು ಗದ್ಗದಿತ ಕಂಠದಲ್ಲಿ 'ವಿದಾಯ' ಹೇಳಿ ನಿರ್ಗಮಿಸುತ್ತಿರುವ ನಾಯಕರು. ಅಂದರೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಾಯಕತ್ವದಲ್ಲಿಯೇ ಚುನಾವಣೆ ಎನ್ನುವುದಕ್ಕೆ ಅರ್ಥ ಏನಿದೆ? ಅಧಿಕಾರದ ಹೊಣೆಗಾರಿಕೆ ಇರುವ ಅವರ ಮೇಲೆ ವಿಶ್ವಾಸ ಇಡದೇ ಇಲ್ಲದ ಹೊರಗಿನವರ ಮೇಲೆ ವಿಶ್ವಾಸ ಇಡಬೇಕು ಎನ್ನುವುದು ಏನನ್ನು ಸೂಚಿಸುತ್ತದೆ?

ಈಗಾಗಲೇ ಚರ್ಚೆ ನಡೆಯುತ್ತಿರುವ 'ಪೇಶ್ವೇ ವಂಶಸ್ಥ'ರಿಗೆ ಮುಂದಿನ ಸಿ.ಎಂ.ಪಟ್ಟ ಕಟ್ಟುವ ಯೋಜನೆಯ ಹಿನ್ನೆಲೆಯಲ್ಲಿ ಹೇಗೆ ಅರ್ಥ ಮಾಡಿಕೊಳ್ಳ ಬೇಕು? ಒಂದಂತೂ ನಿಜ, ಬಿಜೆಪಿ–ಆರ್.ಎಸ್.ಎಸ್. ರಾಜ್ಯಗಳಲ್ಲಿ ಸ್ಥಳೀಯ ನಾಯಕತ್ವ ಬಲಿಷ್ಠವಾಗಿ ಬೆಳೆಯಬಾರದು, ಸ್ಥಳೀಯವಾಗಿ ಬೇರಿರುವ ಯಾರೂ ನಾಯಕರಾಗಿರಬಾರದು, ಏನಿದ್ದರೂ ಕೇಂದ್ರ ನಾಯಕರ ಆಜ್ಞೆಗಳನ್ನು ಪಾಲಿಸುವ ಡೆಮ್ಮಿಗಳೇ ಇರಬೇಕು ಎನ್ನುವುದನ್ನು ಅತ್ಯಂತ ಪ್ರಜ್ಞಾಪೂರ್ವಕವಾಗಿ ಜಾರಿಗೆ ತರುತ್ತಿದೆ.

ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿ ವಿಜಯ ಸಂಕಲ್ಪ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ ಶಾ ರವರು 'ಕರ್ನಾಟಕ ಕಾಂಗ್ರೆಸ್ ಪಕ್ಷಕ್ಕೆ ಎ.ಟಿ.ಎಂ. ಆಗಿದೆ ಎನ್ನುವ ಕಳೆದ ಚುನಾವಣೆಯ ಬಿಜೆಪಿ ನಾಯಕರ ಹಳೇ ಡೈಲಾಗ್ ಹೊಡೆದಿದ್ದಾರೆ. ವಿಚಿತ್ರ ಎಂದರೆ ಭ್ರಷ್ಟಾಚಾರ ಮುಕ್ತ ಆಡಳಿತಕ್ಕಾಗಿ ಬಿಜೆಪಿಯ ಮೇಲೆ ಅದರಲ್ಲೂ ಮೋದಿ, ಯಡ್ಯೂರಪ್ಪನವರ ಮೇಲೆ ವಿಶ್ವಾಸ ಇಡಬೇಕು ಎನ್ನುವ ಶಾ ಅವರದ್ದು ಈ ದಶಕದ ಬಹು ದೊಡ್ಡ ಜೋಕು. ಬಿಜೆಪಿ ಎನ್ನುವುದೇ ಭ್ರಷ್ಟಾಚಾರದ ಮಹಾ ಗಂಗೋತ್ರಿಯಾಗಿರುವಾಗ, 40 ಪರ್ಸೆಂಟ್ ಸರ್ಕಾರ ಎನ್ನುವ ಅಂಶ ಜಗಜ್ಜಾಹೀರಾಗಿರುವ ಆ ಕಾರಣಕ್ಕೇ ಕಂಟ್ರಾಕ್ಟರ್ ಗಳ ಆತ್ಮಹತ್ಯೆ ನಡೆದಿರುವಾಗ, ಮೇಲಾಗಿ ಆ ಕಾರಣಕ್ಕೆ ಹಿರಿಯ ಸಚಿವ ಕೆ.ಎಸ್.ಈಶ್ವರಪ್ಪ ರಾಜಿನಾಮೆ ನೀಡಿ ಮತ್ತೇ ಮಂತ್ರಿಯಾಗಲು ಹಪಾಹಪಿಸುತ್ತಿರುವಾಗ ಅಮಿತ್ ಶಾ ಆಡುವ ಮಾತು ಭಂಡತನದ ಪರಮಾವಧಿ. ಅದರಲ್ಲೂ ಅಕ್ಕ ಪಕ್ಕದಲ್ಲಿ ಗಣಿಗಳರನ್ನು, ಹಗರಣಗಳಲ್ಲಿ ಜೈಲಿಗೆ ಹೋಗಿ ಬಂದವರನ್ನು ಕೂಡಿಸಿಕೊಂಡು! ಮೋದಿ ಮತ್ತು ಶಾ ರವರು ಕಾಂಗ್ರೆಸ್ ಸರ್ಕಾರ ಹತ್ತು ಪರ್ಸೆಂಟ್ ನ ಎ.ಟಿ.ಎಂ. ಮೇಲೆ ಕಣ್ಣಿರಿಸಿಯೇ ಶಾಸಕರನ್ನು ಖರೀದಿಸಿ ಸರ್ಕಾರ ಹಿಡಿದದ್ದು ಯಾತಕ್ಕೆ?

ಮೊಳಕಾಲ್ಮೂರು ಕ್ಷೇತ್ರದ ಶಾಸಕರಾಗಿರುವ ಸಚಿವ ಶ್ರೀರಾಮುಲು ಸಂಡೂರು ಕ್ಷೇತ್ರಕ್ಕೆ ವಲಸೆ ಬರುವರೆಂಬ ಸುದ್ದಿಗೆ ಈ ಸಮಾವೇಶ ಮತ್ತು ಶ್ರೀರಾಮುಲು ಭಾಷಣ ಖಾತ್ರಿಗೊಳಿಸಿದೆ. ಬಾದಾಮಿ ಕ್ಷೇತ್ರದಿಂದ ಸ್ಪರ್ದೆಯನ್ನು ಬದಲಿಸಬಾರದು ಎಂದು ವಿಧಾನಸಭೆಯಲ್ಲಿ ಸಿದ್ಧರಾಮಯ್ಯನವರಿಗೆ ಹಿಂದಿನ ದಿನವೇ ಉಪದೇಶ ಮಾಡಿ ಬಂದಿದ್ದ ಯಡ್ಯೂರಪ್ಪನವರು ಶ್ರೀರಾಮುಲುಗೂ ಹೇಳಿದ್ದರೆ ಚೆನ್ನಾಗಿತ್ತು.

ಸಂಡೂರು ಆಗರ್ಭ ಗಣಿ ಸಂಪತ್ತು, ಅರಣ್ಯ ಸಂಪತ್ತು ಇರುವ ಪ್ರದೇಶ. ಮೇಲಾಗಿ ಜಿಂದಾಲ್ ನಂತಹ ಬೃಹತ್ ಉಕ್ಕು ಉದ್ಯಮ ಸರಣಿಯೂ, ಎನ್.ಎಂ.ಡಿ.ಸಿ.ಯಂತಹ ನವರತ್ನವೂ ಇಲ್ಲಿದೆ. ಹಾಲಿ ಇರುವ ಕಾಂಗ್ರೆಸ್ ಶಾಸಕ ತುಕರಾಂ ರವರನ್ನು ಪದಚ್ಯುತಿಗೊಳಿಸಿ ಸಂಡೂರು ಹಿಡಿಯಲು ಗಣಿಗಳ್ಳರ ಗ್ಯಾಂಗ್ ನಡೆಸಿರುವ ಪ್ರಯತ್ನ ಮರೆಮಾಚಿದ್ದೇನಲ್ಲ.

ಇಲ್ಲಿಯ ಕುಮಾರಸ್ವಾಮಿಗೆ 'ಸುಬ್ರಹ್ಮಣ್ಯ' ಎಂದು ಸಚಿವ ಶ್ರೀರಾಮುಲು ಸೊಫೆಸ್ಟಿಕೇಟ್ ಆಗಿ ಹೇಳುತ್ತಿದ್ದುದು, ಆತನ ಆಶೀರ್ವಾದ ಪಡೆದು ಯುದ್ಧಕ್ಕೆ ಹೋದವರು ಗೆಲ್ಲುತ್ತಿದ್ದರೆನ್ನುತ್ತಾ ಪರೋಕ್ಷವಾಗಿ ತನ್ನನ್ನು ಅದಕ್ಕೆ ಸಮೀಕರಿಸಿಕೊಳ್ಳುತ್ತಿದುದೂ, ಗಾಂಧೀಜಿ, ಯಶವಂತರಾವ್ ಘೋರ್ಪಡೆ, ಕಾರ್ತಿಕ ಘೋರ್ಪಡೆ ಯವರನ್ನು ಕೊಂಡಾಡಿದ್ದು (ಎಂ. ವೈ. ಘೋರ್ಪಡೆ ನೆನಪಿಸಿಕೊಳ್ಳಲಿಲ್ಲ ಅವರು ಕಾಂಗ್ರೆಸ್ ಅಲ್ಲವೇ) ಗಾಂಧಿಯವರು ಪ್ರತಿಪಾದಿಸಿದ ಯಾವ ಮೌಲ್ಯ, ಯಾವ ಪಕ್ಷಕ್ಕೆ ಸೇರಿದವರು ಎನ್ನುವುದಕ್ಕಿಂತ ಇಮೇಜ್ ಹೆಚ್ಚಿಸಿಕೊಳ್ಳುವ ಸಂದರ್ಭಸಾಧಕತೆ ಎದ್ದು ಕಾಣುತ್ತಿತ್ತು. ಎಸ್.ಸಿ ಮತ್ತು ಎಸ್.ಟಿ.ಮತಗಳನ್ನು ಸೆಳೆಯಲು ವಿಶೇಷ ತಂತ್ರ ಮಾಡುತ್ತಿರುವುದು ಸಮಾವೇಶದುದ್ದಕ್ಕೂ ಕಂಡು ಬಂದ ಅಂಶ. 'ಮಹಾನ್ ನಾಯಕರೇ' ತುಂಬಿದ್ದ ವೇದಿಕೆಯಲ್ಲಿ ಜಾತಿ ಮತ್ತು ಪಾಳೇಗಾರಿ ಅಸ್ಮಿತತೆ ಬಳಸಲು ಯತ್ನಿಸಲಾಗುತ್ತಿತ್ತೇ ಹೊರತು ಅಲ್ಲಿಯ ಜನರ ಬವಣೆಗಳ ಬಗ್ಗೆ, ಪರಿಹಾರದ ಬಗ್ಗೆ ಮಾತೇ ಇಲ್ಲ.



ರಾಜ್ಯ ಪ್ರಾಯೋಜಿತ ಜಾಗೃತದಳದಿಂದ ಕೊಲೆ

ಪ್ರಕಾಶ್ ಕಾರತ್

ರಾಜಸ್ಥಾನ ಮತ್ತು ಹರಿಯಾಣ ರಾಜ್ಯಗಳ ಗಡಿಯಲ್ಲಿ ಸಮೀಪದ ಪೆರುಕಾ ಬಳಿ ಫೆಬ್ರವರಿ 16 ರಂದು ಪ್ರಾರಂಭವಾದ ಘಟನೆಗಳು ಹರಿಯಾಣದ ಭಿವಾನಿ ಜಿಲ್ಲೆಯ ನುಹ್ ಪ್ರದೇಶದಲ್ಲಿ ಅಂತ್ಯಗೊಂಡವು, ಇದು ಜುನೈದ್ ಮತ್ತು ನಾಸಿರ್ ಎಂಬ ಇಬ್ಬರು ಮುಸ್ಲಿಮರ ಮೇಲೆ ನಡೆದ ಅನಾಗರಿಕ ಮತ್ತು ಕ್ರೂರ ಹಿಂಸೆ ಮಾತ್ರವಲ್ಲ, 'ಗೋ ರಕ್ಷಣೆ'ಯ ಹೆಸರಿನಲ್ಲಿ ಯಾವುದೇ ಭಯವಿಲ್ಲದೆ ಅಪರಾಧಗಳನ್ನು ಮಾಡಲು ಅನುಮತಿಸಲಾಗಿರುವ ಹರಿಯಾಣ ಪೊಲೀಸರು ಮತ್ತು ಗೋರಕ್ಷಕರ ನಡುವಿನ ಸಂಬಂಧಗಳನ್ನು ಈ ಪ್ರಕರಣ ಬಹಿರಂಗಗೊಳಿಸಿದೆ.

ಈ ಪ್ರಕರಣದ ವಿವರಗಳು ಎಲ್ಲರಿಗೂ ತಿಳಿದಿವೆ. ನಾಸಿರ್ ಮತ್ತು ಜುನೈದ್ ಕೆಲವು ಸಂಬಂಧಿಕರನ್ನು ಭೇಟಿ ಮಾಡಲು ಬೊಲೆರೋ ಕಾರೊಂದರಲ್ಲಿ ಮನೆಯಿಂದ ಹೊರಟಿದ್ದರು. ಅವರು ಹಿಂದಿರುಗುವಾಗ,

ಪೆರುಕಾದಲ್ಲಿ ಗೋ ರಕ್ಷಕರ ಗುಂಪು ಅವರನ್ನು ಬೆನ್ನಟ್ಟಿ ತಡೆದರು. ನಂತರ ಆ ಇಬ್ಬರನ್ನು ಕ್ರೂರವಾಗಿ ಥಳಿಸಲಾಯಿತು. ಥಳಿತದಿಂದ ತೀವ್ರವಾಗಿ ಗಾಯಗೊಂಡು ಅರೆ–ಸತ್ತಂತಿದ್ದವರನ್ನು ನುಹ್ ನಲ್ಲಿರುವ ಸ್ಥಳೀಯ ಪೊಲೀಸ್ ಠಾಣೆಗೆ ಕರೆದೊಯ್ಯಲಾಯಿತು. ಪೊಲೀಸರು ದೂರು ಸ್ವೀಕರಿಸುವುದನ್ನು ನಿರಾಕರಿಸುವ ಮೂಲಕ ಹಲ್ಲೆಗೊಳಗಾದವರಿಗೆ ರಕ್ಷಣೆ ಕೊಡುವ ತಮ್ಮ ಜವಾಬ್ದಾರಿಯಿಂದ ನುಣುಚಿಕೊಂಡರು. ನಂತರ ಗೋರಕ್ಷಕರು ಅವರನ್ನು ಮತ್ತು ಅವರ ವಾಹನದಲ್ಲಿ ಲೋಹರುಗೆ ಕರೆದೊಯ್ದು ವಾಹನಕ್ಕೆ ಬೆಂಕಿ ಹಚ್ಚಿದರು. ನಾಸಿರ್ ಮತ್ತು ಜುನೈದ್ ಸುಟ್ಟು ಕರಕಲಾದರು.

ಅವರ ಕುಟುಂಬದ ಸದಸ್ಯರು ದಾಖಲಿಸಿದ ಎಫ್ಐಆರ್ ನಲ್ಲಿ ಆ ಪ್ರದೇಶದ ಪ್ರಮುಖ ಗೋರಕ್ಷಕರನ್ನು ಹೆಸರಿಸಲಾಗಿದೆ. ಅವರಲ್ಲಿ ಅತ್ಯಂತ ಕುಖ್ಯಾತನೆಂದರೆ ನುಹ್‌ನಲ್ಲಿ ವಾಸಿಸುವ ಮೋನು ಯಾದವ್ ಅಲಿಯಾಸ್ ಮಾನೇಸರ್. ಅವರು ಬಂದೂಕುಗಳೊಂದಿಗೆ ಬಹಿರಂಗವಾಗಿ ಸಾರ್ವಜನಿಕ ಸ್ಥಳಗಳಲ್ಲಿ ಓಡಾಡುತ್ತಾರೆ. ಈ ಗೋರಕ್ಷಕರು 'ಹಸು ಕಳ್ಳಸಾಗಾಣಿಕೆದಾರರನ್ನು' ಥಳಿಸುವುದನ್ನು, ಅವರಿಗೆ ಹಸುವಿನ ಸಗಣಿ ತಿನ್ನುವಂತೆ ಒತ್ತಾಯಿಸುವುದನ್ನು, ಅವರ ವಾಹನಗಳನ್ನು ಬೆನ್ನಟ್ಟಿ ಗುಂಡು ಹಾರಿಸುವುದನ್ನು ವಿಡಿಯೋ ಮಾಡಿ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡುತ್ತಾರೆ.

ಎಫ್ಐಆರ್‌ನಲ್ಲಿ ಹೆಸರಿಸಲಾದ ಮೂವರು ಪೊಲೀಸ್ ಮಾಹಿತಿದಾರರು ಎಂಬುದನ್ನು ಹರಿಯಾಣ ಪೊಲೀಸರು ಈಗ ಒಪ್ಪಿಕೊಂಡಿದ್ದಾರೆ. ಪೊಲೀಸರು ಮತ್ತು ಗೋರಕ್ಷಕರ ನಡುವಿನ ಈ ಸಂಬಂಧದ ಹಿಂದಿನ ಮಾಹಿತಿಗಳು ಹೆಚ್ಚು ತಿಳಿದಿಲ್ಲದಿದ್ದರೂ, ಇದು ಅತ್ಯಂತ ಅಪಾಯಕಾರಿ ಸಂಗತಿಯಾಗಿದೆ ಎಂಬುದಂತೂ ಸತ್ಯ. ಹರ್ಯಾಣದ ಬಿಜೆಪಿ ಸರ್ಕಾರವು 2015 ರಲ್ಲಿ ಕ್ರೂರವಾದ ಗೋ ಸಂರಕ್ಷಣಾ ಕಾಯ್ದೆಯನ್ನು ಜಾರಿಗೊಳಿಸಿತು, 2021 ರಲ್ಲಿ ಪ್ರತಿ ಜಿಲ್ಲೆಯಲ್ಲಿ ವಿಶೇಷ ಗೋ ಸಂರಕ್ಷಣಾ ಕಾರ್ಯಪಡೆಯನ್ನು ಸ್ಥಾಪಿಸುವ ಅಧಿಸೂಚನೆಯೊಂದಿಗೆ ಅದನ್ನು ಮುಂದುವರಿಸಿತು. ಪ್ರತಿ ಜಿಲ್ಲೆಯಲ್ಲಿ, 11 ಸದಸ್ಯರ ಕಾರ್ಯಪಡೆಗೆ ಐವರು ಅಧಿಕಾರಿಗಳಲ್ಲದ ಸದಸ್ಯರನ್ನು ನಾಮನಿರ್ದೇಶನ ಮಾಡಲು ಅನುಮತಿಸಲಾಗಿದೆ, ಅವರಲ್ಲಿ ಇಬ್ಬರನ್ನು ಸ್ಥಳೀಯ ಗೋರಕ್ಷಕ ಸಮಿತಿಗಳಿಂದ ಆಯ್ಕೆ ಮಾಡಲಾಗುತ್ತದೆ. ಇದರ ಅರ್ಥವೇನೆಂದರೆ, ಬಜರಂಗದಳ ಮತ್ತು ಇತರ ಕೇಸರಿ ಸಂಘಟನೆಗಳಿಗೆ ಸೇರಿದ ಎಲ್ಲಾ ಗೋರಕ್ಷಕ ಸದಸ್ಯರಿಗೆ ಗೋವು ಕಳ್ಳಸಾಗಣೆ ಅಥವಾ ಗೋಹತ್ಯೆಯೊಂದಿಗೆ ಸಂಬಂಧ ಹೊಂದಿರುವ ಎಲ್ಲಾ ಘಟನೆಗಳಲ್ಲಿ ವಿವಿಧ ರೀತಿಯಲ್ಲಿ ಮಧ್ಯಪ್ರವೇಶಿಸಲು ಅಧಿಕೃತ ಅನುಮತಿಯನ್ನು ನೀಡಲಾಗಿದೆ. ವಾಸ್ತವವಾಗಿ ಅವರು ಈಗ ಕಾನೂನನ್ನು ತಮ್ಮ ಕೈಗೆ ತೆಗೆದುಕೊಳ್ಳಲು ಅಧಿಕೃತ ಅನುಮತಿಯೊಂದಿಗೆ ಅಂಗೀಕಾರ ಪಡೆದ ಪೊಲೀಸ್ ಮಾಹಿತಿದಾರರ ತಂಡವನ್ನು ರಚಿಸುತ್ತಾರೆ.

ಈ ನಿರ್ದಿಷ್ಟ ಪ್ರಕರಣದಲ್ಲಿ, ರಾಜಸ್ಥಾನ ಪೊಲೀಸರು ಶಾಮೀಲಾಗಿದ್ದಾರೆ ಎಂಬ ಕಾರಣಕ್ಕೆ ಹಲವು ವಿಷಯಗಳಲ್ಲಿ ಬಹಿರಂಗಪಡಿಸಿರುವುದು ಮಾತ್ರವಲ್ಲದೆ ಪ್ರಮುಖ ಆರೋಪಿಗಳಲ್ಲಿ ಒಬ್ಬರಾದ ರಿಂಕು ಸೈನಿಯನ್ನು ಬಂಧಿಸಲಾಗಿದೆ ಮತ್ತು ಮೋನು ಯಾದವ್‌ನನ್ನು 'ಪರಾರಿಯಾಗಲು' ಒತ್ತಡ ಹೇರಲಾಗಿದೆ.

ವಿಎಚ್‌ಪಿ, ಭಾಜಪ ಮತ್ತಿತ್ತರರು ರಾಜಾಸ್ಥಾನದ ಪೊಲೀಸರ ವಿರುದ್ಧ ಹರಿಹಾಯ್ದಿದಿದ್ದಲ್ಲದೆ, ಆರೋಪಿಗಳನ್ನು ಬಂಧಿಸುವಲ್ಲಿ ಅತಿಯಾದ ಬಲಪ್ರಯೋಗ ಮಾಡಿದ್ದಾರೆ ಎಂದು ಆರೋಪಿಸಿ, ಆರೋಪ ಸಜ್ಜೆ ದಾಖಲಿಸಿದ್ದಾರೆ. ಜುನೈದ್ ಮತ್ತು ನಾಸಿಕ್‌ರವರನ್ನು ಹತ್ಯೆಗೈದ ಆರೋಪಿಗಳ ನಿರುಪರಾಧಿಗಳೆಂದು' ಅವರು ಬೊಬ್ಬೆ ಹಾಕುತ್ತಿದ್ದಾರೆ. ಆಸಕ್ತಿದಾಯಕ ವಿಷಯವೆನೆಂದರೆ ಭಾಜಪ ಪರವಾಗಿರುವ ಬಲಪಂಥೀಯ ಮಾಧ್ಯಮ ಸಂಸ್ಥೆಯಾದ Opindia ನಡೆಸಿದ, ಕುಟುಕು ಕಾರ್ಯಾಚರಣೆಯಲ್ಲಿ ರಿಂಕು ನಿಜವಾಗಿಯೂ ಅಪರಾಧಿ ಎಂದು ಹರಿಯಾಣದ ಪೊಲೀಸ್ ಒಬ್ಬರು ಹೇಳಿರುವುದು.

ಆರೋಪಿಗಳ ಬಗ್ಗೆ ಸಹಾನುಭೂತಿ ಗಳಿಸುವ ಸಲುವಾಗಿ, ಭಿವಾನಿಯಲ್ಲಿ ಮಹಾಪಂಚಾಯತ್ ಅನ್ನು ಆಯೋಜಿಸಲಾಯಿತು. ಇದರಲ್ಲಿ ಸುಮಾರು 80 ಜನರು ಮಾತ್ರ ಭಾಗವಹಿಸಿದ್ದರು. ಅಲ್ಲಿ ಸ್ಥಳೀಯ ಪಂಚಾಯತ್ ನ ಮುಖಂಡರೊಬ್ಬರು ರಾಜಸ್ಥಾನ ಪೊಲೀಸರಿಗೆ 'ಅವರು ಧೈರ್ಯ ಮಾಡಿ ಇಲ್ಲಿಗೆ ಬಂದರೆ ಅವರು ತಮ್ಮ ಕಾಲು ಮುರಿಸಿಕೊಂಡು ಹೋಗುತ್ತಾರೆ' ಬೆದರಿಕೆ ಹಾಕಿದರು. ಸಹಜವಾಗಿ, ಮಹಾಪಂಚಾಯತ್ ಇದು ಮತ್ತು ಇತರ ಆಕ್ಷೇಪಾರ್ಹ ಹೇಳಿಕೆಗಳನ್ನು ಆಡಳಿತ ಮತ್ತು ಪೊಲೀಸರ ಎದುರೇ ಹೇಳಲಾಯಿತು.

ಘಟನೆಯ ಭಯಾನಕ ಸ್ವರೂಪದ ಹೊರತಾಗಿಯೂ, ಎರಡು ರಾಜ್ಯಗಳ ಪೋಲೀಸ್ ಪಡೆಗಳು ಪರಸ್ಪರರ ವಿರುದ್ಧ ಕಣಕ್ಕಿಳಿದಿದ್ದರೂ, ಹರಿಯಾಣದ ಮುಖ್ಯಮಂತ್ರಿಯಾಗಲೀ ಅಥವಾ ದೇಶದ ಗೃಹ ಸಚಿವರಾಗಲೀ ಈ ಬಗ್ಗೆ ಪ್ರತಿಕ್ರಿಯಿಸಲು ಮುಂದಾಗಿಲ್ಲ.

ಅದು ಈಗ ನಿಂತಿದೆ, ಆದಾಗ್ಯೂ, ಒಂದು ವಿಷಯವಂತೂ ಸ್ಫಟಿಕದಷ್ಟು ಸ್ಪಷ್ಟವಾಗಿದೆ. ಇಡೀ ದೇಶದಲ್ಲಿ ಬಿಜೆಪಿ ಸರ್ಕಾರದಿಂದ ಸಂವಿಧಾನದ ಮೇಲಿನ ದಾಳಿಗಳ ಬಗ್ಗೆ ಆತಂಕವಿದೆ. ಹರಿಯಾಣದಲ್ಲಿ ಕನಿಷ್ಠ ಪಕ್ಷ ಮುಸ್ಲಿಮರಿಗೆ ಸಂಬಂಧಿಸಿದಂತೆ ಸಂವಿಧಾನದ ಆಜ್ಞೆ ಇನ್ನು ಹೆಚ್ಚು ಕಾಲ ನಡೆಯುವುದಿಲ್ಲ.

ಹೈದರಾಬಾದ್ ವಿವಿ ಎಲೆಕ್ಷನ್: ಎಡ–ಪ್ರಗತಿಪರ ಒಕ್ಕೂಟಕ್ಕೆ ಭರ್ಜರಿ ಜಯ



ಹೈದರಾಬಾದ್ ವಿಶ್ವವಿದ್ಯಾಲಯದಲ್ಲಿ ನಡೆದ ವಿದ್ಯಾರ್ಥಿಗಳ ಸಂಘದ ಚುನಾವಣೆಯಲ್ಲಿ, ಎಸ್ಎಫ್ಐ, ಡಿಎಸ್‌ಯು, ಎಎಸ್‌ಎ ನೇತೃತ್ವದ 'ಎಡ–ಪ್ರಗತಿಪರ ವಿದ್ಯಾರ್ಥಿ ಮೈತ್ರಿಕೂಟ' ಭರ್ಜರಿ ಜಯಭೇರಿ ಬಾರಿಸಿದ್ದು, ಬಿಜೆಪಿ ಬೆಂಬಲಿತ ಎಬಿವಿಪಿ ಮತ್ತು ಕಾಂಗ್ರೆಸ್ ಅಂಗವಾದ ಎನ್‌ಎಸ್‌ಯುಐ ಮುಖಭಂಗ ಅನುಭವಿಸಿವೆ.

ಕೊವೀಡ್ ಕಾರಣದಿಂದಗಿ ಮೂರುವರೆ ವರ್ಷಗಳ ನಂತರ ನಡೆದ ಚುನಾವಣೆಯಲ್ಲಿ ಎಡ ಮತ್ತು ಪ್ರಗತಿಪರ ವಿದ್ಯಾರ್ಥಿಗಳ ಮೈತ್ರಿಕೂಟ ಗೆಲುವನ್ನು ತನ್ನದಾಗಿಸಿಕೊಂಡಿದೆ. ಫೆಬ್ರವರಿ 24 ಶುಕ್ರವಾರದಂದು ವಿದ್ಯಾರ್ಥಿ ಸಂಘದ ಚುನಾವಣೆ ನಡೆದಿತ್ತು. 5,000 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮತ ಚಲಾಯಿಸಲು ಅರ್ಹರಾಗಿದ್ದರು ಮತ್ತು ಶೇಕಡಾ 76 ರಷ್ಟು ಮತದಾನವಾಗಿತ್ತು.

ಅಧ್ಯಕ್ಷ, ಪ್ರಧಾನ ಕಾರ್ಯದರ್ಶಿ, ಜಂಟಿ ಕಾರ್ಯದರ್ಶಿ, ಸಾಂಸ್ಕೃತಿಕ ಮತ್ತು ಕ್ರೀಡಾ ಕಾರ್ಯದರ್ಶಿ ಸೇರಿದಂತೆ ಎಲ್ಲಾ ಪ್ರಮುಖ ಹುದ್ದೆಗಳನ್ನೂ ಈ ಮೈತ್ರಿಕೂಟ ಗೆದ್ದುಕೊಂಡಿದೆ. ASA-SFI-DSU ಮೈತ್ರಿಯ ಕೂಟ ಹಾಗೂ ABVP ನಡುವೆ ಪೈಪೋಟಿ ಏರ್ಪಟ್ಟಿತ್ತು. ಎಬಿವಿಪಿ ಎಲ್ಲಾ ಕ್ಷೇತ್ರಗಳಲ್ಲಿ ಎರಡನೇ ಸ್ಥಾನ ಪಡೆದಿದ್ದರೆ NSUI ಮೂರನೇ ಸ್ಥಾನಕ್ಕೆ ತಳ್ಳಲ್ಪಟ್ಟಿದೆ. ಶುಕ್ರವಾರ ತಡರಾತ್ರಿ ಮತದಾನದ ನಂತರ ಹಾಸ್ಟೆಲ್ ಬಳಿ ಎಬಿವಿಪಿ ಮತ್ತು ಎಸ್ಎಫ್ಐ ಕಾರ್ಯಕರ್ತರ ನಡುವೆ ಘರ್ಷಣೆ ನಡೆದಿತ್ತು. ಎಬಿವಿಪಿ ಬೆಂಬಲಿತ ವಿದ್ಯಾರ್ಥಿಗಳು ಸೋಲುವ ಹತಾಶೆಯಿಂದ ಎಸ್ಎಫ್ಐ ಬೆಂಬಲಿತ ವಿದ್ಯಾರ್ಥಿಗಳ ಮೇಲೆ ಹಲ್ಲೆ ಮಾಡಿದ್ದರು.

ASA-SFI-DSU ಪ್ಯಾನೆಲ್‌ನಿಂದ ಕಣಕ್ಕಿಳಿದ ಎಲ್ಲಾ ಅಭ್ಯರ್ಥಿಗಳು ತಮ್ಮ ತಮ್ಮ ಹುದ್ದೆಗಳನ್ನು ಗೆದ್ದಿದ್ದಾರೆ. ವಿಜೇತರಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಎಡ ಮೈತ್ರಿಕೂಟದ ಪ್ರಜ್ವಲ್ 1838 ಮತ ಪಡೆದರೆ, ಎಬಿವಿಪಿಯ ಬಾಲಕೃಷ್ಣ 1230 ಮತ ಪಡೆದಿದ್ದಾರೆ. 608 ಮತಗಳಿಂದ ಪ್ರಜ್ವಲ್ ಜಯಗಳಿಸಿದ್ದಾರೆ. ಉಪಾಧ್ಯಕ್ಷ ಸ್ಥಾನಕ್ಕೆ ಎಡಮೈತ್ರಿಕೂಟದ ಪೃಥ್ವಿ ಸಾಯಿ, 1860 ಮತಗಳನ್ನು ಪಡೆದರೆ ಎಬಿವಿಪಿಯ ಸೇಬ್ರಾಂತ್ ಮುಜುಮ್ದಾರ್ 1153 ಮತ ಪಡೆದಿದ್ದಾರೆ. ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಎಡಮೈತ್ರಿಕೂಟದ ಕೃಪಾ ಮರಿಯಾ ಜಾರ್ಜ್ 2076 ಮತಗಳನ್ನು ಪಡೆದರೆ, ಎಬಿವಿಪಿಯ ಸಾಕ್ಷಿ 1185 ಮತ ಪಡೆದಿದ್ದಾರೆ. ಮತ್ತು ಜಂಟಿ ಕಾರ್ಯದರ್ಶಿ ಸ್ಥಾನಕ್ಕೆ ಎಡಮೈತ್ರಿಕೂಟದ ಕತಿ ಗಣೇಶ್ 1617 ಪಡೆದರೆ, ಎಬಿವಿಪಿಯ ಕಪಿಲ್ ದೇವ್ 1011 ಮತ ಪಡೆದಿದ್ದಾರೆ.



ಅದಾನಿ ವಂಚನೆ ಬಯಲು: ಛಿದ್ರಗೊಂಡಿರುವ ಮಾರುಕಟ್ಟೆ ಆರ್ಥಿಕತೆ

ಮೋದಿ ಅಧಿಕಾರದಿಂದ ಇಳಿದು ತಮ್ಮ ರಾಜಕೀಯ ವಿಶ್ವಾಸಾರ್ಹತೆಯನ್ನು ಉಳಿಸಿಕೊಳ್ಳುತ್ತಾರೆಯೇ?

ಪರ್.ಎಂ. ನಾಗನಾಥನ್



ಅದಾನಿಯಿಂದ ಛಿದ್ರಗೊಂಡಿರುವ ಮಾರುಕಟ್ಟೆ ಆರ್ಥಿಕತೆಯು ಕುಸಿತದತ್ತ ಕ್ಷಿಪ್ರಯಾತ್ರೆಯನ್ನು ಮುಂದುವರಿಸಿದೆ. ಇದರ ಹೊಣೆ ಹೊರಬೇಕಾದ ಪ್ರಧಾನಿ ಮೋದಿ ಮೌನವಾಗಿದ್ದಾರೆ. ಅವರು ತಮ್ಮ ಜವಾಬ್ದಾರಿಯಿಂದ ಜಾರಿಕೊಳ್ಳುತ್ತಿದ್ದಾರೆ.

ದೇಶದ ಬಹುಪಾಲು ಜನತೆ ಬಡತನದಲ್ಲಿ ನರಳುತ್ತಿದೆ. ಬಹುತೇಕ ಯುವಜನರು ನಿರುದ್ಯೋಗದಿಂದ ಬಳಲುತ್ತಿದ್ದಾರೆ. ಕೇಂದ್ರ ಸರ್ಕಾರದ ಈ ವರ್ಷದ ಹಣಕಾಸು ವರದಿಯು ಉದ್ಯಮಿಗಳ–ಶ್ರೀಮಂತರ ಪರವಾದ ವರದಿಯಾಗಿ ರೂಪುಗೊಂಡಿದೆ. ಆದರೆ, ಹಣಕಾಸು ವರದಿಯ ದಿನ, ಷೇರುಪೇಟೆಯಲ್ಲಿ ಕುಸಿತ ಕಂಡು ಬಂದಿದೆ. ಅದಾನಿ ಸಮೂಹದ ವಂಚನೆಯೇ ಷೇರು ಮಾರುಕಟ್ಟೆಯಲ್ಲಿನ ಕುಸಿತಕ್ಕೆ ಕಾರಣ. ಮತ್ತೊಂದೆಡೆ ಬಡ ಮಧ್ಯಮ ವರ್ಗದವರ ಮೇಲೆ ತೆರಿಗೆ ಹೊರೆ ಹೆಚ್ಚಿಸಲಾಗಿದೆ. ಸರಕು ಮತ್ತು ಸೇವಾ ತೆರಿಗೆಯನ್ನು ಹೇರುವುದೆಂದರೆ ಜನತೆಯ ಮೇಲೆ ಒಂದು ರೀತಿಯ ಮರೆಮಾಚುವ ದೌರ್ಜನ್ಯದ ಸಂಕೇತವಾಗಿದೆ. ಶೇ. 66ರಷ್ಟು ಬಡವರು ಮತ್ತು ಮಧ್ಯಮ ವರ್ಗದವರ ಈಗಿನ ಕಡಿಮೆ ಆದಾಯವೂ ಇನ್ನಷ್ಟು ಕುಸಿಯುತ್ತಿದೆ. ಕುಟುಂಬದ ಉಳಿತಾಯವು ಸಾರ್ವಕಾಲಿಕ ಕನಿಷ್ಠ ಶೇ. 7ಕ್ಕೆ ಕುಸಿದಿದೆ.

ಬಡವರಿಗಾಗಿ ಸಣ್ಣ ಪ್ರಮಾಣದ ಆದಾಯ ಭದ್ರತೆಯ ಯೋಜನೆಯಾಗಿರುವ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಕತ್ತರಿ ಹಾಕಲಾಗಿದೆ. ಕಳೆದ ಕೆಲವು ವರ್ಷಗಳಿಂದ, ಹಲವಾರು ಲಕ್ಷ ಭಾರತೀಯರು ತಮ್ಮ ಭಾರತೀಯ ಪೌರತ್ವವನ್ನು ತ್ಯಜಿಸಿ ವಿದೇಶದಲ್ಲಿ ವಾಸಿಸಲು ನಿರ್ಧರಿಸಿದ್ದಾರೆ. 2022ರಲ್ಲೇ 2 ಲಕ್ಷ ಭಾರತೀಯರು ರಾಷ್ಟ್ರೀಯತೆಯನ್ನು ತ್ಯಜಿಸಿದ್ದಾರೆ.

ಸಾಲದ ವಂಚನೆ ಮತ್ತು ದೊಡ್ಡ ಪ್ರಮಾಣದ ತೆರಿಗೆ ವಂಚನೆ

ಈ ಹಿನ್ನೆಲೆಯಲ್ಲಿ ಬಿಜೆಪಿ ಕೇಂದ್ರ ಸರಕಾರವು ದೊಡ್ಡ ದೊಡ್ಡ ಉದ್ಯಮಿಗಳ ಹಿತಾಸಕ್ತಿಗಳನ್ನು ರಕ್ಷಿಸುವ, ಅವರ ಬ್ಯಾಂಕ್ ಸಾಲ ಮನ್ನಾ ಮತ್ತು ತೆರಿಗೆ ವಿನಾಯಿತಿ ನೀಡುವಲ್ಲಿ ಹಿಂದೆ ಸರಿಯಲಿಲ್ಲ. ಕಳೆದ ಎರಡು ವರ್ಷಗಳಲ್ಲಿ ಟಾಪ್ 100 ಬಿಲಿಯನೇರ್‌ಗಳ ಸಂಪತ್ತು ಮತ್ತು ಆಸ್ತಿಗಳು ಬಹಳಷ್ಟು ವೃದ್ಧಿಯಾಗಿವೆ. ಭಾರತದ ದೊಡ್ಡ ಬಂಡವಾಳಶಾಹಿಗಳು ಹೇಗೆ ವಿಶ್ವದ ದೊಡ್ಡ ಬಂಡವಾಳಶಾಹಿಗಳಾದರು ಎಂಬುದನ್ನು ಅಮೆರಿಕದ ಹಿಂಡನ್‌ಬರ್ಗ್ ಅದಾನಿ ಕಂಪನಿಗಳ ವಂಚನೆಯನ್ನು ಬಯಲಿಗೆಳೆದಿದೆ. ಇಂದು ಸ್ಫೋಟಗೊಳ್ಳುತ್ತಿರುವ ಅದಾನಿ ಗ್ರೂಪ್ ಹಗರಣವು ಇಂದಿನ ಸಾರ್ವಜನಿಕ ವಲಯದ ಬ್ಯಾಂಕ್ ಸಾಲದ ವಂಚನೆ ಮತ್ತು ತೆರಿಗೆ ವಂಚನೆಯು ಅತಿ ದೊಡ್ಡ ವಂಚನೆಯಾಗಿದೆ, ಇದನ್ನು ಬಂಡವಾಳಶಾಹಿ ಗುಂಪುಗಳು ದೀರ್ಘ ಕಾಲದಿಂದ ಮಾಡುತ್ತಿವೆ.

ತೆರಿಗೆ ವಂಚನೆಯ ಸ್ವರ್ಗ

ಕೇಂದ್ರ ಸರ್ಕಾರ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ಅಡಿಯಲ್ಲಿ ಅನೇಕ ಜಾಗೃತಿ ದಳ ಸಂಸ್ಥೆಗಳು ವಿವಿಧ ಹಂತಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಹಣಕಾಸು ಮತ್ತು ಆರ್ಥಿಕ ಅಪರಾಧಗಳ ಮೇಲೆ ನಿಗಾ ಇಡಲು ಮತ್ತು ಸರಿಯಾದ, ತ್ವರಿತ ಮತ್ತು ತಕ್ಷಣದ ಕ್ರಮಗಳನ್ನು ತೆಗೆದುಕೊಳ್ಳಲು ಆದಾಯ ತೆರಿಗೆ ಇಲಾಖೆ, ಸಿಬಿಐ, ಜಾರಿ ನಿರ್ದೇಶನಾಲಯ ಮುಂತಾದ ಇಲಾಖೆಗಳಿವೆ. 1957ರ ಆದಾಯ ತೆರಿಗೆ ಕಾಯಿದೆಯ ಮೂಲಕ ತಮ್ಮ ಸಂಪತ್ತನ್ನು ಸ್ವಯಂಪ್ರೇರಿತವಾಗಿ ಬಹಿರಂಗಪಡಿಸುವಿಕೆಯ ಯೋಜನೆಯನ್ನು ಪರಿಚಯಿಸಲಾಯಿತು. ಈ ಯೋಜನೆಯು ಹಲವು ವರ್ಷಗಳಿಂದ ಘೋಷಿಸಲ್ಪಟ್ಟಂತೆ, ತೆರಿಗೆ ಇಲಾಖೆಗೆ ಮಾಹಿತಿ ನೀಡದೆ ಬಚ್ಚಿಟ್ಟ ಕಪ್ಪು ಹಣವನ್ನು ಹೊಂದಿರುವವರು ಸ್ವಯಂಪ್ರೇರಿತರಾಗಿ ಆ ಹಣಕ್ಕೆ ತೆರಿಗೆಯನ್ನು ಪಾವತಿಸಿ ಬಿಳಿ ಹಣವನ್ನಾಗಿ ಪರಿವರ್ತಿಸಿ ಕೊಂಡರು. ಸ್ಮಗ್ಲಿಂಗ್ ಕಿಂಗ್‌ಪಿನ್‌ಗಳು, ಕಾಳಧನಿಕರು, ಕಾಳಸಂತೆ ಜಮೀನುದಾರರು, ಚಲನಚಿತ್ರ ಉದ್ಯಮಿಗಳು, ಸ್ವಯಂ ಶಿಕ್ಷಣದ ಪಿತಾಮಹರು ಮತ್ತು ಮಾದಕ ವಸ್ತುಗಳನ್ನು ಮಾರಾಟ ಮಾಡುವವರ ಹಣವನ್ನು ಇದು ಹೆಚ್ಚಿಸುತ್ತಿದೆ.

ಕಪ್ಪು ಹಣದ ಈ ಆರ್ಥಿಕ ಚಕ್ರವೇ ಭಾರತದ ಆರ್ಥಿಕತೆಯನ್ನು ಸುನಾಮಿಯಿಂದ ಅಪ್ಪಳಿಸುತ್ತಿದೆ. 1997 ರ ಹೊತ್ತಿಗೆ, 35,000 ಜನರು ತೆರಿಗೆ ವಿನಾಯಿತಿಯನ್ನು ಪಡೆದಿದ್ದಾರೆ. ಪಾವತಿಸಿದ ಒಟ್ಟು ಮೊತ್ತ 78000 ಸಾವಿರ ಕೋಟಿ ರೂ.

ಕಪ್ಪು ಹಣ ಬಿಳಿಯ ಹಣವಾದ ಕತೆ

ನನ್ನ ವಿದ್ಯಾರ್ಥಿ–ಪ್ರೊ. ರಾಮ್ ಗೋಪಾಲ್ ಅವರ ತಂದೆ ದಿವಂಗತ ಡಾ. ಶಿವಸಾಮಿ ಅವರು ಕೇಂದ್ರ ಸರ್ಕಾರದ ಆದಾಯ ತೆರಿಗೆ ಮಂಡಳಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. 28 ವರ್ಷಗಳ ಹಿಂದೆ ಅವರು ಮದ್ರಾಸ್ ವಿಶ್ವವಿದ್ಯಾನಿಲಯದಲ್ಲಿ ಅರ್ಥಶಾಸ್ತ್ರದ ಪ್ರಾಧ್ಯಾಪಕರಾಗಿದ್ದಾಗ ಪ್ರತಿಷ್ಠಾನದ ಉಪನ್ಯಾಸಕ್ಕೆ ನನ್ನ ಆಹ್ವಾನದ ಮೇರೆಗೆ ಬಂದು ಅತ್ಯುತ್ತಮ ಭಾಷಣ ಮಾಡಿದರು. ಚೆನ್ನೈ ಮತ್ತು ಬೆಂಗಳೂರಿನಂತಹ ಪ್ರಮುಖ ನಗರಗಳಲ್ಲಿ ಆದಾಯ ತೆರಿಗೆಯ ಮುಖ್ಯ ಆಯುಕ್ತರಾಗಿ ಸೇವೆ ಸಲ್ಲಿಸಿದ ಪ್ರಾಮಾಣಿಕ ವ್ಯಕ್ತಿ ಅವರು. ಆಗ ನಾನು ಮುಂದೆ ಬಂದು ಆದಾಯ ತೆರಿಗೆ ಪಾವತಿ ವಿಧಾನದ ಬಗ್ಗೆ ಕೇಳಿದ ಕೆಲವು ಪ್ರಶ್ನೆಗಳನ್ನು ಅವರು ನಗುತ್ತಲೇ ಹೇಳಿದರು. ಅವರು ಬೆಂಗಳೂರಿನಲ್ಲಿ ಆದಾಯ ತೆರಿಗೆಯ ಮುಖ್ಯ ಆಯುಕ್ತರಾಗಿದ್ದಾಗ ಒಬ್ಬ ವ್ಯಕ್ತಿ ಈ ಯೋಜನೆಯ ಮೂಲಕ ಹಲವಾರು ಕೋಟಿ ರೂಪಾಯಿಗಳನ್ನು ಅವ್ಯವಹಾರದಲ್ಲಿ ತೊಡಗಿಸಿಕೊಂಡಿದ್ದರು. ಈಗವರು ಬಿಳಿ ಹಣದ ವ್ಯಾಪಾರಿ. ಹಲವು ವರ್ಷಗಳ ನಂತರ ನನ್ನನ್ನು ಚೆನ್ನೈಗೆ ವರ್ಗಾಯಿಸಲಾಯಿತು. ಮತ್ತೆ ಅದೇ ವ್ಯಕ್ತಿ ದೊಡ್ಡ ವ್ಯಕ್ತಿ ಆದರು. ಮತ್ತು ಅದೇ ಯೋಜನೆಯಲ್ಲಿ ನೂರಾರು ಕೋಟಿ ಕಪ್ಪು ಹಣವನ್ನು ಲೆಕ್ಕಹಾಕಿ ದಂಡವನ್ನು ಪಾವತಿಸುವ ಮೂಲಕ "ಪ್ರಾಮಾಣಿಕ" ಶ್ರೀಮಂತರಾದರು. ಆದಾಯ ತೆರಿಗೆ ಮಿತಿ ಶೇಕಡಾ 75 ರಷ್ಟು ಇದ್ದಾಗ, ಕೇಂದ್ರ ಸರ್ಕಾರವು ಪರೋಕ್ಷ ತೆರಿಗೆಯ ಮೂಲಕ ದೊಡ್ಡ ಪ್ರಮಾಣದ ಹಣವನ್ನು ಪಡೆಯಿತು. ಆದಾಯ ತೆರಿಗೆ ಮಿತಿಯನ್ನು ಶೇಕಡಾ 30 ಕ್ಕೆ ಇಳಿಸಿದ ನಂತರ ತೆರಿಗೆ ವಂಚನೆ ಹಲವಾರು ಪಟ್ಟು ಹೆಚ್ಚಾಗಿದೆ ಎಂದು ಡಾ.ಶಿವಸಾಮಿ ಉಲ್ಲೇಖಿಸಿದ್ದಾರೆ.



ತೆರಿಗೆ ವಂಚಕರಿಗೆ ಅವಕಾಶ

1997ರ ಸಂಯುಕ್ತ ರಂಗ ಸರ್ಕಾರದಲ್ಲಿ ಪಿ.ಚಿದಂಬರಂ ಕೇಂದ್ರ ಹಣಕಾಸು ಸಚಿವರಾಗಿದ್ದರು. ಡಿಸೆಂಬರ್ 1997ರಲ್ಲಿ 'ಸ್ವಯಂಪ್ರೇರಿತ ಆದಾಯ ತೆರಿಗೆ ಯೋಜನೆ'ಯನ್ನು ರದ್ದುಗೊಳಿಸುವುದಾಗಿ ಘೋಷಿಸಿದರು. 'ಈ ಹಿಂದೆ ತೆರಿಗೆ ವಂಚಕರಿಗೆ ಅವಕಾಶ ನೀಡಲಾಗಿತ್ತು. ಒಮ್ಮೆ ಅವಕಾಶ ನೀಡಿದರೆ ಭಾರತದ ಜನತೆಗೆ ಕಪ್ಪು ಹಣ ಸೃಷ್ಟಿಸುವುದಕ್ಕೆ ಅವಕಾಶ ಸಿಗುತ್ತದೆ ಎಂದು ನಾನು ನಂಬುತ್ತೇನೆ. ಕಪ್ಪು ಹಣ ಸೃಷ್ಟಿಸುವುದನ್ನು ನಿಲ್ಲಿಸಿ' ಎಂದು ಹಣಕಾಸು ಸಚಿವ ಪಿ.ಚಿದಂಬರಂ ಆ ವೇಳೆ ಹೇಳಿದ್ದರು. ಕಪ್ಪು ಕುಳಗಳು ತಮ್ಮ ಕಪ್ಪು ಹಣವನ್ನು ಎಲ್ಲಿ ಇರಿಸಿದರು? ಕಪ್ಪು ಹಣ ಹೊಂದಿರುವ ಉದ್ಯಮಿಗಳನ್ನು ಹೆಸರಿಸಲು ಪಿ. ಚಿದಂಬರಂ ಅವರಿಗೆ ಭಯವೇ? ಅವರು ಹೆಸರುಗಳನ್ನು ಬಹಿರಂಗಪಡಿಸಲು ಏಕೆ ಹಿಂಜರಿಯುತ್ತಾರೆ? ಅಂದು ಕೇಂದ್ರ ಸರ್ಕಾರದ ಹಣಕಾಸು ಮಂತ್ರಿಗಳು ತೆರಿಗೆ ತಪ್ಪಿಸುವ ಉದ್ಯಮಿಗಳನ್ನು ರಕ್ಷಿಸಿದ್ದು ಹೀಗೆ.

2014ರಲ್ಲಿ ಸ್ವಯಂ ಆದಾಯ ಘೋಷಣೆ ಯೋಜನೆ ಘೋಷಣೆ

2014 ರಲ್ಲಿ "ವಿಶ್ವ ಗುರು" ನರೇಂದ್ರ ಮೋದಿಯವರು ಪ್ರಧಾನಿಯಾದರು. 2016 ರಲ್ಲಿ 'ಮಂಕಿ ಬಾತ್' ಕಾರ್ಯಕ್ರಮದಲ್ಲಿ ಆದಾಯ ತೆರಿಗೆ ಪಾವತಿಸದವರಿಗೆ ಶಿಕ್ಷೆ ವಿಧಿಸುವ ಮೂಲಕ ತೆರಿಗೆ ಪಾವತಿಸುವ ಯೋಜನೆ ಬರಲಿದೆ ಎಂದು ಘೋಷಿಸಿದರು. ಚುನಾವಣೆಗೆ ಹಣ ಹೂಡಿದ ದೊಡ್ಡ ಬಂಡವಾಳಶಾಹಿಗಳನ್ನು ಸಮಾಧಾನ ಪಡಿಸಬೇಕಲ್ಲವೇ? ಅದಕ್ಕಾಗಿ ಸ್ವಯಂ ಆದಾಯ ಘೋಷಣೆ ಯೋಜನೆ ಘೋಷಣೆ ಮಾಡಿದರು. ಇದರ ಹೆಸರಿನಲ್ಲಿ ದೊಡ್ಡ ಸಿರಿವಂತರು ತೆರಿಗೆ ವಂಚಿಸುತ್ತಾರೆ. ನಂತರ ಶ್ರೀಮಂತರಿಗೆ ತೆರಿಗೆ ವಿನಾಯಿತಿ ನೀಡಲಾಯಿತು.

ಅತ್ಯಂತ ಶ್ರೀಮಂತರ ಕಪ್ಪು ಹಣ ಬಿಳಿ ಹಣದಲ್ಲಿ ಸೇರಿ ಹೋಗಿದೆ. ಚಿದಂಬರಂ ಹಿಂಪಡೆದ ಯೋಜನೆಯನ್ನು ಮೋದಿ ಸರ್ಕಾರ ಹೊಸ ಹೆಸರಿನಲ್ಲಿ ಪುನರುತ್ಥಾನಗೊಳಿಸಲಾಯಿತು. ಈ ಆದಾಯ ತೆರಿಗೆ ವಿನಾಯಿತಿ ಯೋಜನೆಯ ಮೂಲಕ 64,274 ವ್ಯಕ್ತಿಗಳು ರೂ. 65,250 ಕೋಟಿ ಆದಾಯವನ್ನು ಘೋಷಿಸಿದ್ದಾರೆ. ಒಬ್ಬರಿಗೆ ಸರಾಸರಿ ಒಂದು ಕೋಟಿ ರೂ. ಆದರೆ 2015 ರಲ್ಲಿ ಈ ತೆರಿಗೆ ವಂಚಕರು ತಮ್ಮ ಹಣ ಸಂಗ್ರಹಣೆಯನ್ನು ಕೊನೆಗೊಳಿಸಿದರು.

ಬಂಡವಾಳೀಕರಣ ಹೆಚ್ಚಿಸಿದ ಷೇರು ಮಾರುಕಟ್ಟೆ

2014 ರಲ್ಲಿ, ಷೇರು ಮಾರುಕಟ್ಟೆ ಬಂಡವಾಳವು ಇದ್ದಕ್ಕಿದ್ದಂತೆ ವೃದ್ಧಿಸಲ್ಪಟ್ಟಿತು. ಮುಂಬೈ ಷೇರು ವಿನಿಮಯ ಕೇಂದ್ರ ಮತ್ತು ರಾಷ್ಟ್ರೀಯ ಷೇರು ವಿನಿಮಯ ಕೇಂದ್ರ ರೂ.32 ಲಕ್ಷ ಕೋಟಿಯಿಂದ 66 ಲಕ್ಷ ಕೋಟಿ ರೂ. ಗಳಿಗೆ ಹೆಚ್ಚಿತು. ಆದಾಯ ತೆರಿಗೆ ಇಲಾಖೆಯ ಅಧ್ಯಯನದ ಪ್ರಕಾರ ಈ ವರ್ಷ ಹೂಡಿಕೆ ಮಾಡಿದ 1,21,423 ಮಂದಿ ತಮ್ಮ ಆದಾಯದ ಮೂಲ ಯಾವುದೆಂದು ನಮೂದಿಸಿಲ್ಲ. ಇದರಲ್ಲಿ ರೂ. 5000 ಕೋಟಿ ಹೂಡಿಕೆ ಮಾಡಿದವರು ನಕಲಿ ಪ್ಯಾನ್ ಕಾರ್ಡ್ ಬಳಸಿದ್ದಾರೆ. ಷೇರು ಮಾರುಕಟ್ಟೆಯಲ್ಲಿ ರೂ.2 ಕೋಟಿಯಿಂದ ಆರಂಭವಾಗಿ ರೂ.10,000 ಕೋಟಿವರೆಗೆ ಹೂಡಿಕೆ ಮಾಡಿದ್ದಾರೆ. ಒಟ್ಟು ಹೂಡಿಕೆದಾರರಲ್ಲಿ ಶೇಕಡಾ 3 ರಷ್ಟು ಮಂದಿ ರೂ. 61 ಲಕ್ಷ ರೂಪಾಯಿ ಹೂಡಿಕೆ ಮಾಡಿದ್ದಾರೆ. ಅವರು ದೊಡ್ಡ ಪ್ರಮಾಣದ ಸಂಪತ್ತನ್ನು ಹೊಂದಿರುವ ವ್ಯಕ್ತಿಗಳಾಗಿ ಗುರುತಿಸಲ್ಪಡುತ್ತಾರೆ. ಹೆಚ್ಚಿನ ನಿವ್ವಳ ಮೌಲ್ಯದ ವ್ಯಕ್ತಿಗಳು **(High Net Worth Individuals- HNIs)** ಎಂದು ಗುರುತಿಸುವ ಇವರು ಭಾರತೀಯ ಪೌರತ್ವವನ್ನು ತ್ಯಜಿಸಿ ವಿದೇಶಗಳಿಗೆ ಹೋಗುವವರು ಎಂದು 20–2–2023 ಇಂಗ್ಲಿಷ್ ದಿ ಹಿಂದೂ ಪತ್ರಿಕೆ ಪ್ರಕಟಿಸಿದೆ.

ಸರ್ಕಾರದ ವಿರುದ್ದ ಮಾತನಾಡುವವರ ಮೇಲೆ ತಪಾಸಣೆ

ತೆರಿಗೆ ವಂಚಕರನ್ನು ಬಿಟ್ಟು ಕೇಂದ್ರ ಸರ್ಕಾರದ ವಿರುದ್ಧ ಧ್ವನಿ ಎತ್ತುವ ಮಾಧ್ಯಮಗಳ ಮೇಲೆ ಕಡಿವಾಣ ಹಾಕುವುದಾಗಿ ಆದಾಯ ತೆರಿಗೆ ಇಲಾಖೆ ಬೆದರಿಕೆ ಹಾಕುತ್ತಿದೆ ಎಂದು ದಿ ಹಿಂದೂ ದಿನಪತ್ರಿಕೆಯು ಇತ್ತೀಚಿಗೆ ಅಂಕಿ ಅಂಶ ಸಮೇತ ಕೆಲವು ವಿವರಗಳನ್ನು ಪ್ರಕಟಿಸಿದೆ. 2015 ರಲ್ಲಿ ಮುಂಬೈ ಷೇರು ವಿನಿಮಯ ಕೇಂದ್ರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ವ್ಯವಸ್ಥಾಪಕ ನಿರ್ದೇಶಕರಾಗಿ ಸೇವೆ ಸಲ್ಲಿಸಿದ ಆಶಿಶ್ ಕುಮಾರ್ ಸೆಲಖಾನ್ ಅವರು ಷೇರು ಮಾರುಕಟ್ಟೆಯಲ್ಲಿ ತೆರಿಗೆ ವಂಚನೆ ಮತ್ತು ವಂಚಕರ ಬಗ್ಗೆ ಲೇಖನ ಬರೆದಿದ್ದಾರೆ. ಮುಂಬಯಿ ಷೇರು ವಿನಿಮಯ ಕೇಂದ್ರದಲ್ಲಿ 5700 ಕಂಪನಿಗಳಿವೆ. ಹಲವು ಕಂಪನಿಗಳು ತೆರಿಗೆ ರಹಿತ ಹಣವನ್ನು ಷೇರುಪೇಟೆಯಲ್ಲಿ ಹೂಡಿಕೆ ಮಾಡಿ ಕಾನೂನು ಬದ್ಧ ಆಸ್ತಿಯನ್ನಾಗಿ

ಪುಟ 10 ಕ್ಕೆ





ಜನತೆಯನ್ನು ತಲುಪಿರಿ ವರ್ಗ ಐಕ್ಯತೆಯನ್ನು ಕಟ್ಟಿರಿ

ಕೃಷಿ ಕೂಲಿಕಾರರ 10ನೇ ಅಖಿಲ ಭಾರತ ಸಮ್ಮೇಳನದ ಕರೆ:

ನಿತ್ಯಾನಂದಸ್ವಾಮಿ

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ 10ನೇ ಅಖಿಲ ಭಾರತ ಸಮ್ಮೇಳನವು ಪಶ್ಚಿಮ ಬಂಗಾಳದ ಹೌರಾದಲ್ಲಿ ಯಶಸ್ವಿಯಾಗಿ ಮುಕ್ತಾಯಗೊಂಡಿತು. "ತಲುಪದೇ ಇರುವ ಕೃಷಿಕೂಲಿಕಾರರನ್ನು ಹಾಗೂ ಗ್ರಾಮೀಣ ಕೆಲಸಗಾರರನ್ನು ತಲುಪಿರಿ ಮತ್ತು ವರ್ಗ ಐಕ್ಯತೆಯನ್ನು ಬಲಪಡಿಸಿರಿ" ಎಂಬುದು ಸಮ್ಮೇಳನದ ಮುಖ್ಯ ಕರೆಯಾಗಿತ್ತು. "ಕ್ರಾಂತಿ ಚಿರಾಯುವಾಗಲಿ" ಎಂಬ ಘೋಷಣೆಯೊಂದಿಗೆ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷರಾದ ಕಾಮ್ರೆಡ್ ಎ. ವಿಜಯರಾಘವನ್ ಅವರು ಸಂಘದ ಕೆಂಪು ಬಾವುಟವನ್ನು ಏರಿಸುವ ಮೂಲಕ ಸಮ್ಮೇಳನದ ಕಲಾಪಗಳಿಗೆ ಚಾಲನೆ ನೀಡಿದರು. ಅಷ್ಟರೊಳಗೆ 5 ಹುತಾತ್ಮರ ಜ್ಯೋತಿಗಳು ಸಮ್ಮೇಳನದ ಸ್ಥಳಕ್ಕೆ ತಲುಪಿದವು. ಈ ಹುತಾತ್ಮರ ಜ್ಯೋತಿಗಳನ್ನು ವೀರಾವೇಶದಿಂದ ಬರಮಾಡಿಕೊಳ್ಳಲಾಯಿತು. ಅನಂತರ ಸಂಘದ ನಾಯಕತ್ವ ಮತ್ತು ಸಮ್ಮೇಳನದ 986 ಪ್ರತಿನಿಧಿಗಳು ಮತ್ತು ವೀಕ್ಷಕರು ಸಾಲಾಗಿ ಸಾಗಿ ಹುತಾತ್ಮರ ಸ್ಥಂಬಕ್ಕೆ ಪುಷ್ಪನಮನ ಸಲ್ಲಿಸಿದರು.

ಪಶ್ಚಿಮ ಬಂಗಾಳದ ಕೃಷಿ ಕೂಲಿಕಾರರ ಸಂಘದ ಚಟುವಟಿಕೆಗಳನ್ನು ಇತ್ತೀಚೆಗಷ್ಟೇ ಆರಂಭಿಸಲಾಗಿತ್ತು. ತೃಣಮೂಲ ಕಾಂಗ್ರೆಸ್ಸಿನ ದಾಳಿ ದೌರ್ಜನ್ಯಗಳನ್ನು ಮತ್ತು ಬಿಜೆಪಿ ಹಾಗೂ ಆರ್ ಎಸ್ ಎಸ್ ನ ಕೋಮುವಾದಿ ಹಲ್ಲೆಗಳನ್ನು ಎದುರಿಸಿ ಸಂಘಟನೆ ವಿಸ್ತರಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಸಮ್ಮೇಳನವನ್ನು ಅಚ್ಚುಕಟ್ಟಾಗಿ ನಡೆಸಲು ಎ. ವಿಜಯರಾಘವನ್, ಅಮಿಯಾ ಪಾತ್ರ, ಜೆ.ಎಸ್. ಅಂಬಿಕಾ, ಎ. ಲಾಜರ್, ವಿ. ವೆಂಕಟೇಶ್ವರಲು, ಭೂಪ್ ಚಂದ್ ಚನ್ನೂ ಮತ್ತು ಬೃಜ್ ಲಾಲ್ ಭಾರತಿ ಅವರನ್ನು ಒಳಗೊಂಡ ಅಧ್ಯಕ್ಷೀಯ ಮಂಡಳಿಯನ್ನು ಆಯ್ಕೆಮಾಡಲಾಯಿತು. ವಿಕ್ರಂ ಸಿಂಗ್ ಹುತಾತ್ಮರ ಶ್ರದ್ಧಾಂಜಲಿ ನಿರ್ಣಯವನ್ನು ಹಾಗೂ ಅಮಿಯಾ ಪಾತ್ರ ಅಗಲಿದ ಸಂಗಾತಿಗಳಿಗೆ ಶ್ರದ್ಧಾಂಜಲಿ ಸಲ್ಲಿಸುವ ನಿರ್ಣಯಗಳನ್ನು ಮಂಡಿಸಿದರು. ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀದೀಪ್ ಭಟ್ಟಾಚಾರ್ಯ ಎಲ್ಲರನ್ನು ಸ್ವಾಗತಿಸಿದರು.

ಸಮ್ಮೇಳನದ ಉದ್ಘಾಟನಾ ಅಧಿವೇಶನವು ಎ. ವಿಜಯರಾಘವನ್ ರವರ ಅಧ್ಯಕ್ಷೀಯ ಭಾಷಣದೊಂದಿಗೆ ಆರಂಭವಾಯಿತು. ಅವರು ತಮ್ಮ ಭಾಷಣದಲ್ಲಿ ದೇಶದ ರಾಜಕೀಯ ಪರಿಸ್ಥಿತಿ ಕುರಿತು ವಿವರಿಸಿದರು. ನವ ಉದಾರೀಕರಣದ ನೀತಿಗಳಿಂದ ಕೃಷಿಕೂಲಿಕಾರರ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದು ಅವರ ಭಾಷಣದ ಪ್ರಮುಖ ವಿಷಯವಾಗಿತ್ತು. ಆಳವಾಗುತ್ತಿರುವ ಕೃಷಿ ಬಿಕ್ಕಟ್ಟಿನಿಂದಾಗಿ ಸಣ್ಣ ಮತ್ತು ಅಂಚಿನ ರೈತರು ಕೃಷಿ ರಂಗವನ್ನು ತೊರೆಯುತ್ತಿದ್ದಾರೆ. ಅವರು ಕೃಷಿಕೂಲಿಕಾರರು ಹಾಗೂ ಇತರ ಗ್ರಾಮೀಣ ಕೆಲಸಗಾರರಾಗಿ ಪರಿವರ್ತನೆ ಹೊಂದುತ್ತಿದ್ದಾರೆ. ಕಳೆದ ಕೆಲವು ವರ್ಷಗಳಲ್ಲಿ ಕೃಷಿಕೂಲಿಕಾರರ ಹಾಗೂ ಗ್ರಾಮೀಣ ಕೆಲಸಗಾರರ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದೆ. ಆದರೆ ಕೃಷಿಕೂಲಿಕಾರರ ಕೆಲಸದ ದಿನಗಳು ವರ್ಷದಿಂದ ವರ್ಷಕ್ಕೆ ಕುಸಿಯುತ್ತಿವೆ. ಕೃಷಿ ಕೂಲಿಕಾರರಲ್ಲಿ ಮತ್ತು ಗ್ರಾಮೀಣ ಬಡವರಲ್ಲಿನ ನಿರುದ್ಯೋಗ ಹಾಗೂ ವಲಸೆ ಹೆಚ್ಚುತ್ತಿದೆ. ಆರ್ಥಿಕ ಹಿಂಜರಿತದಿಂದಾಗಿ ಕೈಗಾರಿಕಾ ಉತ್ಪಾದನೆ ಮತ್ತು ಬೆಳವಣಿಗೆ ಕುಸಿಯುತ್ತಿದೆ. ಕೃಷಿ ಕೂಲಿಕಾರರ ನೈಜ ಕೂಲಿ ಇಳಿಮುಖವಾಗುತ್ತಿದೆ. ಭೂಮಿ ಇಲ್ಲದವರ ಮತ್ತು ಮನೆಗಳಿಲ್ಲದವರ ಸಂಖ್ಯೆ ಹೆಚ್ಚುತ್ತಿದೆ. ಕಳೆದ ಎರಡು ದಶಕಗಳಲ್ಲಿ ಭೂಸುಧಾರಣಾ ಕಾಯ್ದೆಗಳನ್ನು ಬುಡಮೇಲು ಮಾಡಲಾಗುತ್ತಿದೆ. ಕೃಷಿ ಕೂಲಿಕಾರರ ಬದುಕು ಹೆಚ್ಚೆಚ್ಚು ಅನಿಶ್ಚಿತವೂ ರಕ್ಷಣೆ ಇಲ್ಲದಂತಾಗಿಯೂ ಸಾಗುತ್ತಿದೆ. ಇಂತಹ ಸಮಯದಲ್ಲಿ ಕೃಷಿ ಕೂಲಿಕಾರರ ರಕ್ಷಣೆಗಾಗಿ ಸಮಗ್ರ ಕೇಂದ್ರೀಯ ಶಾಸನವನ್ನು ಕೇಂದ್ರ ಸರ್ಕಾರ ಜಾರಿಗೆ ತರುವಂತೆ ಒತ್ತಾಯಿಸಬೇಕಾಗಿದೆ. ಮತ್ತು ಸಾಮಾಜಿಕ ಭದ್ರತೆಯನ್ನು ಒದಗಿಸುವಂತಾಗಬೇಕು.

ದೇಶದಲ್ಲಿ ದುಡಿಯುವ ಜನ ತಮ್ಮ ಬದುಕಿನ ಪ್ರಶ್ನೆಗಳಿಗಾಗಿ ಹೋರಾಟದ ಹಾದಿಯನ್ನು ಆಯ್ದುಕೊಂಡು ಸಾಗುತ್ತಿರುವುದು ಆಶಾದಾಯಕ ಪರಿಸ್ಥಿತಿಯಾಗಿದೆ. ಕಾರ್ಮಿಕರು ಮತ್ತು ರೈತರು ಒಟ್ಟಾಗಿ ಕೇಂದ್ರ ಸರ್ಕಾರದ ನವ ಉದಾರೀಕರಣ ನೀತಿಗಳ ವಿರುದ್ಧ ಬುಗಿಲೆದ್ದಿದ್ದಾರೆ. ಒಂದು ಇಡೀ ವರ್ಷ ರೈತರು ನಡೆಸಿದ ಚಾರಿತ್ರಿಕ ಹೋರಾಟ ಜನರ ಭಾವನೆಗಳನ್ನು ಪ್ರತಿನಿಧಿಸಿದ್ದು ಒಂದು ದಾಖಲೆಯಾಗಿದೆ. ನಮ್ಮ ಸಂಘಟನೆಗಳಯು ಆ ಹೋರಾಟದ ಅವಿಭಾಜ್ಯ ಅಂಗವಾಗಿತ್ತು. ರೈತರ ಈ ಚಳುವಳಿ ನಮ್ಮ ಸಂಘಟನೆಯನ್ನು ಬಲಪಡಿಸುವ ವಿಶ್ವಾಸವನ್ನು ಮೂಢಿಸಿದೆ. ಭೂಮಿ, ವಾಸಕ್ಕೆ ಮನೆ ಹಾಗೂ ಕೂಲಿಯ ದರದ ಆಧಾರಿತ ನಮ್ಮ ಬೇಡಿಕೆಗಳಿಗಾಗಿ ಹೋರಾಟವನ್ನು ಎತ್ತಿಕೊಳ್ಳಲು ನಮಗೆ ಸ್ಪೂರ್ತಿ ದೊರಕಿದೆ. ನಮ್ಮ ಸಂಘಟನೆ ಒಂದು ವರ್ಗ ಸಂಘಟನೆಯಾಗಿದ್ದು ವರ್ಗ ಆಧಾರಿತ ಪ್ರಶ್ನೆಗಳಿಗೆ ನಮ್ಮ ಹೋರಾಟವನ್ನು ತೀವ್ರಗೊಳಿಸುವುದು ನಮ್ಮ ಕರ್ತವ್ಯವಾಗಿದೆ.

AIAWU ಸಂಘಟನೆಯ ಪ್ರಧಾನ ಕಾರ್ಯದರ್ಶಿ ಬಿ. ವೆಂಕಟೇಶ್ ರವರು ಪ್ರಧಾನ ಕಾರ್ಯದರ್ಶಿಯವರ ವರದಿಯನ್ನು ಮಂಡಿಸಿದರು. ವರದಿಯಲ್ಲಿ 4 ಭಾಗಗಳಿವೆ. ಒಂದು ಭಾಗ ಅಂತರಾಷ್ಟ್ರೀಯ ಮತ್ತು ರಾಷ್ಟ್ರೀಯ ರಾಜಕೀಯ ಬೆಳವಣಿಗೆಗಳ ಕುರಿತಾಗಿತ್ತು. ಎರಡನೆಯ ಭಾಗ ದೇಶದ ಕೃಷಿ ಕೂಲಿಕಾರರ ಪರಿಸ್ಥಿತಿ ಕುರಿತಾಗಿತ್ತು. ಮೂರನೇ ಭಾಗ ಕಳೆದ 3 ವರ್ಷಗಳ ನಮ್ಮ ಹೋರಾಟಗಳ ಕುರಿತಾಗಿತ್ತು. ನಾಲ್ಕನೆಯ ಭಾಗ ಮುಂದಿನ ಕರ್ತವ್ಯಗಳ ಕುರಿತಾಗಿತ್ತು.



ಅಖಿಲ ಭಾರತ ಜಂಟಿ ಕಾರ್ಯದರ್ಶಿಗಳಾಗಿದ್ದ ಕಾಮ್ರೇಡ್ ನಿತ್ಯಾನಂದಸ್ವಾಮಿ ಯವರಿಗೆ ಬೀಳ್ಕೊಡುಗೆ

ಪ್ರಧಾನ ಕಾರ್ಯದರ್ಶಿಯವರ ವರದಿ ಪ್ರಸಕ್ತ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಯ ಮೇಲೆ ಬೆಳಕು ಚೆಲ್ಲಿತು. ಅಲ್ಲದೆ ಕೃಷಿ ಕೂಲಿಕಾರರ ಮತ್ತು ಗ್ರಾಮೀಣ ಬಡವರ ಬದುಕಿನ ಮೇಲೆ ಅವುಗಳ ಪರಿಣಾಮವನ್ನು ವಿಶ್ಲೇಷಿಸಿತ್ತು. ಇವರು ಗ್ರಾಮೀಣ ಭಾರತೀಯರಲ್ಲಿ ಅತ್ಯಂತ ಅಂಚಿಗೆ ತಳ್ಳಲ್ಪಟ್ಟವರು. ಇವರು ತಮ್ಮ ವೇತನವನ್ನು ಸಾಮೂಹಿಕ ಚೌಕಾಸಿಯ ಮೂಲಕ ಹೆಚ್ಚಿಸಿಕೊಳ್ಳುವವರು. ಅವರು ಪಡೆಯುವ ವೇತನ ಬಹುತೇಕವಾಗಿ ಕನಿಷ್ಠ ವೇತನಕ್ಕಿಂತಲೂ ಕಡಿಮೆ. ಹೀಗೆ ಇವರು ತಮ್ಮ ಶ್ರಮಶಕ್ತಿಯನ್ನು ಮಾರಾಟ ಮಾಡುತ್ತಾ ಆರ್ಥಿಕವಾಗಿ ಶೋಷಿತರು.

ಕೃಷಿ ಕೂಲಿಕಾರರಲ್ಲಿ ಬಹುತೇಕವಾಗಿ ದಲಿತರಾಗಿದ್ದರೂ, ಅವರು ಬೇರೆ ಬೇರೆ ವಿಧದ ದೌರ್ಜನ್ಯಗಳಿಗೆ ಮತ್ತು ಸಾಮಾಜಿಕ ದಮನಕ್ಕೆ ಒಳಗಾಗುತ್ತಿದ್ದಾರೆ. ಪಾಳೆಗಾರಿ ಸಮಾಜದಲ್ಲಿ ನಮ್ಮನ್ನು ಉಳಿದವರಂತೆ ಸಮಾನವಾಗಿ ಕಾಣುವುದಿಲ್ಲ. ಚಾತುರ್ವರ್ಣ ಮನುಸ್ಮೃತಿಯ ಕಣ್ಣೋಟವೇ ಇದಕ್ಕೆ ಕಾರಣವಾಗಿದೆ. ದಲಿತರು ಹಲವು ವಿಧಗಳ ತಾರತಮ್ಯವನ್ನು ದೌರ್ಜನ್ಯವನ್ನು ಸಹಿಸಿಕೊಂಡು ಶತಮಾನಗಳಿಂದ ಅವಮಾನದ ಬದುಕನ್ನು ಸಾಗಿಸುತ್ತಿದ್ದಾರೆ. ಆರಂಭದಲ್ಲಿ ಅವರು ಶಿಕ್ಷಣದಿಂದ ವಂಚಿತರಾಗಿದ್ದರು. ಇಂದೂ ಸಹ ದಲಿತರ ಮಕ್ಕಳಿಗೆ ಶಿಕ್ಷಣವನ್ನು ನಿರಾಕರಿಸಲಾಗುತ್ತಿದೆ. ಅವರ ಮನಸ್ಸುಗಳೆಲ್ಲವೂ ಪಾಳೆಗಾರಿ ಸಿದ್ಧಾಂತದ ಬೇರುಗಳಿವೆ. ಅವರು ಗ್ರಾಮೀಣ ಕಾರ್ಮಿಕರಾಗಿದ್ದರೂ ಅವರ ಮನಸ್ಸಿನಲ್ಲಿ ಇನ್ನೂ ಕಾರ್ಮಿಕ ವರ್ಗದ ಪ್ರಜ್ಞೆ ಬೆಳೆದಿರುವುದಿಲ್ಲ. ಹೀಗಾಗಿ ಪಿತೃಪ್ರಧಾನ ವ್ಯವಸ್ಥೆ, ಜಾತೀಯತೆ, ಮೂಢನಂಬಿಕೆಯಂತ ಪರಕೀಯ ಮೌಲ್ಯಗಳು ಬೇರು ಬಿಟ್ಟಿರುತ್ತವೆ. ಕೃಷಿ ಕೂಲಿಕಾರರು ಹಾಗೂ ಗ್ರಾಮೀಣ ಬಡವರಲ್ಲಿ ಕಾರ್ಮಿಕ ವರ್ಗದ ಪ್ರಜ್ಞೆಯನ್ನು ಬೆಳೆಸುವುದು ನಮ್ಮ ಕರ್ತವ್ಯವಾಗಿದೆ. ಅವರು ತಮ್ಮ ಹೋರಾಟಗಳ ಮೂಲಕ ತಮ್ಮ ಪ್ರಜ್ಞೆಯನ್ನು ಎತ್ತರಿಸುವುದು ಆಗಬೇಕಿದೆ.

ಬೇರೆ ಬೇರೆ ರಾಜ್ಯಗಳ 44 ಜನ ಪ್ರತಿನಿಧಿಗಳು ಪ್ರಧಾನ ಕಾರ್ಯದರ್ಶಿಯವರ ವರದಿಯ ಮೇಲೆ ಚರ್ಚೆಯಲ್ಲಿ ಪಾಲ್ಗೊಂಡಿದ್ದರು. ಎರಡನೇ ದಿನ ಓಂದು ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು. ವಿಚಾರ ಸಂಕಿರಣವನ್ನು ಪ್ರಕಾಶ್ ಕಾರತ್ ರವರು ಉದ್ಘಾಟಿಸಿದರು. ಪ್ರಕಾಶ್ ಕಾರತ್ ತಮ್ಮ ಭಾಷಣದಲ್ಲಿ ಹಿಂದುತ್ವ ಮತ್ತು ಕಾರ್ಪೊರೇಟ್ ಮೈತ್ರಿ ಹೇಗೆ ಅಪಾಯಕಾರಿ ಎಂಬುದನ್ನು ವಿವರಿಸಿದರು. ಮಧೂರಾ ಸ್ವಾಮಿನಾತನ್ ರವರು ದೇಶದಲ್ಲಿ ಬೆಳೆಯುತ್ತಿರುವ ಆಹಾರದ ಸಮಸ್ಯೆ ಮತ್ತು ಅದರ ಕಾರಣಗಳನ್ನು ವಿವರಿಸಿದರು. ಪ್ರೊ. ಆರ್. ರಾಮಕುಮಾರ್ ಭೂಮಿಯ ಪ್ರಶ್ನೆ ಕುರಿತು ಮಾತನಾಡಿದರು. ಭಾರತದ ಸಂವಿಧಾನದ ಮೇಲೆ ನಡೆಯುತ್ತಿರುವ ದಾಳಿಯನ್ನು ಕುರಿತು ಪ್ರಸ್ತಾಪಿಸಿದರು.

ಹಿರಿಯ ಸದಸ್ಯರಾದ ಸುನಿತ್ ಚೋಪ್ರಾ ಮತ್ತು ಹನ್ನನ್ ಮೊಲ್ಲಾ ಹಾಗೂ ಕರ್ನಾಟಕದ ನಿತ್ಯಾನಂದಸ್ವಾಮಿಯವರನ್ನು ಸನ್ಮಾನಿಸಿ ಬೀಳ್ಕೊಡಲಾಯಿತು.

ಸಮ್ಮೇಳನದ ಮುಕ್ತಾಯದ ಭಾಗವಾಗಿ ಬೃಹತ್ ಸಾರ್ವಜನಿಕ ಸಭೆಯನ್ನು ಏರ್ಪಡಿಸಲಾಗಿತ್ತು. ಕೇರಳದ ಜನಪ್ರಿಯ ಮುಖ್ಯಮಂತ್ರಿ ಪಿಣರಾಯ್ ವಿಜಯನ್ ಮುಖ್ಯ ಭಾಷಣಕಾರರಾಗಿದ್ದರು. ಸಮ್ಮೇಳನವು 15 ನಿರ್ಣಯಗಳನ್ನು ಅಂಗೀಕರಿಸಿತು. ಚರ್ಚೆಯ ನಂತರ ಪ್ರಧಾನ ಕಾರ್ಯದರ್ಶಿ ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯ್ತು. ಸಂಘಟನೆಯನ್ನು ದೇಶದ 300 ಜಿಲ್ಲೆಗಳಿಗೆ ವಿಸ್ತರಿಸಲು ಸಮ್ಮೇಳನ ಕರೆ ನೀಡಿತು.

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ(AIAWU)ದ 10 ನೇ ಅಖಿಲ ಭಾರತ ಸಮ್ಮೇಳನ 2023 ಫೆಬ್ರವರಿ 15 ರಿಂದ 18 ರ ವರಗೆ ನಡೆಯಿತು. ಸಮ್ಮೇಳನದಲ್ಲಿ ಅಖಿಲ ಭಾರತ ಅಧ್ಯಕ್ಷರಾಗಿ **ಎ.ವಿಜಯ ರಾಘವನ್**, ಪ್ರಧಾನ ಕಾರ್ಯದರ್ಶಿ ಯಾಗಿ **ಬಿ.ವೆಂಕಟ್** ಆಯ್ಕೆಯಾದರು.

ಕರ್ನಾಟಕದಿಂದ ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯರಾಗಿ (CWC) **ಚಂದ್ರಪ್ಪ ಹೊಸ್ಕರಾ, ಎಂ.ಪುಟ್ಟಮಾದು, ಎಂ.ಪಿ.ಮುನಿವೆಂಕಟಪ್ಪ, ಮಲ್ಲಮ್ಮ ಕೋಡ್ಲಿ** ಮತ್ತು ಜನರಲ್ ಕೌನ್ಸಿಲ್ ಸದಸ್ಯರಾಗಿ **ದಾವಲ್ ಸಾಬ್ ನದಾಫ್, ಸರೋಜಮ್ಮ, ಬಸವರಾಜ ಎಂ., ವೆಂಕಟೇಶ ಕೋಣಿ** ಆಯ್ಕೆಯಾದರು.







ಅದಾನಿ ವಂಚನೆ ಬಯಲು: ಛಿದ್ರಗೊಂಡಿರುವ ಮಾರುಕಟ್ಟೆ ಆರ್ಥಿಕತೆ..........

ಪುಟ 8 ರಿಂದ

ಪರಿವರ್ತಿಸುತ್ತಿವೆ. ಇಂತಹ ಹಗರಣಗಳನ್ನು ನಿಯಂತ್ರಿಸಲು ಸ್ಟಾಕ್ ಎಕ್ಸ್ ಚೇಂಜ್ ಬೋರ್ಡ್ ಆಫ್ ಇಂಡಿಯಾವನ್ನು ಸ್ಥಾಪಿಸಲಾಯಿತು. ಚಿತ್ರಾ ಸುಬ್ರಮಣ್ಯಂ ಅವರಂಥವರು ಮಧ್ಯ ಪ್ರವೇಶಿಸಿ ಷೇರುಪೇಟೆಯ ಹಗರಣಗಳನ್ನು ಬೆಂಬಲಿಸಿದ್ದು ಕೂಡ ಬಯಲಾಯಿತು.

ಕುಟುಂಬವೇ ಒಂದು ಸಮೂಹವಾಗಿ...

ಅದಾನಿ ಉದ್ಯಮಗಳ ಕುಟುಂಬವೇ ಒಂದು ಸಮೂಹವಾಗಿ ಎಲ್ಲಾ ರೀತಿಯ ಹಣಕಾಸು ವಂಚನೆ ಎಸಗಿದೆ ಎಂದು ಹಿಂಡನ್‌ಬರ್ಗ್ ಬಹಿರಂಗಪಡಿಸಿದೆ. ಆದರೆ, ಸಾರ್ವಜನಿಕ ವಲಯದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಿಂದ ಮತ್ತು ಭಾರತೀಯ ಜೀವ ವಿಮಾ ನಿಗಮದಿಂದ ಈ ವಂಚನೆಯ ಕಂಪನಿಯಲ್ಲಿ ಹೂಡಿಕೆ ಮಾಡಲಾಗಿದೆ. ಇದು ಜನರ ಹಣ. ಜನರ ಉಳಿತಾಯದ ಹಣವನ್ನು ಲೂಟಿ ಮಾಡಲಾಗುತ್ತಿದೆ. ಸಂಸತ್ತಿನಲ್ಲಿ ವಿರೋಧ ಪಕ್ಷಗಳು ಈ ವಿಷಯ ಪ್ರಸ್ತಾಪಿಸಿದರೂ ಇದಕ್ಕೆ ಪ್ರಧಾನಿ ನರೇಂದ್ರ ಮೋದಿ ಇಲ್ಲಿಯವರೆಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಮೋದಿಯವರ ಪ್ರಯತ್ನದಿಂದಾಗಿ ಆಸ್ಟ್ರೇಲಿಯಾದಿಂದ ಶ್ರೀಲಂಕಾವರೆಗೆ ಅದಾನಿ ಅಂತಾರಾಷ್ಟ್ರೀಯ ಗುತ್ತಿಗೆ ಪಡೆದಿದ್ದಾರೆ ಎಂಬ ಆರೋಪಗಳು ಆಯಾ ದೇಶಗಳ ಮಾಧ್ಯಮಗಳಲ್ಲಿ ಕಾಣಿಸಿಕೊಳ್ಳುತ್ತಿವೆ. ದೇಶದ ಆರ್ಥಿಕತೆಯು ಬಿಳಿ ಹಣ ಮತ್ತು ಕಪ್ಪು ಹಣವನ್ನು ಸಮಾನ ಪ್ರಮಾಣದಲ್ಲಿ ಸ್ವೀಕರಿಸಿದೆ ಎಂಬ ವಂಚನೆಗಳ ಬಗೆಗಿನ ಮಾತುಗಳು ಕೇಳಿಬರುತ್ತಿವೆ.

ಮೋದಿಯವರ ಸಂಪೂರ್ಣ ವೈಫಲ್ಯ ಮತ್ತು ನುಣುಚಿಕೊಳ್ಳುವಿಕೆ

ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದ (ರಿಸರ್ವ್) ಬಡ್ಡಿದರದ ಬದಲಾವಣೆಗಳು, ಹಣಕಾಸು ಕ್ಷೇತ್ರದ ಮೇಲಿನ ನಿಯಂತ್ರಣಗಳು ಸಂಪೂರ್ಣವಾಗಿ ಕಣ್ಮರೆಯಾಗುತ್ತಿವೆ. ಹಣದುಬ್ಬರವನ್ನು ನಿಯಂತ್ರಿಸಲು ಸಾಧ್ಯವಾಗಲಿಲ್ಲ. ಅದಾನಿಗಳಿಂದ ತತ್ತರಿಸುತ್ತಿರುವ ಮಾರುಕಟ್ಟೆ ಆರ್ಥಿಕತೆಯು ಕುಸಿತದತ್ತ ತ್ವರಿತ ನಡಿಗೆಯನ್ನು ಪ್ರಾರಂಭಿಸಿದೆ. ಇದರ ಹೊಣೆ ಹೊರಬೇಕಾದ ಪ್ರಧಾನಿ ಮೋದಿ ಎಡವುತ್ತಿದ್ದಾರೆ. ತಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಾರೆ. 1996ರ ಹವಾಲಾ ಹಣದ ಹಗರಣ ಭಾರೀ ವಿವಾದಕ್ಕೆ ಕಾರಣವಾಗಿತ್ತು. ಎಸ್.ಕೆ.ಜೈನ್ ಅವರ ನೋಟ್ ಪುಸ್ತಕದಲ್ಲಿ 115 ರಾಜಕೀಯ ನಾಯಕರಿಗೆ 65 ಕೋಟಿ ರೂ.ಗಳಷ್ಟು ಹವಾಲಾ ಪಾವತಿ ಮಾಡಲಾಗಿದೆ ಎಂಬ ವರದಿಗಳು ಹೊರಬಿದ್ದಿದ್ದವು. ಈ ಹಣವನ್ನು ಕೆಲವು ಖಾಸಗಿ ಕಂಪನಿಗಳಿಗೆ ವಿಶೇಷವಾಗಿ ಇಂಧನ ಕ್ಷೇತ್ರದಲ್ಲಿ ಸರ್ಕಾರಿ ಗುತ್ತಿಗೆಗಳನ್ನು ಪಡೆಯಲು ನೀಡಲಾಗಿದೆ ಎಂದು ಕೂಡ ಹೇಳಲಾಗಿತ್ತು.

ಜೈನ್ ಅವರ ಡೈರಿಯಲ್ಲಿ ಹವಾಲಾ ಹಗರಣದಲ್ಲಿ ಬಿಜೆಪಿಯ ಅಂದಿನ ಹಿರಿಯ ನಾಯಕ ಎಲ್.ಕೆ. ಅಡ್ವಾಣಿ ಅವರ ಹೆಸರಿನ ಬಗ್ಗೆಯೂ ದೂರುಗಳು ಬಂದಿದ್ದವು. ಈ ದೂರಿನ ನಂತರ ಅವರು ಸಂಸದ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. "ನನ್ನ ಮೇಲೆ ಹೊರಿಸಲಾಗಿರುವ ಕಳಂಕವನ್ನು ತೆಗೆದುಹಾಕಿದ ನಂತರವೇ ಸಂಸತ್ತಿಗೆ ಮರಳುತ್ತೇನೆ" ಎಂದು ಅಡ್ವಾಣಿ ಹೇಳಿದ್ದರು. ಇದರ ನಂತರ ಉತ್ತರದ ನಾಯಕರಾದ ಶರದ್ ಯಾದವ್, ಜಸ್ವಂತ್ ಸಿಂಗ್, ರಾಜ್ಯಪಾಲರಾಗಿದ್ದ ಕಾಂಗ್ರೆಸ್ ನಾಯಕ ಶಿವಶಂಕರ್ ಮತ್ತು ಮೋತಿಲಾಲ್ ವರ್ಮಾ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಆಗಿನ ಬಿಜೆಪಿ ನಾಯಕ ಅಡ್ವಾಣಿ ತಮ್ಮ ರಾಜೀನಾಮೆ ನೀಡಿದಾಗ "ರಾಜೀನಾಮೆ ನನ್ನ ನಿರ್ಧಾರ. ರಾಜಕೀಯ ವಿಶ್ವಾಸಾರ್ಹತೆಯ ಅವಶ್ಯಕತೆ ಇದೆ ಎಂದು ನಾನು ಭಾವಿಸುತ್ತೇನೆ. ನಾವು ಮತದಾರರ, ಸಾರ್ವಜನಿಕರ ನಂಬಿಕೆಯನ್ನು ಉಳಿಸಿಕೊಳ್ಳಬೇಕು. ನನ್ನ ಜೀವನದಲ್ಲಿ ನಾನು ಯಾವಾಗಲೂ ನನ್ನ ಆತ್ಮಸಾಕ್ಷಿಯನ್ನು ಅನುಸರಿಸಿದ್ದೇನೆ. ಆದರೆ ನಾನೇನೂ ತಪ್ಪು ಮಾಡಿಲ್ಲ ಅಂತ ಗೊತ್ತು. ಹಾಗಾಗಿ ನನಗೆ ಯಾವುದೇ ಭಯವಿಲ್ಲ" ಎಂದಿದ್ದರು. ಎಲ್.ಕೆ. ಅಡ್ವಾಣಿಯಂತೆ ಪ್ರಧಾನಿ ಮೋದಿ ಕೆಳಗಿಳಿಯುತ್ತಾರಾ? ಅಡ್ವಾಣಿ ಅಭಿಪ್ರಾಯದಂತೆ ರಾಜಕೀಯ ವಿಶ್ವಾಸಾರ್ಹತೆಯನ್ನು ಉಳಿಸಿಕೊಳ್ಳುತ್ತಾರೆಯೇ?

ಅನುವಾದ: ಸಿ. ಸಿದ್ದಯ್ಯ

ಆಧಾರ: ತೀಕದೀರ್ ತಮಿಳು ಪತ್ರಿಕೆ

ರಾಜ್ಯ ಬಜೆಟ್....

ಪುಟ 5 ರಿಂದ

ಮಾರ್ಪಡಿಸಲಾಗುವುದು? ಇದರಿಂದ ಎಷ್ಟು ಹಣ ಸಂಗ್ರಹವಾಗುತ್ತದೆ? ನೊಂದಾಯಿತ ಕಾರ್ಮಿಕರಿಗೆ ಏನೆಲ್ಲಾ ಸಾಮಾಜಿಕ ಸೌಲಭ್ಯಗಳನ್ನು ಒದಗಿಸಬಹುದು ಎಂಬ ಅಂದಾಜು ಮಾಹಿತಿಯೇ ಇಲ್ಲ.

ಕಾರ್ಮಿಕ ಇಲಾಖೆಯ ಅಧಿಕಾರಿಯೊಬ್ಬರು ನೀಡಿದ ಮಾಹಿತಿಯ ಪ್ರಕಾರ, ಈ ರೀತಿ ಮಾರ್ಪಾಡುಗೊಳಿಸಲಾಗುವ ಆಂತರಿಕವಾದ ಸೆಸ್ ಸಂಗ್ರಹದ ಮೂಲಕ ಸಂಗ್ರಹವಾಗುವ ಹಣ 350 ಕೋಟಿ ರೂ. ಗಳು. ಈ ಹಣದಲ್ಲಿ 75 ಲಕ್ಷಕ್ಕೂ ಹೆಚ್ಚಿನ ಅಸಂಘಟಿತರಿಗೆ ಏನೆಲ್ಲ ಸಮಾಜಿಕ ಭದ್ರತೆ ಒದಗಿಸಲು ಸಾಧ್ಯ ಎಂಬ ಪ್ರಶ್ನೆಯೂ ಮೂಡುತ್ತದೆ.

ಖಾಸಗೀಕರಣಕ್ಕೆ ಒತ್ತು:

ರಾಜ್ಯ ಬಜೆಟ್‌ನಲ್ಲಿ ಖಾಸಗೀಕರಣ ನೀತಿಗಳ ಜಾರಿಗೆ ಒತ್ತು ಕೊಡುವ ಹಲವು ಪ್ರಸ್ತಾಪಗಳಿವೆ. ಅವುಗಳಲ್ಲಿ ವಿದ್ಯುತ್, ರಸ್ತೆ, ಮೀನುಗಾರಿಕೆ, ಪ್ರವಾಸೋದ್ಯಮ, ಜಲಮಾರ್ಗ ಮುಂತಾದ ಕ್ಷೇತ್ರಗಳಿವೆ.

ವಿದ್ಯುತ್:

ರಾಜ್ಯದಲ್ಲಿ 10 ಜಿಡಬ್ಲ್ಯೂ (GW) ಸಾಮರ್ಥ್ಯದ ನವೀಕರಿಸಬಹುದಾದ ಇಂಧನ ಉತ್ಪಾದನೆಯ ಗುರಿಯೊಂದಿಗೆ 'ಕರ್ನಾಟಕ ನವೀಕರಿಸಬಹುದಾದ ಇಂಧನ ನೀತಿ 2022–27' ಜಾರಿಗೊಳಿಸಲಾಗಿದೆ ಎಂದು ಹೇಳಲಾಗಿದೆ. ಕಳೆದ ವರ್ಷ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಗ್ರೀನ್ ಹೈಡ್ರೋಜನ್ ಒಳಗೊಂಡಂತೆ ನವೀಕರಿಸಬಹುದಾದ ಇಂಧನಗಳ ಹೂಡಿಕೆಗೆ ಸುಮಾರು 1.68 ಲಕ್ಷ ಕೋಟಿ ರೂ. ಮೌಲ್ಯದ ಒಪ್ಪಂದಗಳಿಗೆ (MOU) ಸಹಿ ಮಾಡಲಾಗಿದೆಯಂತೆ.

ಪಿಪಿಪಿ ಮಾದರಿ:

ಕರ್ನಾಟಕ ಸರ್ಕಾರವು ಈಗಾಗಲೇ ಶರಾವತಿ ಪಂಪ್ಡ್ ಸ್ಟೋರೇಜ್ ಪವರ್ ಪ್ಲಾಂಟ್ ನ (ಪಿ.ಎಸ್.ಪಿ.) ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿದ್ದು, ಈ ಯೋಜನೆಯನ್ನು ಕೇಂದ್ರ ಸರ್ಕಾರದ ಸಹಯೋಗದೊಂದಿಗೆ 7,394 ಕೋಟಿ ರೂ. ಗಳ ಅಂದಾಜು ವೆಚ್ಚದಲ್ಲಿ ಕರ್ನಾಟಕ ವಿದ್ಯುತ್ ನಿಗಮದ ಮೂಲಕ ಅನುಷ್ಠಾನಗೊಳಿಸಲಾಗುವುದು. ಇದಲ್ಲದೆ, 1,000 ಮೆಗಾ ವಾಟ್ ನ ಹೊಸ ಪಂಪ್ಡ್ ಸ್ಟೋರೇಜ್ ಘಟಕವನ್ನು, ಪಿಪಿಪಿ(ಸಾರ್ವಜನಿಕ–ಖಾಸಗಿ ಸಹಭಾಗಿತ್ವ) ಮಾದರಿಯಲ್ಲಿ ಸ್ಥಾಪಿಸಲಾಗುವುದು.

ಪಾವಗಡದಲ್ಲಿ ಬ್ಯಾಟರಿ ಸ್ಟೋರೇಜ್ ಸಿಸ್ಟಂ:

ತುಮಕೂರು ಜಿಲ್ಲೆಯ ಪಾವಗಡದಲ್ಲಿ 13,000 ಎಕರೆ ಪ್ರದೇಶದಲ್ಲಿ, ಸೌರ ಪಾರ್ಕ್ ನಿರ್ಮಾಣಗೊಂಡಿದೆ. ಇಲ್ಲಿ ಆರು ಸ್ವದೇಶಿ ಮತ್ತು ವಿದೇಶಿ ಖಾಸಗಿ ಕಂಪನಿಗಳು ಸೋಲಾರ್ ವಿದ್ಯುತ್ ಉತ್ಪಾದನೆ ಮಾಡುತ್ತಿವೆ. ಇದು ಜಗತ್ತಿನ ಮೂರನೇ ಅತಿ ದೊಡ್ಡ ವಿದ್ಯುತ್ ಉತ್ಪಾದನಾ ಸೌರ ಪಾರ್ಕ್ ಆಗಿದೆ.

ಖಾಸಗಿ ಕಂಪನಿಗಳು ಉತ್ಪಾದನೆ ಮಾಡುವ ವಿದ್ಯುತ್ ಅನ್ನು ಸರ್ಕಾರದ ವಿದ್ಯುತ್ ಸರಬರಾಜು ಕಂಪನಿಗಳು ಖರೀದಿಸಿ, ಶೇಖರಿಸಿ ಇಡಬೇಕಾದರೆ ಮತ್ತಷ್ಟು ಬ್ಯಾಟರಿ ಸ್ಟೋರೇಜ್ ಸಿಸ್ಟಂ ಗಳ ಅಗತ್ಯ ಬೇಕಲ್ಲವೇ? ಅದಕ್ಕಾಗಿ 2023–24ನೇ ಸಾಲಿನ ಕೇಂದ್ರ ಸರ್ಕಾರದ ಆಯವ್ಯಯದಲ್ಲಿ 4,000 ಎಂ.ಡಬ್ಲ್ಯೂ.ಎಚ್ ಸಾಮರ್ಥ್ಯದ ಬ್ಯಾಟರಿ ಸ್ಟೋರೇಜ್ ಸಿಸ್ಟಂ ಗಳನ್ನು ವಯಬಿಲಿಟಿ ಗ್ಯಾಪ್ ಫಂಡಿಂಗ್ (VGF) ಮೂಲಕ ಉತ್ತೇಜಿಸಲಾಗಿದೆಯಂತೆ. (ಸಾರ್ವಜನಿಕ–ಖಾಸಗಿ ಸಹಭಾಗಿತ್ವದ ಯೋಜನೆ ಗಳನ್ನು ಪ್ರೋತ್ಸಾಹಿಸಲೆಂದೇ ಕೇಂದ್ರದ ಹಣಕಾಸು ಇಲಾಖೆ ಸೃಷ್ಟಿಸಿರುವ ಒಂದು ನಿಧಿ ವಿಜಿಎಫ್) ಈ ಯೋಜನೆಯ ನೆರವಿನೊಂದಿಗೆ ಪಾವಗಡ ಸೋಲಾರ್ ಪಾರ್ಕ್ ನಲ್ಲಿ 48 ಕೋಟಿ ರೂ. ವೆಚ್ಚದಲ್ಲಿ ಬ್ಯಾಟರಿ ಶೇಖರಣೆ ವ್ಯವಸ್ಥೆಯನ್ನು ಹೊಂದಿದ 2 ಎಂ.ಎಚ್. ಸಾಮರ್ಥ್ಯದ ಸೌರ ಘಟಕವನ್ನು ಕೆಆರ್ ಇಡಿಎಲ್ ವತಿಯಿಂದ ಸ್ಥಾಪಿಸಲಾಗುವುದಂತೆ.

ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಪಿಪಿಪಿ:

2014ರಲ್ಲಿ ಕೇಂದ್ರದಲ್ಲಿ ಎನ್.ಡಿ.ಎ. ಸರ್ಕಾರ ಅಧಿಕಾರ ವಹಿಸಿಕೊಂಡ ನಂತರ ಇಲ್ಲಿಯವರೆಗೂ ಕರ್ನಾಟಕದಲ್ಲಿ 64,512 ಕೋಟಿ ರೂ ವೆಚ್ಚದಲ್ಲಿ 6,715 ಕಿ.ಮೀ. ರಾಷ್ಟ್ರೀಯ ಹೆದ್ದಾರಿಯನ್ನು ಅಭಿವೃದ್ಧಿಪಡಿಸಲಾಗಿದೆ. ಮುಂದುವರೆದು, ಒಂದು ಲಕ್ಷ ಇಪ್ಪತ್ತು ಸಾವಿರ ಕೋಟಿ ರೂ. ಗಳ ವೆಚ್ಚದಲ್ಲಿ 3,084 ಕಿ.ಮೀ. ಹೆದ್ದಾರಿಯನ್ನು ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ ಎಂದು ಹೇಳುವುದರ ಜೊತೆಗೆ ಹಲವು ಹೆದ್ದಾರಿಗಳ ಕುರಿತು ಪ್ರಸ್ತಾಪಿಸಲಾಗಿದೆ. ಬೆಂಗಳೂರು–ಚೆನ್ನೈ ಎಕ್ಸ್‌ಪ್ರೆಸ್ ವೇ, ಬೆಂಗಳೂರು–ಮೈಸೂರು ಹೆದ್ದಾರಿ, ಸೂರತ್–ಚೆನ್ನೈ ಎಕ್ಸ್ ಪ್ರೆಸ್ ವೇ, ಹುಬ್ಬಳ್ಳಿ–ದಾರವಾಡ ಆರು ಪಥಗಳ ರಸ್ತೆ, ಹುಬ್ಬಳ್ಳಿ–ಹೊಸಪೇಟೆ–ಬಳ್ಳಾರಿ–ಆಂಧ್ರ ಗಡಿ ಹೆದ್ದಾರಿ, ಚಿತ್ರದುರ್ಗ–ದಾವಣಗೆರೆ–ಹಾವೇರಿ ಮಾರ್ಗದ ಆರು ಪಥದ ಹೆದ್ದಾರಿಗಳು ಸೇರಿವೆ. ಮೈಸೂರು–ಕುಶಾಲನಗರ ಮಾರ್ಗದಲ್ಲಿ 92 ಕಿ.ಮೀ. ಉದ್ದದ ಹೆದ್ದಾರಿಯನ್ನು ಅಭಿವೃದ್ಧಿ ಪಡಿಸಲು ಅನುಮೋದನೆಯಾಗಿದೆ ಎಂಬ ಮಾಹಿತಿಗಳನ್ನು ಬಜೆಟ್ ನಲ್ಲಿ ಪ್ರಸ್ತಾಪಿಸಲಾಗಿದೆ.

ಕಲ್ಯಾಣ ಕರ್ನಾಟಕದ ಪ್ರಮುಖ ಸಂಪರ್ಕ ರಸ್ತೆಯಾದ 411 ಕಿ.ಮೀ. ಉದ್ದದ ಬೀದರ್–ಕಲಬುರಗಿ–ಬಳ್ಳಾರಿ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಹಾಗೂ ರಾಜ್ಯ ಸರ್ಕಾರವು ಜಂಟಿಯಾಗಿ ಚತುಷ್ಪಥ ರಸ್ತೆಯಾಗಿ ಅಭಿವೃದ್ಧಿಪಡಿಸಲಾಗುತ್ತಿದೆ. ಇವೆಲ್ಲವೂ ಸಾರ್ವಜನಿಕ–ಖಾಸಗಿ ಸಹಭಾಗಿತ್ವದ (PPP) ಯೋಜನೆಗಳು. ಅಂದರೆ, ಟೋಲ್ ಶುಲ್ಕ ಕೊಟ್ಟು ಬಳಕೆ ಮಾಡಬೇಕಾದ ರಸ್ತೆಗಳು.


ಬಳ್ಳಾರಿ ವಿಮಾನ ನಿಲ್ದಾಣ ಪಿಪಿಪಿ ಮಾದರಿಯಲ್ಲಿ ಅಭಿವೃದ್ಧಿಪಡಿಸಲಾಗುವುದು ಎಂದು ರಾಜ್ಯ ಬಜೆಟ್ ನಲ್ಲಿ ಹೇಳಲಾಗಿದೆ.

ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಗೆ ಬಜೆಟ್ ಏನನ್ನೂ ಕೊಡುವುದಿಲ್ಲ. ಆದರೂ..

ಕಟ್ಟಡ ಕಾರ್ಮಿಕರ 3 ಲಕ್ಷದ 80 ಸಾವಿರ ಮಕ್ಕಳಿಗೆ ವಿದ್ಯಾನಿಧಿ ಯೋಜನೆಯಡಿ 543 ಕೋಟಿ ರೂ. ಸಹಾಯಧನ ನೀಡಲಾಗಿದೆ ಎಂದೂ, 2 ಲಕ್ಷ ಕಾರ್ಮಿಕರಿಗೆ ಉಚಿತ ಬಸ್ ಪಾಸ್ ಸೌಲಭ್ಯ, 16,400 ಮಕ್ಕಳಿಗೆ ಕಲಿಕಾ ಉಪಕರಣಗಳನ್ನು ವಿತರಣೆ ಮಾಡಲಾಗಿದೆ ಎಂದೂ, ಬೆಂಗಳೂರು ಗ್ರಾಮಾಂತರ, ಶಿವಮೊಗ್ಗ, ಬೆಳಗಾವಿ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ತಾತ್ಕಾಲಿಕ ವಸತಿ ಗೃಹ ಸೇರಿದಂತೆ ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳಡಿ 23 ಲಕ್ಷ ಫಲಾನುಭವಿಗಳು ಮತ್ತು ಅವಲಂಬಿತರಿಗೆ ಒಟ್ಟು 1,785 ಕೋಟಿ ರೂ. ಗಳ ನೆರವನ್ನು ನೀಡಲಾಗಿದೆ ಎಂದು ಪ್ರಸ್ತಾಪಿಸಲಾಗಿದೆ.

ಕಟ್ಟಡ ಕಾರ್ಮಿಕರಿಗೆ ರಾಜ್ಯ ಬಜೆಟ್ ನಲ್ಲಿ ಏನನ್ನೂ ಕೊಡಲಿಲ್ಲ. ಈ ಕಲ್ಯಾಣ ಮಂಡಳಿಗೆ ಸರ್ಕಾರ ಒಂದು ನಯ್ಯಾ ಪೈಸೆಯನ್ನೂ ಕೊಡುವುದಿಲ್ಲ. ಈ ಮಂಡಳಿ ಕಟ್ಟಡ ಮತ್ತು ಇತರ ನಿರ್ಮಾಣ ಮಾಲೀಕರಿಂದ ಸಂಗ್ರಹಿಸುವ ಸೆಸ್ ಹಣದಿಂದ ಈ ಎಲ್ಲಾ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ನೀಡುತ್ತಿದೆ. ಕಲ್ಯಾಣ ಮಂಡಳಿಯಲ್ಲಿರುವ ಹಣವನ್ನು ಸರ್ಕಾರ ದುರುಪಯೋಗ ಪಡಿಸಿಕೊಳ್ಳುತ್ತಿರುವ ಉದಾಹರಣೆ ಸಾಕಷ್ಟಿವೆ. ಮಂಡಳಿಯ ಫಲಾನುಭವಿಗಳಿಗೆ ಅಗತ್ಯವಿಲ್ಲದ ವಸ್ತುಗಳನ್ನು ಮತ್ತು ಕಳಪೆ ಗುಣಮಟ್ಟದ ಪರಿಕರಗಳನ್ನು ಖರೀದಿಸಿ ವಿತರಣೆ ಮಾಡುವ ಮೂಲಕ ಸಚಿವರು, ಅಧಿಕಾರಿಗಳು ಲಾಭ ಮಾಡಿಕೊಂಡ ದೂರುಗಳು ಬಹಳಷ್ಟಿವೆ.

ಕಾರ್ಮಿಕರಿಗೆ ಕೊಡುವ ಉಚಿತ ಬಸ್ ಪಾಸ್ ಗಳಲ್ಲಿ ಮುಖ್ಯಮಂತ್ರಿ ಮತ್ತು ಕಾರ್ಮಿಕ ಮಂತ್ರಿಗಳ ಭಾವಚಿತ್ರ ಹಾಕುವ ಮೂಲಕ ಇದು ಬಿಜೆಪಿ ಸರ್ಕಾರದ ಕೊಡುಗೆ ಎಂಬಂತೆ ಬಿಂಬಿಸಲು ಹೊರಟಿದ್ದಾರೆ. ಕೊರೋನಾ ಸಾಂಕ್ರಾಮಿಕ ಸಂದರ್ಭದಲ್ಲಿ ಈ ಮಂಡಳಿಯ ಹಣದಿಂದಲೇ ಕಟ್ಟಡ ಕಾರ್ಮಿಕರಲ್ಲದವರಿಗೂ ನೆರವು ನೀಡುವ ಮೂಲಕ, ಇದು ಬಿಜೆಪಿ ಸರ್ಕಾರದ ಕೊಡುಗೆ ಎಂಬಂತೆ ಬಿಂಬಿಸಿ ರಾಜಕೀಯ ಲಾಭ ಪಡೆಯುವ ಪ್ರಯತ್ನ ಮಾಡಿದ್ದಾರೆ. ಕಟ್ಟಡ ಕಾರ್ಮಿಕರಲ್ಲದವರಿಗೆ ಮನೆ ಕಟ್ಟಿಕೊಡಲು ಸ್ಲಂ ಬೋರ್ಡ್ ಗೆ ನೂರಾರು ಕೋಟಿ ಹಣ ನೀಡಿದ್ದು, ಮತ್ತಷ್ಟು ಹಣ ನೀಡಲು ಹೊರಟಾಗ ಕಾರ್ಮಿಕರ ಸಂಘಟನೆಗಳು ಪ್ರತಿಭಟಿಸಿ ತಡೆ ಹಿಡಿದದ್ದು, ಇವೆಲ್ಲವೂ ಮಂಡಳಿಯಲ್ಲಿನ ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದಕ್ಕೆ ಕೆಲವು ಉದಾಹರಣೆಗಳು. ಆದರೂ ಕಲ್ಯಾಣ ಮಂಡಳಿಯಿಂದ ನೀಡಲಾಗುವ ಸೌಲಭ್ಯಗಳು ಮತ್ತು ನೆರವಿನ ಮೊತ್ತವನ್ನು ಬಜೆಟ್ ನಲ್ಲಿ ಪ್ರಸ್ತಾಪಿಸುವ ಉದ್ದೇಶವೇನು?









ನೊಂದವರ ಪ್ರತಿಭಟನೆಯ ತಾಣವಾದ ಫ್ರೀಡಂ ಪಾರ್ಕ್ ನಲ್ಲಿ ಒಂದು ಸುತ್ತು

ಎಲ್ಲರ ಬವಣೆಗಳೂ ಒಂದೇ: ಎಲ್ಲರ ಬವಣೆಗಳಿಗೂ ಕಾರಣ ಒಂದೇ ಅದೇ ನವ–ಉದಾರೀಕರಣ ನೀತಿಗಳು

ಅಲ್ಲಿ ಜನರು ಜಾತ್ರೆಗೆ ಸೇರುವಂತೆ ಸೇರಿರುತ್ತಾರೆ. ಮೊದಲ ಬಾರಿಗೆ ನೋಡಿದವರಿಗೆ ಅದೊಂದು ಜಾತ್ರೆಯೇನೋ ಎಂದು ಅನಿಸುವುದು ಸಹಜ. ಆ ಸ್ಥಳದಲ್ಲಿ ಮಾತ್ರವಲ್ಲದೆ ಅಕ್ಕ ಪಕ್ಕದ ರಸ್ತೆಗಳಲ್ಲಿ ಜನವೋ ಜನ. ಪಾದಚಾರಿ ಮಾರ್ಗದಲ್ಲಿ ವಿವಿಧ ಬಗೆಯ ವಸ್ತುಗಳ ಮಾರಾಟದ ಭರಾಟೆ ನಡೆಯುತ್ತಿರುತ್ತದೆ.

ಹತ್ತಾರು ಟೆಂಟ್‌ಗಳು. ಟೆಂಟ್ ಗಳಲ್ಲಿ ಚಿಕ್ಕ, ದೊಡ್ಡ ವೇದಿಕೆಗಳು. ವೇದಿಕೆಯ ಹಿಂದಿನ ಪರದೆಯ ಮೇಲೆ ತಮ್ಮ ತಮ್ಮ ಸಂಘಟನೆಗಳ ಹೆಸರುಗಳುಳ್ಳ ಪ್ರಮುಖ ಬೇಡಿಕೆಗಳಿರುವ ದೊಡ್ಡ ಗಾತ್ರದ ಬ್ಯಾನರುಗಳು, ವೇದಿಕೆಗಳ ಎದುರು ನೂರಾರು, ಕೆಲವು ವೇದಿಕೆಗಳ ಎದುರು ಸಾವಿರಾರು ಕುರ್ಚಿಗಳು, ಐವತ್ತು ಸಾವಿರಕ್ಕೂ ಹೆಚ್ಚಿನ ಸಂಖ್ಯೆಯ ಜನರು.

ಇದು ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿರುವ ಫ್ರೀಡಂ ಪಾರ್ಕ್ ಬಳಿ ಕಂಡ ದೃಶ್ಯಗಳು. ವಿಧಾನಸೌಧಕ್ಕೆ ಒಂದು ಕೀ.ಮೀ. ನಷ್ಟು ಸಮೀಪವಿರುವ ಈ ಸ್ಥಳ ಈ ಹಿಂದೆ ಬೆಂಗಳೂರು ಕೇಂದ್ರಕಾರಾಗೃಹವಾಗಿತ್ತು. ಇದನ್ನು ಬೇರೆಡೆಗೆ ಸ್ಥಳಾಂತರಿಸಿ ಇಂದು ಫ್ರೀಡಂ ಪಾರ್ಕ್ ಅರ್ಥಾತ್ ಸ್ವಾತಂತ್ರ್ಯ ಉದ್ಯಾನವನ ಮಾಡಲಾಗಿದೆ.

> ಪ್ರಜೆಗಳು ಆರಿಸಿ ಕಳುಹಿಸಿದ ಜನಪ್ರತಿನಿಧಿಗಳು ಜನರ ಬಳಿ ಹೋಗಿ ಜನತೆಯ ಸಂಕಷ್ಟಗಳನ್ನು ತಿಳಿದು, ಸರ್ಕಾರಕ್ಕೆ ಆ ಸಮಸ್ಯೆಗಳ ಕುರಿತು ಮಾಹಿತಿ ನೀಡುವ ಮೂಲಕ ಮತ್ತು ಸರ್ಕಾರದ ಮೇಲೆ ಒತ್ತಡ ತರುವ ಮೂಲಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು ಪ್ರಜಾಪ್ರಭುತ್ವದ ಒಂದು ಪ್ರಕ್ರಿಯೆ. ಆದರೆ, ಚುನಾವಣೆಯ ಸಮಯದಲ್ಲಿ ಜನರ ಬಳಿ ಬರುವ ಶಾಸಕರು, ಸಂಸದರು ತಾವು ಆಯ್ಕೆಯಾದ ನಂತರ ಜನರೇ ಇವರನ್ನು ಹುಡುಕಿಕೊಂಡು ಹೋಗಿ, ತಮ್ಮ ಸಮಸ್ಯೆಗಳ ಪರಿಹಾರಕ್ಕೆ ಅಂಗಲಾಚುವ ಪರಿಸ್ಥಿತಿ ನಮ್ಮದು.

ವರ್ಷದ 365 ದಿನಗಳೂ ಪ್ರತಿಭಟನೆಗಳು:

ಫ್ರೀಡಂ ಪಾರ್ಕ್ ನಲ್ಲಿ ವರ್ಷದ ಎಲ್ಲಾ ದಿನಗಳೂ ಒಂದಲ್ಲ ಒಂದು ಪ್ರತಿಭಟನೆ ನಡೆಯುತ್ತಲೇ ಇರುತ್ತವೆ. ವರ್ಷದಿಂದ, ಹಲವು ತಿಂಗಳುಗಳು, ಹಲವು ದಿನಗಳು ಧರಣಿ ಕುಳಿತವರೂ ಇಲ್ಲಿದ್ದಾರೆ. ಪ್ರತಿಭಟನೆ ನಡೆಸಿ ಜನಪ್ರತಿನಿಧಿಗಳ ಭರವಸೆ ಮೇಲೆ ಹಿಂತಿರುಗಿ ಹೋಗಿ, ಭರವಸೆ ಈಡೇರದ ಕಾರಣಕ್ಕೆ ಮತ್ತೆ ಪ್ರತಿಭಟನೆಗೆ ಬರುವವರೂ ಇದ್ದಾರೆ. ರಾಜ್ಯ ಸರ್ಕಾರದ ಬಳಿ ತಮ್ಮ ಸಂಕಷ್ಟಗಳನ್ನು ಹೇಳಿಕೊಳ್ಳುವ ಅಂತಿಮ ಮಾರ್ಗವೇ ಇಲ್ಲಿನ ಪ್ರತಿಭಟನೆಗಳು.

ಫೆಬ್ರವರಿ ಮೊದಲ ಮತ್ತು ಎರಡನೆಯ ವಾರದಲ್ಲಿ ಫ್ರೀಡಂ ಪಾರ್ಕ್ ಗೆ ಭೇಟಿ ಕೊಟ್ಟಾಗ ಕಂಡ ದೃಶ್ಯಗಳಿವು. ಒಂದು ದಿನ ಅಲ್ಲಿ 15ಕ್ಕೂ ಹೆಚ್ಚು ಬೇರೆ ಬೇರೆ ಸಂಘಟನೆಗಳ ನೇತೃತ್ವದಲ್ಲಿ ಪ್ರತಿಭಟನೆಗಳು ನಡೆಯುತ್ತಿದ್ದವು. ಪೋಲೀಸರ ಮಾಹಿತಿಯ ಪ್ರಕಾರ ಆ ದಿನ 22 ಪ್ರತಿಭಟನೆಗಳಿಗೆ ಅವಕಾಶ ಕೋರಿ ಮನವಿ ಬಂದಿದ್ದವಂತೆ. ಕೆಲವು ಸಂಘಟನೆಗಳಿಗೆ ವೇದಿಕೆ ಹಾಕಿಕೊಳ್ಳಲು ಸ್ಥಳಾವಕಾಶವೇ ಇಲ್ಲದೆ ಬಂದ ದಾರಿಗೆ ಸುಂಕವಿಲ್ಲ ಎಂಬಂತೆ ಹಿಂತಿರುಗಿ ಹೋಗಿದ್ದರೆ, ಮತ್ತೆ ಕೆಲವು ಸಂಘಟನೆಗಳನ್ನು ಪೋಲೀಸರೇ ಉಪಾಯದಿಂದ ಅಲ್ಲಿಂದ ಸಾಗಹಾಕಿದ್ದರು.

ಇದಕ್ಕೆ ಒಂದು ಉದಾಹರಣೆ, ಹಾವೇರಿ ಜಿಲ್ಲೆಯಿಂದ ಪರಿಹಾರ ಕೇಳಿ ಬಂದಿದ್ದ 2000 ಕ್ಕೂ ಹೆಚ್ಚು ಮಹಿಳೆಯರು. ಇವರು ವೈದ್ಯರ ವಂಚನೆಯ ಕಾರಣದಿಂದಾಗಿ ತಮ್ಮ ಗರ್ಭಕೋಶ ಕಳೆದುಕೊಂಡ ಮಹಿಳೆಯರು. ಹಾವೇರಿಯಿಂದ ರೈಲಿನಲ್ಲಿ ಬೆಂಗಳೂರಿಗೆ ರಾತ್ರಿ ಬಂದಿಳಿದ ಈ ಮಹಿಳೆಯರಿಗೆ ಫ್ರೀಡಂ ಪಾರ್ಕ್ ಗೆ ಹೋಗಿ ಪ್ರತಿಭಟನೆ ಮಾಡಲು ಪೋಲೀಸರು ಅವಕಾಶ ಕೊಡಲಿಲ್ಲ. ಇವರು ರೈಲು ನಿಲ್ದಾಣದಲ್ಲಿಯೇ ಪ್ರತಿಭಟನೆಗೆ ಕುಳಿತರು. ಪೋಲೀಸರು ರಾಣಿಬೆನ್ನೂರು ಶಾಸಕರನ್ನು ಕರೆಸಿದರು. ಶಾಸಕರು ಭರವಸೆ ನೀಡುವ ನಾಟಕವಾಡಿ, ಶಾಸಕರೇ ಸ್ವತಃ ಬಸ್ಸುಗಳ ಏರ್ಪಾಡು ಮಾಡಿ ಮಹಿಳೆಯರನ್ನು ಬೆಳಕು ಅರಿಯುವ ಮುನ್ನ ಬೆಂಗಳೂರಿನಿಂದ ಸಾಗಹಾಕಿದರು. ಗರ್ಭಕೋಶ ಕಳೆದುಕೊಂಡ ಈ ಮಹಿಳೆಯರು ಮೂರು ನಾಲ್ಕು ವರ್ಷಗಳಿಂದ ಪರಿಹಾರಕ್ಕಾಗಿ ಹೋರಾಟ ನಡೆಸುತ್ತಲೇ ಬಂದಿದ್ದಾರೆ ಎಂಬುದನ್ನು ಇಲ್ಲಿ ಗಮನಿಸಬೇಕು.

ವಿವಿಧ ವಿಭಾಗಗಳಿಂದ ಪ್ರತಿಭಟನೆಗಳು:

ಅಂಗನವಾಡಿ ನೌಕರರು, ಕೃಷಿ ಕೂಲಿಕಾರರು, ಬಿಸಿಯೂಟ ನೌಕರರು, ಪಂಚಾಯಿತಿ ನೌಕರರು, ಸಂಜೀವಿನಿ ನೌಕರರು, ವಿವಿಧ ವಿಭಾಗಗಳಲ್ಲಿ ದುಡಿಯುವ ಅಸಂಘಟಿತ ಕಾರ್ಮಿಕರು, ಸ್ಮಶಾನಗಳಲ್ಲಿ ಕೆಲಸ ಮಾಡುವ ಕಾರ್ಮಿಕರು, ರೈತರ ಸಂಯುಕ್ತ ಹೋರಾಟ ಸಮಿತಿ, ರಾಜ್ಯ ರಸ್ತೆ ಸಾರಿಗೆ ನೌಕರರು ತಮ್ಮ ತಮ್ಮ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಪ್ರತಿಭಟನೆ ನಡೆಸುತ್ತಿದ್ದರು.

ಕಾರ್ಖಾನೆ ಉಳಿಸಿ, ನಮ್ಮ ಉದ್ಯೋಗ ಉಳಿಸಿ ಎಂಬ ಬೇಡಿಕೆ ಇಟ್ಟು ಭದ್ರಾವತಿಯ ವಿಶ್ವೇಶ್ವರಯ್ಯ ಐರನ್ ಅಂಡ್ ಸ್ಟೀಲ್ ಕಾರ್ಮಿಕರು ಒಂದೆಡೆ ಒಂದು ದಿನದ ಪ್ರತಿಭಟನೆ ನಡೆಸುತ್ತಿದ್ದರು.

ಪಿಂಚಣಿ ವಂಚಿತ ನೌಕರರು ಪಿಂಚಣಿಗಾಗಿ ಒತ್ತಾಯಿಸಿ ನಡೆಯುತ್ತಿರುವ ಅನಿರ್ಧಿಷ್ಟ ಕಾಲದ ಹೋರಾಟ 130ನೇ ದಿನಕ್ಕೆ ಕಾಲಿಟ್ಟಿತ್ತು. (ಹೋರಾಟ ನಿರತ ಇಬ್ಬರು ನಿವೃತ್ತ ಶಿಕ್ಷಕರ ಆತ್ಮಹತ್ಯೆಯ ಕಾರಣದಿಂದ ಅನುದಾನಿತ ಶಾಲಾ ಕಾಲೇಜು ನೌಕರರು ಪಿಂಚಣಿಗಾಗಿ ಒತ್ತಾಯಿಸಿ ನಡೆಸುತ್ತಿದ್ದ ಹೋರಾಟ ಫೆಬ್ರವರಿ 25 ರಂದು 141 ನೇ ದಿನಕ್ಕೆ ಅಂತ್ಯಗೊಳಿಸಿದ್ದಾರೆ. ಇಷ್ಟಾದರೂ ಸರ್ಕಾರ ಅವರಿಗೆ ಯಾವುದೇ ಭರವಸೆ ನೀಡಲಿಲ್ಲ.)

'ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳ ಭೂ ಪರಭಾರೆ ನಿಷೇಧ ಕಾಯ್ದೆ 1978–79' ಕಾಲಮಿತಿ ಅನ್ವಹಿಸುವುದಿಲ್ಲವೆಂದು ಸಮಗ್ರ ತಿದ್ದುಪಡಿ ಮಾಡಿ ಸುಗ್ರಿವಾಜ್ಞೆಗೆ ಅಗ್ರಹಿಸಿ ನಡೆಯುತ್ತಿರುವ ಹೋರಾಟ 40ನೇ ದಿನಕ್ಕೆ ಕಾಲಿಟ್ಟಿತ್ತು. ಸಂವಿಧಾನ ಸಂರಕ್ಷಣಾ ಮಹಾ ಒಕ್ಕೂಟ ನೇತೃತ್ವದಲ್ಲಿ ಈ ಹೋರಾಟ ನಡೆಯುತ್ತಿತ್ತು.

ಕುಂಬಾರ ಜನಾಂಗದವರು ತಮ್ಮ ಕುಲಕಸುಬು ರಕ್ಷಣೆ ಮಾಡುವುದೂ ಸೇರಿದಂತೆ ತಮ್ಮ ಜನಾಂಗಕ್ಕೆ ಸಾಮಾಜಿಕ ಭದ್ರತೆ ಒದಗಿಸುವ ಕುಂಬಾರರ ಪ್ರತ್ಯೇಕ ಅಭಿವೃದ್ಧಿ ನಿಗಮ ಸ್ಥಾಪನೆಗೆ ಒತ್ತಾಯಿಸಿ 15 ದಿನಗಳಿಂದ (2023ರ ಜನವರಿ 30ರಿಂದ) ಸತ್ಯಾಗ್ರಹ ನಡೆಸುತ್ತಿದ್ದರು.

ಬೇಡ ಜಂಗಮರು ತಮ್ಮ ಹಲವು ಹಕ್ಕುಗಳಿಗಾಗಿ 2022ರ ಜೂನ್ 30ರಿಂದ ರಾಜ್ಯ ಮಟ್ಟದ ಸತ್ಯಾತ್ರಹ ನಡೆಸುತ್ತಿದ್ದರು. ಮಠಾಧೀಶರ ನೇತೃತ್ವದಲ್ಲಿ ನಡೆಯುತ್ತಿರುವ ಈ ಸತ್ಯಾಗ್ರಹ ಏಳು ತಿಂಗಳಿನಿಂದ (224ನೇ ದಿನ) ನಡೆಯುತ್ತಿದೆ.

ಲಿಂಗಾಯತ ಪಂಚಮಶಾಲಿ ಜಾತಿ ಸಂಘಟನೆಯೊಂದು ತಮ್ಮ ಸಮಾಜದ ಸ್ವಾಮೀಜಿ ನೇತೃತ್ವದಲ್ಲಿನ ಪ್ರತಿಭಟನೆ 32 ದಿನಗಳಿಂದ ನಡೆಯುತ್ತಿತ್ತು. ತಮ್ಮ ಜಾತಿಯನ್ನು 2ಎ ಕೆಟಗಿರಿಗೆ ಸೇರಿಸಬೇಕು ಎಂಬುದು ಇವರ ಪ್ರಮುಖ ಬೇಡಿಕೆ.

ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಜಾರಿಗಾಗಿ ಒತ್ತಾಯಿಸಿ 2022ರ ಡಿಸೆಂಬರ್ 12ರಂದಲೂ ರಾಜ್ಯ ಮಟ್ಟದ ಹೋರಾಟ ಸಮಿತಿಯೊಂದು ಸತ್ಯಾಗ್ರಹ ನಡೆಸುತ್ತಿತ್ತು.

ಫೆ–14ರಂದು ಈಡಿಗ, ಬಿಲ್ಲವ, ನಾಮಧಾರಿ ಸೇರಿದಂತೆ ತಮ್ಮ ಸಮಾಜದ ಸ್ವಾಮೀಜಿಗಳ ನೇತೃತ್ವದಲ್ಲಿಅಭಿವೃದ್ಧಿ ನಿಗಮ ಸ್ಥಾಪನೆ, ಕುಲ ಕಸುಬು ರಕ್ಷಣೆ ಸೇರಿದಂತೆ ಹತ್ತು ಬೇಡಿಕೆಗಳನ್ನು ಇಟ್ಟು, ಕುದ್ರೋಳಿ ಗೋಕರ್ಣನಾಥ ದೇವಸ್ಥಾನದಿಂದ ಪಾದಯಾತ್ರೆ ಮೂಲಕ ಬಂದು ಒಂದು ದಿನದ ಪ್ರತಿಭಟನೆ ನಡೆಸುತ್ತಿದ್ದರು.

ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಒಳಗುತ್ತಿಗೆ ನೌಕರರು ಉದ್ಯೋಗ ಖಾಯಂ ಮಾಡಬೇಕೆಂದು ಫೆ–13ರಂದು ಹೋರಾಟ ನಡೆಸುತ್ತಿದ್ದರು.

ಎಲ್ಲರ ಬೇಡಿಕೆಗಳೂ ಅಂತಿಮವಾಗಿ ಒಂದೇ;

ಇವರೆಲ್ಲರ ಬೇಡಿಕೆಗಳಲ್ಲಿ ಕಂಡುಬರುವ ಅಂಶಗಳೆಂದರೆ, ಉದ್ಯೋಗ, ಉದ್ಯೋಗ ಭದ್ರತೆ, ಬದುಕಲು ಅವಶ್ಯಕವಾದ ಕನಿಷ್ಠ ವೇತನ/ ಕೂಲಿ, ಮುಪ್ಪಿನ ಕಾಲದಲ್ಲಿ ಬದುಕಿಗೆ ಭದ್ರತೆಯ ಭರವಸೆಯಾದ ಪಿಂಚಣಿ, ಸಾಮಾಜಿಕ ಭದ್ರತೆ, ಉಚಿತ ಅಥವಾ ಸಾಮಾನ್ಯರ ಕೈಗೆಟಕುವ ಶಿಕ್ಷಣ ಮತ್ತು ಆರೋಗ್ಯ, ಉಳಲು ಭೂಮಿ, ವಾಸಿಸಲು ಮನೆ.

ಮೀಸಲಾತಿ, ಒಳಮೀಸಲಾತಿ, 2ಎ ಕೆಟಗಿರಿಗೆ ಸೇರ್ಪಡೆಯಂತಹ ಬೇಡಿಕೆಗಳ ಹಿಂದಿರುವ ಪ್ರಮುಖ ಕಾರಣಗಳೂ ಇವೇ ಆಗಿರುತ್ತವೆ.

ಅಗತ್ಯ ವಸ್ತುಗಳ ಬೆಲೆ ಹೆಚ್ಚಳ, ಜನಸಾಮಾನ್ಯರ ಮೇಲಿನ ತೆರಿಗೆ ಹೆಚ್ಚಳ, ಸಾರ್ವಜನಿಕ ಉದ್ಯಮಗಳ ಖಾಸಗೀಕರಣ, ನಿರುದ್ಯೋಗ ಹೆಚ್ಚಳ, ಕಾರ್ಖಾನೆಗಳ ಮುಚ್ಚುವಿಕೆ, ಉದ್ಯೋಗಗಳನ್ನು ಕಳೆದುಕೊಳ್ಳುವ ಭೀತಿ, ಹಳೆಯ ಪಿಂಚಣಿ ಹೋಗಿ ಹೊಸ ಪಿಂಚಣಿ ವ್ಯವಸ್ಥೆ ಬಂದದ್ದು, ಕಾರ್ಮಿಕ ಕಾಯ್ದೆಗಳ ತಿದ್ದುಪಡಿ ಮಾಡಿ ಕಾರ್ಮಿಕರ ಹಕ್ಕುಗಳನ್ನು ಕಸಿದುಕೊಂಡಿದ್ದು, ಶಿಕ್ಷಣ ಮತ್ತು ಆರೋಗ್ಯ ಸೇವೆ ದುಬಾರಿ, ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳಿಂದ ಸರ್ಕಾರ ನಿಧಾನವಾಗಿ ಹಿಂದೆ ಸರಿಯುತ್ತಿರುವುದು, ಉತ್ಪಾದನಾ ಮತ್ತು ಸೇವಾ ವಲಯಗಳಲ್ಲಿ ದೊಡ್ಡ ಬಂಡವಾಳಗಾರರಿಂದ ಏಕಸ್ವಾಮ್ಯ ಸ್ಥಾಪನೆಯ ಪ್ರಯತ್ನದಿಂದ ಕುಲಕಸುಬುಗಳು ನಾಶವಾಗುತ್ತಿರುವದು.





ಗಾಯಕ ಕೃಷ್ಣಯ್ಯ ಲಾಯಿಲ ನಿಧನ

ಬೆಳ್ತಂಗಡಿ ಸಮುದಾಯ ಘಟಕದ ಕಲಾವಿದ ಹಾಡುಗಾರರಾದ ಕೃಷ್ಣಯ್ಯ ಲಾಯಿಲ ಅವರು ಅಲ್ಪಕಾಲದ ಅಸೌಖ್ಯದಿಂದ ಫೆಬ್ರವರಿ 21 ರಂದು ನಿಧನರಾಗಿದ್ದಾರೆ. ಅವರಿಗೆ 48 ವರ್ಷ ವಯಸ್ಸಾಗಿತ್ತು.

ರಂಗಗೀತೆಗಳು, ಜನಪದ ಹಾಡುಗಳು, ಭಾವಗೀತೆಗಳು, ಹೋರಾಟದ ಹಾಡುಗಳು ಇತ್ಯಾದಿಗಳ ಮೂಲಕ ಸಮುದಾಯ ತಂಡಕ್ಕೆ ಮಾತ್ರವಲ್ಲ, ದಲಿತ ಸಂಘರ್ಷ ಸಮಿತಿಗಳಿಗೂ ಯುವಜನ ಮೇಳಗಳಿಗೂ ಮಕ್ಕಳ ರಜಾ ಶಿಬಿರಗಳಿಗೂ ಕಲಾ ಕಾರ್ಯಕ್ರಮಗಳನ್ನು ನೀಡುತ್ತಿದ್ದರು. ಸಮುದಾಯ, ಕಾರ್ಮಿಕ ಸಂಘಟನೆಗಳು, ಸಿಪಿಐಎಂನ ಹೋರಾಟದ ಸಂದರ್ಭಗಳಲ್ಲಿ ಬೆಳ್ತಂಗಡಿ ತಾಲೂಕಿನಲ್ಲಿ ಆಡುತ್ತಿದ್ದ ಬೀದಿನಾಟಕಗಳು ಅವರ ಹಾಡುಗಳಿಲ್ಲದೆ ಸಾಗುತ್ತಿರಲಿಲ್ಲ. ಆಕಾಶವಾಣಿ ಮತ್ತು ದೂರದರ್ಶನಗಳ ಕಲಾವಿದರಾಗಿಯೂ ಕನ್ನಡ ಸಂಸ್ಕೃತಿ ಇಲಾಖೆಯ ಕಲಾವಿದರಾಗಿಯೂ ಗುರುತಿಸಲ್ಪಟ್ಟಿದ್ದರು.

ದ.ಕ. ಜಿಲ್ಲೆಯ ಡಿವೈಎಫಐನ ಕೆಲವು ಘಟಕಗಳು ಮಕ್ಕಳ ರಜಾ ಶಿಬಿರಗಳನ್ನು ಬೇಸಿಗೆ ಶಿಬಿರಗಳನ್ನು ಏರ್ಪಡಿಸಿದಾಗ ಅವರಿಗೆ ಹಲವಾರು ವರ್ಷಗಳಿಂದ ಕೃಷ್ಣಯ್ಯನವರು ಮಕ್ಕಳಿಗೆ ಹಾಡುಗಳ ತರಬೇತಿಯನ್ನು ನೀಡುತ್ತಿದ್ದರು. ಕಲಾ ಶಿಕ್ಷಕರಾಗಿ ಸಮಾಜಕಲ್ಯಾಣ ಮತ್ತು ಇತರ ಹಾಸ್ಟೆಲುಗಳಲ್ಲಿ ಯುವಕ ಯುವತಿಯರಿಗೆ ಹಾಡುವಿಕೆಯ ತರಬೇತಿಯನ್ನು ನೀಡಿದ್ದಾರೆ. ರಾಜ್ಯ ಜಿಲ್ಲಾ ಮಟ್ಟದ ಪ್ರಶಸ್ತಿಗಳನ್ನು ಪಡೆದ ಇವರನ್ನು ಹಲವಾರು ಸಂಘಸಂಸ್ಥೆಗಳು ಸನ್ಮಾನಿಸಿವೆ.

ಕೃಷ್ಣಯ್ಯ ಅವರ ನಿಧನ ಜಿಲ್ಲೆಯ ಸಾಂಸ್ಕೃತಿಕ ಚಳುವಳಿಗೊಂದು ನಷ್ಟ. ಫೆಬ್ರುವರಿ 21 ರಂದು ಸಮುದಾಯ ಮತ್ತು ಬೆಳ್ತಂಗಡಿಯ ಅಭಿಮಾನಿಗಳು ಅವರಿಗೆ ನುಡಿನಮನ ಸಲ್ಲಿಸಿದರು.

ಬಿಬಿಸಿ, ಹಿಂಡನ್‌ಬರ್ಗ್ ... ಇತ್ಯಾದಿ: ದೇಶಭಕ್ತಿಯ ಅಮೃತ ಕಾಲದ ಆವೃತ್ತಿ?

ಇದು ಅಮೃತ ಕಾಲ

ಬಿಬಿಸಿ ಸಾಕ್ಷ್ಯಚಿತ್ರ ಮತ್ತು ಹಿಂಡೆನ್‌ಬರ್ಗ್ ರಿಸರ್ಚ್ ಪ್ರಕಟಣೆಯ ನಂತರ 'ದೇಶಭಕ್ತಿ'ಯ ಹೊಸ ಆವೃತ್ತಿ ಅನಾವರಣಗೊಳ್ಳುತ್ತಿರುವಂತೆ ಕಾಣುತ್ತಿದೆ. ಬಹುಶಃ ಇದನ್ನು ಅಮೃತ ಕಾಲದ ಆವೃತ್ತಿ ಎನ್ನಬಹುದೇನೋ.

ಬಿಬಿಸಿ ಸಾಕ್ಷ್ಯಚಿತ್ರ ವಸಾಹತುಶಾಹೀ ಮನೋಭಾವದ ಮುಂದುವರಿಕೆಯನ್ನು ಬಿಂಬಿಸುತ್ತದೆ ಎಂದು ಸ್ವತಃ ದೇಶದ ವಿದೇಶಾಂಗ ಇಲಾಖೆ ಟಿಪ್ಪಣಿ ಮಾಡಿತು.

ವಿದೇಶಾಂಗ ಮಂತ್ರಿಗಳಂತೂ ಈಗ ಬಾಯಿ ತೆರೆದರೆ 'ದೇಶಭಕ್ತಿ'ಯ ಉದ್ಗಾರಗಳನ್ನು ಹೊಮ್ಮಿಸುತ್ತಿದ್ದಾರೆ ಎಂದು ಒಬ್ಬ ರಾಜಕೀಯ ವೀಕ್ಷಕರು ಟಿಪ್ಪಣಿ ಮಾಡಿದ್ದಾರೆ. ರಷ್ಯಾದಿಂದ ತೈಲ ಆಮದು, ಬಿಬಿಸಿ ಸಾಕ್ಷ್ಯಚಿತ್ರ, ಹಿಂಡನ್‌ಬರ್ಗ್ ಪ್ರಕಟಣೆಗಳ ಬಗ್ಗೆ ಅಮೆರಿಕದಲ್ಲಿ ನೆಲೆಸಿರುವ ಶ್ರೀಮಂತ ವ್ಯವಹಾರಸ್ಥ ಜಾರ್ಜ್ ಸೊರೊಸ್ ಟಿಪ್ಪಣಿ ಕುರಿತಂತೆ ಬಹಳಷ್ಟು ದೇಶಭಕ್ತಿಯ ಉದ್ಗಾರಗಳು ಅವರಿಂದ ಹೊಮ್ಮಿ ಬಂದಿವೆ.

ಅತ್ತ ಅದಾಣಿ ಸಮೂಹದ ವ್ಯವಹಾರಗಳನ್ನು ಕುರಿತ ಹಿಂಡನ್‌ಬರ್ಗ್ ರಿಸರ್ಚ್‌ನ ಸ್ಫೋಟಕ ಟಿಪ್ಪಣಿಗಳ ವಿರುದ್ಧ 'ಸ್ಪಷ್ಟೀಕರಣ' ನೀಡುವಾಗ ಆ ಸಮೂಹದ ಸಿಎಫ್‌ಒ ಅಂದರೆ ಮುಖ್ಯ ಹಣಕಾಸು ಅಧಿಕಾರಿಯ ಪಕ್ಕದಲ್ಲಿ, ಸಾಮಾನ್ಯವಾಗಿ ಸಂವಿಧಾನಿಕ ಹುದ್ದೆಯಲ್ಲಿರುವ ವ್ಯಕ್ತಿ ಭಾಷಣ ಮಾಡುವಾಗ ಮಾತ್ರ ಇರುವಂತೆ ರಾಷ್ಟ್ರಧ್ವಜವನ್ನು ಇರಿಸಿಕೊಳ್ಳಲಾಗಿತ್ತು ಎಂಬುದನ್ನು ಮಾಧ್ಯಮಗಳು ವಿಶೇಷವಾಗಿ ಗಮನಿಸಿದವು. ಗಮನಾರ್ಹ ಸಂಗತಿಯೆಂದರೆ ಈ ಟಿಪ್ಪಣಿಗಳು ಮುಖ್ಯವಾಗಿ ಆ ಸಮೂಹದ ವಿದೇಶಿ ಬಾಂಡುಗಳು ಮತ್ತು ವಿದೇಶಿ ಶೇರು ಮಾರುಕಟ್ಟೆಗಳಲ್ಲಿ ವ್ಯವಹಾರ–ಅವ್ಯವಹಾರಗಳನ್ನು ಕುರಿತಾಗಿದೆ. ಸಾಲದ್ದಕ್ಕೆ, ಪಕ್ಕದಲ್ಲಿ ರಾಷ್ಟ್ರಧ್ವಜ ಇರಿಸಿಕೊಂಡು 'ಸ್ಪಷ್ಟೀಕರಣ' ನೀಡುತ್ತಿದ್ದವರು ಈಗ ಆಸ್ಟ್ರೇಲಿಯಾದ ನಾಗರಿಕತ್ವ ಪಡೆದವರು ಎಂದೂ ಹೇಳಲಾಗಿದೆ!

ಭಾರತದ ನಾಗರಿಕತ್ವ ತ್ಯಜಿಸುತ್ತಿರುವ ಹೆಚ್‌ಎನ್‌ಐಗಳು

ಇದೇ ವೇಳೆಗೆ ಕಳೆದ ವರ್ಷವೊಂದರಲ್ಲೇ 2.25 ಲಕ್ಷ ಮಂದಿ ತಮ್ಮ ಭಾರತೀಯ ನಾಗರಿಕತ್ವ ಬಿಟ್ಟಿದ್ದಾರೆ, ಅಮೆರಿಕ, ಆಸ್ಟ್ರೇಲಿಯ, ಕೆನಡ, ಪೊರ್ತುಗಲ್ ಮುಂತಾದ ದೇಶಗಳ ನಾಗರಿಕತ್ವ ಪಡೆದಿದ್ದಾರೆ ಎಂದು ವರದಿಯಾಗಿದೆ(ದಿ ಹಿಂದು, ಫೆ.20). ಇವರಲ್ಲಿ ತಮ್ಮ ಅರ್ಹತೆಗೆ ಸರಿಯಾದ ಉದ್ಯೋಗ ಇಲ್ಲಿ ಸಿಗದೆ, ಅಲ್ಲಿ ಸಿಕ್ಕಿದ್ದರಿಂದಾಗಿ ಹೋದವರಿಗಿಂತ ಹೆಚ್ಚಾಗಿ, ಬಹಳಷ್ಟು ಮಂದಿ ಉದ್ಯಮಿಗಳು, ವಾಣಿಜ್ಯ ಮಾಲಕರು ಇತ್ಯಾದಿ ಎಚ್‌ಎನ್‌ಐ ಗಳು ಅಂದರೆ 'ಹೆಚ್ಚು ಬೆಲೆಬಾಳುವ ವ್ಯಕ್ತಿ'ಗಳು! ಪೊರ್ತುಗಲ್‌ನಲ್ಲಿ 5 ಲಕ್ಷ ಯುರೋ(4.4 ಕೋಟಿ ರೂ.) ಹೂಡಿಕೆ ಮಾಡಿದರೆ 5 ವರ್ಷಗಳ ನಂತರ ಅಲ್ಲಿಯ ಪಾಸ್‌ಪೋರ್ಟ್ ಸಿಗುತ್ತದೆ ಎನ್ನಲಾಗಿದೆ. ಅಮೆರಿಕದಲ್ಲಿ 5ರಿಂದ 7ವರ್ಷಗಳಲ್ಲಿ 8ಲಕ್ಷ ಡಾಲರ್(6.6 ಕೋಟಿ ರೂ.) ಹೂಡಿಕೆ ಮಾಡಿದರೆ ಪಾಸ್‌ಪೋರ್ಟ್ ಪಡೆಯಲು ಅರ್ಹರಾಗುವ ಸ್ಕೀಮುಗಳಿವೆಯಂತೆ.

ಇದರೊಂದಿಗೇ ಪ್ರಸಕ್ತ ಸರಕಾರ ಟಾಟಾ ಸಮೂಹದ ಕೈಗಳಿಗೆ ವಾಪಾಸು ಕೊಟ್ಟ ಏರ್ ಇಂಡಿಯ ಅಮೆರಿಕಾದ ಬೋಯಿಂಗ್‌ನ 220 ವಿಮಾನಗಳಿಗೆ, ಮತ್ತು ಯುರೋಪಿನ ಏರ್‌ಬಸ್‌ನ 250 ವಿಮಾನಗಳಿಗೆ ಆರ್ಡರ್ ಕೊಟ್ಟಿದೆ. ಇದು ಕಳೆದ ದಶಕದಲ್ಲೇ ಅತಿ ದೊಡ್ಡ ಆರ್ಡರ್ ಎನ್ನಲಾಗಿದೆ. ಇದನ್ನು ಪ್ರಕಟಿಸಿದ ಇವೆಂಟ್‌ನಲ್ಲಿ ಟಾಟಾ ಸಮೂಹದ ಮುಖ್ಯಸ್ಥ ರತನ್ ಟಾಟಾರಲ್ಲದೆ ಭಾರತದ ಪ್ರಧಾನ ಮಂತ್ರಿಗಳು ಮತ್ತು ಫ್ರಾನ್ಸಿನ ಅಧ್ಯಕ್ಷರೂ ಇದ್ದರಂತೆ! ಬಹುಶಃ ಇದರಿಂದಾಗಿಯೇ ಏರ್ ಇಂಡಿಯಾ ಈಗ ಖಾಸಗಿ ಒಡೆತನದಲ್ಲಿದ್ದರೂ, ಇದೊಂದು 'ರಾಷ್ಟ್ರೀಯ' ಇವೆಂಟ್ ಎಂದು ಟಾಟಾ ಸಮೂಹದ ವಕ್ತಾರರು ಹೇಳಿಕೊಂಡಿದ್ದಾರೆ.

ಇಲ್ಲಿ ಯಾವ ಬಾವುಟ?

ಇದಲ್ಲದೆ ಇಂತಹ 'ದೇಶಭಕ್ತಿ'ಯ ವಾತಾವರಣದಲ್ಲಿ ಅಮೆರಿಕಾದೊಂದಿಗೆ ಈ–ಸಿಇಟಿ ಎಂಬ ಕಾರ್ಯಕ್ರಮಕ್ಕೆ ಸಹಿ ಹಾಕಲಾಗಿದೆ. ಇದು ಅಮೆರಿಕಾದಂತಹ ಜಗತ್ತಿನ ಮೇಲೆ ಸವಾರಿ ಮಾಡಲು ಸದಾ ಹವಣಿಸುತ್ತಿರುವುದು ಮತ್ತೆ–ಮತ್ತೇ ಕಾಣಬರುತ್ತಿರುವ ಪ್ರಬಲ ರಾಷ್ಟ್ರದೊಂದಿಗೆ ಇಂತಹ ಒಂದು ರಕ್ಷಣಾ ಒಪ್ಪಂದ ದೇಶದ ಸಾರ್ವಭೌಮತೆಗೆ ಅಪಾಯಕಾರಿಯಾಗಬಲ್ಲದು ಎಂದು ಕೆಲವು ರಕ್ಷಣಾ ತಜ್ಞರು ವಿಶ್ಲೇಷಿಸಿದ್ದಾರೆ. ಈ ಕಾರ್ಯಕ್ರಮದ ಅಡಿಯಲ್ಲಿ 30 ಅತ್ಯಾಧುನಿಕ ಸಶಸ್ತ್ರ ಡ್ರೋನ್ ವಿಮಾನಗಳನ್ನು ಖರೀದಿಸುವ 300 ಕೋಟಿ ಡಾಲರ್(24ಸಾವಿರ ಕೋಟಿ ರೂ.) ವೆಚ್ಚದ ವ್ಯವಹಾರವನ್ನೂ ಕುದುರಿಸಿರುವ ಸುದ್ದಿ ಬಂದಿದೆ.

ಬಹುಶಃ ಇಂತಹ ವ್ಯವಹಾರಗಳಲಿನ ಅಪಾಯಗಳನ್ನು ಮುಚ್ಚಿ ಹಾಕಲೂ ದೇಶಭಕ್ತಿಯ ಈ ಪ್ರವಚನಗಳು ಪ್ರಯೋಜನಕ್ಕೆ ಬರುತ್ತಿವೆ.

ಅತ್ತ ಆಸ್ಟ್ರೇಲಿಯಾದಲ್ಲೂ ಅದಾಣಿ ಸಮೂಹದ ಶೇರುಬೆಲೆಗಳ ಕುಸಿತ ಒಂದು ಕೋಟಿಗಿಂತಲೂ ಹೆಚ್ಚು ಹಿರಿಯ ನಾಗರಿಕರ ನಿವೃತ್ತಿ ಉಳಿತಾಯಗಳನ್ನು ಅಪಾಯಕ್ಕೊಡ್ಡಿದೆ ಎಂಬ ಸುದ್ದಿ ಬಂದಿದೆ(ದಿ ಇಂಡಿಯಾ ಕೇಬಲ್, ಫೆ.22). ಅಲ್ಲಿನ ಕ್ವೀನ್ಸ್‌ಲ್ಯಾಂಡಿನಲ್ಲಿ ಸ್ಥಳೀಯ ಪ್ರತಿಭಟನೆಗಳ ನಡುವೆಯೂ ಆರಂಭವಾದ ಅದಾಣಿ ಸಮೂಹದ ಕಾರ್‌ಮೈಕಲ್ ಗಣಿಗಾಗಿ ಪ್ರಮುಖ ನಿವೃತ್ತಿ ನಿಧಿಗಳು ಅವರ ಶೇರುಗಳಲ್ಲಿ ನಿವೃತ್ತಿ ಉಳಿತಾಯಗಳ ಹಣವನ್ನು ತೊಡಗಿಸಿದವು ಎಂದು ಹೇಳಲಾಗಿದೆ. ಅಲ್ಲಿ ಯಾವ ಬಾವುಟದೊಂದಿಗೆ 'ಸ್ಪಷ್ಟೀಕರಣ' ನೀಡಬೇಕಾದೀತು ಎಂಬುದನ್ನು ಕಲ್ಪಿಸಿಕೊಳ್ಳಬೇಕಷ್ಟೇ.



ವ್ಯಂಗ್ಯಚಿತ್ರ ಕೃಪೆ: ಪಂಜು ಗಂಗೊಳ್ಳಿ, ಕನ್ನಡ ಒನ್ ನ್ಯೂಸ್

ಈಗ ಕಪ್ಪು ಹಣಕ್ಕೆ ಕೂಡ ದೇಶಭಕ್ತಿಯ ರಕ್ಷೆ!–ಜಾನ್ ಬ್ರಿಟ್ಟಾಸ್

"ಒಂದು ಕಂಪನಿಯ ಸಿಎಫ್‌ಒ ರಾಷ್ಟ್ರಧ್ವಜದ ಹಿನ್ನೆಲೆಯಲ್ಲಿ ರಾಷ್ಟ್ರೀಯವಾದದ ಬಗ್ಗೆ ಮಾತಾಡುತ್ತಾರೆ ಮತ್ತು ದೇಶಪ್ರೇಮದ ಹೆಸರಿನಲ್ಲಿ ತನ್ನ ಕಂಪನಿಯನ್ನು ರಕ್ಷಿಸಬೇಕಾಗಿದೆ ಎನ್ನುತ್ತಾರೆ ಎಂಬುದನ್ನು ಊಹಿಸಿಕೊಳ್ಳಬಲ್ಲಿರಾ?"–ಹೀಗೆಂದು ಸಿಪಿಐ(ಎಂ) ಸಂಸತ್ ಸದಸ್ಯ ಜಾನ್ ಬ್ರಿಟ್ಟಾಸ್ ರಾಜ್ಯಸಭೆಯಲ್ಲಿ ರಾಷ್ಟ್ರ ಪತಿಗಳ ಭಾಷಣದ ಮೇಲಿನ ಚರ್ಚೆಯಲ್ಲಿ ಭಾಗವಹಿಸುತ್ತ ಕೇಳಿದರು. ಹಿಂಡನ್ಬರ್ಗ್ ರಿಸರ್ಚ್ ಪ್ರಕಟಣೆ ಬಗ್ಗೆ ಚರ್ಚೆ ನಡೆಸಲು ಸರಕಾರ ನಿರಾಕರಿಸುತ್ತಿರುವ ಬಗ್ಗೆ ಟಿಪ್ಪಣಿ ಮಾಡುತ್ತ ಅವರು. ಭಾರತದ ಚರಿತ್ರೆಯಲ್ಲಿ ಮೊತ್ತ ಮೊದಲ ಬಾರಿಗೆ ಈ ಸರಕಾರ ಕಪ್ಪು ಹಣವನ್ನು ಕಾಪಾಡಲು ರಾಷ್ಟ್ರೀಯವಾದ ಮತ್ತು ದೇಶಪ್ರೇಮವನ್ನು ಬಳಸುತ್ತಿದೆ, ಅದನ್ನು ಗುರಾಣಿಯಾಗಿಸುತ್ತಿದೆ ಎಂದರು.

ಬಿಜೆಪಿ ಎಂಪಿ ಜಾವಡೇಕರ್ ಅದಾಣಿಗೆ ಸಲಹೆ ನೀಡಬಹುದಾಗಿದ್ದರೆ, ಆತ ಖಂಡಿತ ಎನ್‌ಡಿಟಿವಿ ಬದಲು ಹಿಂಡನ್‌ಬರ್ಗನ್ನು ಖರೀದಿಸುತ್ತಿದ್ದರು ಎಂದು ವ್ಯಂಗ್ಯವಾಡುತ್ತ ಬ್ರಿಟ್ಟಾಸ್, ಹಾಗೆ ನೋಡಿದರೆ ಹಿಂಡನ್‌ಬರ್ಗ್ ಹೊಸತೇನೂ ಹೇಳಿಲ್ಲ ಎಂದರು.

2016ರಿಂದೀಚೆಗೆ ಮೂರು ಬಾರಿ ಇದು ಬಯಲಾಗಿದೆ–ಪನಾಮಾ ಪೇಪರ್ಸ್, ಪ್ಯಾರಡೈಸ್ ಪೇಪರ್ಸ್ ಮತ್ತು ಪಂಡೋರಾ ಪೇಪರ್ಸ್. ಇವುಗಳಲ್ಲಿ ಎರಡರಲ್ಲಿ ಕಪ್ಪು ಹಣದಲ್ಲಿ ವ್ಯವಹರಿಸುವ ಎರಡು ಶೆಲ್ ಕಂಪನಿಗಳ ಪ್ರಸ್ತಾಪವಿದ್ದು, ಒಂದರಲ್ಲಿ ಅದಾಣಿಯೊಂದಿಗಿರುವ ಒಬ್ಬ ವ್ಯಕ್ತಿಯ ಬಗ್ಗೆ ಸ್ಪಷ್ಟ ಉಲ್ಲೇಖವಿತ್ತು. ಆದರೆ ಈ ಸರಕಾರ ಆ ಬಗ್ಗೆ ಏನು ಮಾಡಿತು ಎಂದು ಅವರು ಪ್ರಶ್ನಿಸಿದರು.

"ಇವರು ಕಪ್ಪು ಹಣಕ್ಕೆ ಕಡಿವಾಣ ಹಾಕುವ ಹೆಸರಿನಲ್ಲಿ ಅಧಿಕಾರಕ್ಕೆ ಬಂದರು. ಇತ್ತೀಚಿನ ಅಂಕಿಅಂಶಗಳ ಪ್ರಕಾರ, ಸ್ವಿಸ್ ಬ್ಯಾಂಕ್‌ಗಳಲ್ಲಿ ಕಪ್ಪು ಹಣ ಎಂಟು ವರ್ಷಗಳಲ್ಲಿ ದ್ವಿಗುಣಗೊಂಡಿದೆ. ಆದ್ದರಿಂದ, **ಈಗ, ನಿಮ್ಮ ಆಶ್ವಾಸನೆಯನ್ನು ಪೂರೈಸಲು ನೀವು ಬಯಸಿದರೆ, 15 ಲಕ್ಷದ ಬದಲು, 30 ಲಕ್ಷ ರೂ. ಪ್ರತಿಯೊಬ್ಬ ಭಾರತೀಯನ ಖಾತೆಗೆ ಜಮಾ ಮಾಡಬೇಕು** "ಎಂದರು.

"ಕಪ್ಪು ಹಣದ ಮೂಲದ ಬಗ್ಗೆ ಮಾತನಾಡೋಣ. ಇಲ್ಲಿ ಎರಡು ವಿಷಯಗಳಿವೆ. ರೌಂಡ್ ಟ್ರಿಪ್ಪಿಂಗ್ ಎಂದು ಕರೆಯುವಂತದ್ದೊಂದು ಇದೆ. ಇದರಲ್ಲಿ ಅವರು ಸಾರ್ವಜನಿಕ ವಲಯದ ಬ್ಯಾಂಕುಗಳಿಂದ ಹಣವನ್ನು ತೆಗೆದುಕೊಂಡು ತೆರಿಗೆ ಮುಕ್ತ ಧಾಮಗಳಿಗೆ ಕಳಿಸುತ್ತಾರೆ. ನಂತರ ಅದು ಹೂಡಿಕೆಯ ಭಾಗವಾಗಿ ಬರುತ್ತದೆ. ಈ ನಿಟ್ಟಿನಲ್ಲಿ ಒಂದು ತನಿಖೆಯ ಅಗತ್ಯವಿದೆ. ಒಂದು ವೇಳೆ ಶೆಲ್ ಕಂಪನಿಗಳ ಹಿಂದಿರುವ ನಿಧಿಗಳು ಶತ್ರು ದೇಶಗಳು ಒದಗಿಸಿದ ಹಣದ ಮೂಲವಾಗಿದ್ದರೆ? ಆ ಸಾಧ್ಯತೆ ಇದೆ. ನಮ್ಮ ಅರ್ಥವ್ಯವಸ್ಥೆಯ ಸುರಕ್ಷಿತತೆಯನ್ನು ಖಚಿತಪಡಿಸಲು, ಅವು ನಮ್ಮ ಆಯಕಟ್ಟಿನ ಮೂಲಸೌಕರ್ಯಗಳನ್ನು ಶತ್ರುಗಳು ಅಪಹರಿಸದಂತೆ ಖಚಿತಪಡಿಸಲು ಭಾರತಕ್ಕೆ ಸುರಕ್ಷಿತ ಹಣ ಬರುತ್ತಿದೆ ಎಂದು ನೀವು ಖಚಿತಪಡಿಸಬೇಕು" ಎಂದು ಬ್ರಿಟ್ಟಾಸ್ ಮುಂದುವರೆದು ಹೇಳಿದರು.


ಅದಾಣಿಯ ಎಫ್‌ಪಿಒನ ವಿಷಯವನ್ನು ಎತ್ತಿಕೊಳ್ಳುತ್ತ ಜಾನ್ ಬ್ರಿಟ್ಟಾಸ್ "ಈ ಜನ ಉನ್ನತ ಆದಾಯದ ಮಂದಿ ತಮ್ಮ ಹಣವನ್ನು ಅಲ್ಲಿ ಹಾಕುವಂತೆ ಖಚಿತಪಡಿಸಲು ತಮ್ಮ ಪ್ರಭಾವವನ್ನು ಬಳಸುತ್ತಾರೆ. ಅದು ಈ ಸರ್ಕಾರದ ಬಗ್ಗೆ ವಿಶ್ವಾಸದ ಕೊರತೆ. ಚಿಲ್ಲರೆ ಹೂಡಿಕೆದಾರರಲ್ಲಿ 11% ಮಂದಿ ಮಾತ್ರ ತಮ್ಮ ಹಣವನ್ನು ಅಲ್ಲಿ ಹಾಕುತ್ತಾರೆ. ಅದಾಣಿಯ ನೌಕರರೇ ಆತನನ್ನು ನಂಬದಿದ್ದರೆ, ಪ್ರತಿಪಕ್ಷಗಳವರು ಅದಾಣಿಯನ್ನು ನಂಬಬೇಕು ಎಂದು ನಿರೀಕ್ಷಿಸುತ್ತೀರಾ?" ಎಂದು ಪ್ರಶ್ನಿಸುತ್ತ ನಮ್ಮ ಅರ್ಥವ್ಯವಸ್ಥೆಯು ಸುರಕ್ಷಿತವಾಗಿರುವಂತೆ ಖಚಿತ ಪಡಿಸಲು ಒಂದು ತನಿಖೆ ನಡೆಸಲಿಕ್ಕೆ ಈ ಸರಕಾರ ಮುಂದಾಗಬೇಕು ಎಂದು ಆಗ್ರಹಿಸಿದರು.

ಪ್ರಭುತ್ವ ಯಂತ್ರದಲ್ಲಿ ಆದಾಯ ತೆರಿಗೆ ಇಲಾಖೆ ಈಗ ಇನ್ನೊಂದು ರಾಜಕೀಯ ಅಂಗ?

ಬಿಬಿಸಿಯ ದಿಲ್ಲಿ ಮತ್ತು ಮುಂಬೈ ಕಚೇರಿಗಳಲ್ಲಿ ಆದಾಯ ತೆರಿಗೆ ಇಲಾಖೆಯ 'ಸರ್ವೆ' ಮುಗಿದಿದೆ. ಇದರಲ್ಲಿ ತಮಗೆ ಕೆಲವು ಮುಖ್ಯ ಪುರಾವೆಗಳು ಸಿಕ್ಕಿವೆ, ಅವುಗಳ ಮೇಲೆ ತನಿಖೆ ನಡೆಸಲಾಗುವದು ಎಂದು ಅದು ಹೇಳಿದೆ. ಈ ಮೊದಲು ನ್ಯೂಸ್‌ಕ್ಲಿಕ್, ನ್ಯೂಸ್‌ಲಾಂಡ್ರಿಯ ಮುಂತಾದ ಸ್ವತಂತ್ರ ಸುದ್ದಿ ಮಾಧ್ಯಮಗಳ ಮೇಲೆ ನಡೆಸಿದ ಇಂತಹುದೇ ಕಾರ್ಯಾಚರಣೆಗಳಿಂದ ಅದು ಪಡೆದ ಮಾಹಿತಿಗಳೇನು ಎಂದು ಇದುವರೆಗೂ ತಿಳಿದು ಬಂದಿಲ್ಲ.

ಇಂತಹ ಸನ್ನಿವೇಶದಲ್ಲಿ ಲಭ್ಯವಿರುವ ಈ ಕೆಲವು ಅಂಕಿ–ಅಂಶಗಳು ಹಲವು ಸಂಗತಿಗಳನ್ನು ಹೇಳುತ್ತವೆ:

* 2016–17ರ ನಂತರ 'ಸರ್ವೆ'ಗಳ ಸಂಖ್ಯೆ 2013–14ರಲ್ಲಿ ಇದ್ದುದರ ದುಪ್ಪಟ್ಟು
* 2011 ರಿಂದ 2014–15ರ ಹಾಕಿರುವ ಕೇಸುಗಳ ಸಂಖ್ಯೆ 2046 ಶಿಕ್ಷೆಯಾದದ್ದು ಕೇವಲ 150 ಕೇಸುಗಳಲ್ಲಿ, ಅಂದರೆ 7.3%
* 2016–17ರಿಂದ 2019–20ರ ಬಡುವೆ ಕೇಸುಗಳ ಸಂಖ್ಯೆ 11068 ಮತ್ತು ಶಿಕ್ಷೆಯಾದದ್ದು ಕೇವಲ 266 ಪ್ರಕರಣಗಳಲ್ಲಿ–ಅಂದರೆ 2.4%. ಕೇಸುಗಳು ಐದು ಪಟ್ಟಾದವು, ಶಿಕ್ಷೆಯಾದ ಕೇಸುಗಳ ಪ್ರಮಾಣ ಮೂರನೇ ಒಂದರಷ್ಟು ಇಳಿಯಿತು!
* ಇ.ಡಿ. ಪ್ರಕರಣಗಳಲ್ಲಿ 4 ಪಟ್ಟು ಏರಿಕೆ, ಇವುಗಳಲ್ಲಿ 95% ಪ್ರತಿಪಕ್ಷಗಳ ಮುಖಂಡರ ವಿರುದ್ಧ, ಶಿಕ್ಷೆಯಾದದ್ದು ಕೇವಲ 0.5% ಕೇಸುಗಳಲ್ಲಿ ಮಾತ್ರ
* 5422 ಪಿಎಂಎಲ್‌ಎ ಪ್ರಕರಣಗಳಲ್ಲಿ ಶಿಕ್ಷೆ ಕೇವಲ 23 ಕೇಸುಗಳಲ್ಲಿ
* ಪಿಎಂಎಲ್‌ಎ ಪ್ರಕರಣಗಳು 2017–18ರ ನಂತರ ತೀವ್ರ ಏರಿಕೆ ಕಂಡವು.



2021–22ರ ಇಪಿಎಫ್‌ಬಡ್ಡಿ ಇನ್ನೂ ನೌಕರರ ಖಾತೆಗೆ ಬಂದಿಲ್ಲ?

ಕಳೆದ ವರ್ಷದ ಮಾರ್ಚಿನಲ್ಲಿ ಕೇಂದ್ರ ಕಾರ್ಮಿಕ ಮಂತ್ರಿಗಳ ನೇತೃತ್ವದಲ್ಲಿ ನೌಕರರ ಭವಿಷ್ಯ ನಿಧಿ(ಇಪಿಎಫ್)ಯ ಟ್ರಸ್ಟಿಗಳ ಕೇಂದ್ರೀಯ ಮಂಡಳಿ 2021–22ರ ಅವಧಿಗೆ ಪಿಎಫ್ ಮೇಲಿನ ಬಡ್ಡಿದರಗಳನ್ನು 8.1% ಎಂದು ಮಂಜೂರು ಮಾಡಿತು. ಇದು ಕಳೆದ ನಾಲ್ಕು ದಶಕಗಳಲ್ಲೇ ಅತಿ ಕಡಿಮೆ ಮಟ್ಟದ ಬಡ್ಡಿದರ ಎನ್ನಲಾಗಿದೆ.

ಆದರೆ ಈ ಕಡಿಮೆ ಪ್ರಮಾಣದ ಬಡ್ಡಿಯ ಮೊತ್ತಗಳು ಕೂಡ ನೌಕರರ ಪಿಎಫ್‌ಖಾತೆಗಳಿಗೆ ಜಮಾ ಆಗಿಲ್ಲ ಎಂದು ಈಗ ವರದಿಯಾಗಿದೆ(ಪಿಟಿಐ, ಫೆ.20). ಕಳೆದ ಜೂನ್ ತಿಂಗಳಲ್ಲೇ ಇದನ್ನು ದೃಢಪಡಿಸಲಾಗಿತ್ತು. ಆದರೂ ಇದು ಇನ್ನೂ ನೌಕರರ ಪಿಎಫ್ ಖಾತೆಗಳಿಗೆ ಜಮಾ ಆಗಿಲ್ಲ ಎಂದು ನೌಕರರು/ಕಾರ್ಮಿಕರು ಮತ್ತು ಪಿಎಫ್ ಟ್ರಸ್ಟ್‌ನಲ್ಲಿರುವ ಕಾರ್ಮಿಕ ಪ್ರತಿನಿಧಿಗಳು ಕೇಳುತ್ತಿದ್ದಾರೆ ಎಂದು ಈ ಸುದ್ದಿ ತಿಳಿಸುತ್ತದೆ.

ಮಾಲಕರ ಪ್ರತಿನಿಧಿಗಳು ಕೂಡ ಇಪಿಎಫ್‌ಒ ದೊಂದಿಗೆ ಇದನ್ನು ಪ್ರಸ್ತಾಪಿಸಿದ್ದಾರೆ ಎನ್ನಲಾಗಿದೆ. ಇದಕ್ಕೆ ಸಂಬಂಧಪಟ್ಟ ತಂತ್ರಾಂಶದ ಸಮಸ್ಯೆಗಳಿಂದಾಗಿ ಈ ವಿಳಂಬವಾಯಿತು, ಕಳೆದ ವಾರದಿಂದ ಜಮಾ ಮಾಡುವ ಕೆಲಸ ಆರಂಭವಾಗಿದೆ ಎಂದು ಇಪಿಎಫ್‌ಒ ನ ಅಧಿಕಾರಿಯೊಬ್ಬರು ಹೇಳಿದರೂ ಇಪಿಎಫ್‌ಒ ಗೆ ಈ ಕುರಿತು ಕೇಳಿದ್ದಕ್ಕೆ ಇದು ವರೆಗೆ ಸ್ಪಂದನೆ ದೊರೆತಿಲ್ಲ ಎಂದೂ ಹೇಳಲಾಗಿದೆ.

ಸರಕಾರದ ಬಂಟರು ಲಾಭಗಳು–ರಿಯಾಯ್ತಿಗಳ ಬಕ್ಷೀಸುಗಳನ್ನು ಬಾಚಿಕೊಳ್ಳುತ್ತಿರುವಾಗ ದುಡಿಯುವ ಜನರಿಗೆ ವರ್ಷವಾಗುತ್ತಿದ್ದರೂ 8.1%ದ ಅಲ್ಪ ಮೊತ್ತವನ್ನೂ ನಿರಾಕರಿಸಲಾಗುತ್ತಿದೆ. ಒಂದೆಡೆ ಈ ಸರಕಾರ ತನ್ನ ಬಂಟರ 11ಲಕ್ಷ ಕೋಟಿ ರೂ.ಗಳ ಸುಸ್ತಿ ಸಾಲಗಳನ್ನು ಲೆಕ್ಕದಿಮದ ತೆಗೆದು ಹಾಕುತ್ತಿದ್ದರೆ, ಇನ್ನೊಂದೆಡೆ ದುಡಿಯುವ ಜನಗಳನ್ನು ಹಿಂಡುತ್ತಿದೆ ಎಂದು ಈಬಗ್ಗೆ ಟಿಪ್ಪಣಿ ಮಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಹೇಳಿದ್ದಾರೆ.

ರಾಜ್ಯಗಳಿಗೆ ಸಂಪನ್ಮೂಲ ವರ್ಗಾವಣೆ ಏರಿಲ್ಲ, ಇಳಿದಿದೆ ಏಕಸ್ವಾಮ್ಯ ಬಂಡವಾಳಿಗರ ಪ್ರಯೋಜನದತ್ತ ತಿರುಗಿದೆ



ರಾಜ್ಯಗಳಿಗೆ ಸಂಪನ್ಮೂಲಗಳ ವರ್ಗಾವಣೆಯ ಪ್ರಮಾಣವನ್ನು ತೀವ್ರವಾಗಿ ಹೆಚ್ಚಿಸಲಾಗಿದೆ ಎಂದು ಹಣಕಾಸು ಮಂತ್ರಿಗಳು ಹೇಳಿದ್ದಾರೆ. ಇದು ದಾರಿತಪ್ಪಿಸುವ ಹೇಳಿಕೆ. ಏಕೆಂದರೆ ತೆರಿಗೆ ಆದಾಯಗಳ ಅನುಪಾತವಾಗಿ ಮಾತ್ರವಲ್ಲ, ನಿಜ ಜಿಡಿಪಿಯ ಅನುಪಾತದಲ್ಲೂ ವರ್ಗಾವಣೆ ಹೆಚ್ಚಿಲ್ಲ, ಬದಲಿಗೆ ಇಳಿದಿದೆ, ಸಂಪನ್ಮೂಲಗಳ ಕೇಂದ್ರೀಕರಣ ಮತ್ತಷ್ಟು ಮುಂದಕ್ಕೆ ಹೋಗಿದೆ. ಮೋದಿ ಸರ್ಕಾರದ ಅಡಿಯಲ್ಲಿ ಇದು ಕೇವಲ ಒಂದು ಆಕಸ್ಮಿಕ ವಿದ್ಯಮಾನವೇನಲ್ಲ. ಏಕಸ್ವಾಮ್ಯ ಬಂಡವಾಳಶಾಹಿ ಸಾರ್ವಜನಿಕ ಸಂಪನ್ಮೂಲಗಳನ್ನು ದುಡಿಯುವ ಜನರಿಗೆ ಪರಿಹಾರ ನೀಡಲು "ವ್ಯರ್ಥ" ಮಾಡುವ ಬದಲು ಏಕಸ್ವಾಮ್ಯ ಉದ್ದಿಮೆಗಳಿಗೆ ಮಾರುಕಟ್ಟೆಯನ್ನು ಒದಗಿಸಲು ಬಳಸಬೇಕೆನ್ನುತ್ತದೆ. ಫ್ಯಾಸಿಸ್ಟ್ ಆಳ್ವಿಕೆಯಲ್ಲಿ ಈ ಪ್ರವೃತ್ತಿಯು ಹೆಚ್ಚು ಬಲಗೊಳ್ಳುತ್ತದೆ. ಸಂಪನ್ಮೂಲಗಳನ್ನು ಏಕಸ್ವಾಮ್ಯ ಗುಂಪಿಗೆ ಪ್ರಯೋಜನವಾಗುವ ರೀತಿಯಲ್ಲಿ ತಿರುಗಿಸುವುದಕ್ಕೆ ಈ ವರ್ಷದ ಬಜೆಟ್ ಒಂದು ಒಳ್ಳೇ ಉದಾಹರಣೆ ಮೋದಿ ಆಡಳಿತವು ಈ ರೀತಿಯಲ್ಲಿ ಅಧಿಕಾರಗಳ ಮತ್ತು ಸಂಪನ್ಮೂಲಗಳ ಕೇಂದ್ರೀಕರಣವನ್ನು ಅದರ ತುತ್ತತುದಿಗೆ ಕೊಂಡೊಯ್ದಿರುವುದು ಆಶ್ಚರ್ಯವೇನಲ್ಲ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಜವಾಬ್ದಾರಿಯುತ ಕೇಂದ್ರ ಸಚಿವ ಸಂಪುಟದ ಒಬ್ಬ ಸದಸ್ಯರು ತಪ್ಪುದಾರಿಗೆಳೆಯುವ ಉದ್ದೇಶದಿಂದ ಕೂಡಿದ ಒಂದು ಹೇಳಿಕೆಯನ್ನು ಮಾಡುತ್ತಾರೆ ಎಂಬುದನ್ನು ನಿರೀಕ್ಷಿಸಲಾಗದು. ಆದರೆ, ಕೆಲವು ದಿನಗಳ ಹಿಂದೆ ಅಂತಹ ಒಂದು ಹೇಳಿಕೆಯನ್ನು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ನೀಡಿದ್ದಾರೆ. ಇತ್ತೀಚಿನ ಬಜೆಟ್‌ನಲ್ಲಿ ರಾಜ್ಯಗಳಿಗೆ ವರ್ಗಾವಣೆ ಮಾಡುವ ಸಂಪನ್ಮೂಲಗಳ ಬಗ್ಗೆ ಮಾತನಾಡಿದ ಅವರು, ವರ್ಗಾವಣೆಯ ಪ್ರಮಾಣವನ್ನು "ತೀವ್ರವಾಗಿ" ಹೆಚ್ಚಿಸಲಾಗಿದೆ (ದಿ ಹಿಂದೂ ಫೆಬ್ರವರಿ 11) ಎಂದು ಹೇಳಿದ್ದಾರೆ. ಈ ಹೇಳಿಕೆಯು, ಕೇಂದ್ರವು "ದೊಡ್ಡ ಮನಸ್ಸು" ಹೊಂದಿದೆ ಎಂಬ ಭಾವನೆಯನ್ನು ಸೃಷ್ಟಿಸುತ್ತದೆಯಾದರೂ, ಕೇಂದ್ರದಿಂದ ರಾಜ್ಯಗಳಿಗೆ ವರ್ಗಾವಣೆಯಾದ ಮೊತ್ತದಲ್ಲಿ ನಿಜಕ್ಕೂ ಹೆಚ್ಚಳವಾಗಿದೆ ಎಂಬುದನ್ನು ಸಮರ್ಥಿಸುವ ಯಾವುದೇ ಅಂಕಿಅಂಶಗಳನ್ನೂ ಅವರು ನೀಡಿಲ್ಲ. ಬಜೆಟ್‌ನಲ್ಲಿ ರಾಜ್ಯಗಳಿಗೆಂದು ನಿಗದಿಪಡಿಸಿದ ವರ್ಗಾವಣೆಗಳ ಪೈಕಿ ಯಾವ ವರ್ಗದ ವರ್ಗಾವಣೆಯನ್ನು ಪರಿಗಣಿಸಿದರೂ, ಜಿಡಿಪಿಯ ಅನುಪಾತದಲ್ಲಿ, ವರ್ಗಾವಣೆಯ ಪ್ರಮಾಣದಲ್ಲಿ ಕುಸಿತ ಕಂಡುಬರುತ್ತದೆ. ವಿಷಯವನ್ನು ಸಂಕ್ಷಿಪ್ತವಾಗಿ ಹೇಳುವುದಾದರೆ, ಮೋದಿ ಸರ್ಕಾರವು ತತ್ಪರತೆಯಿಂದ ಪ್ರೋತ್ಸಾಹಿಸಿದ ಸಂಪನ್ಮೂಲಗಳ ಕೇಂದ್ರೀಕರಣದ ಪ್ರಕ್ರಿಯೆಯನ್ನು ಬಜೆಟ್ ಮತ್ತಷ್ಟು ಮುಂದಕ್ಕೆ ಕೊಂಡೊಯ್ಯುತ್ತದೆ.

ಕೇಂದ್ರಕ್ಕೆ ಬರುವ ಒಟ್ಟು ತೆರಿಗೆ ಆದಾಯದಲ್ಲಿ ರಾಜ್ಯ ಸರ್ಕಾರಗಳಿಗೆ ಪ್ರಾಪ್ತವಾಗುವ ತೆರಿಗೆ ಆದಾಯದ ಪಾಲಿನ ಹಂಚಿಕೆಯನ್ನೇ ತೆಗೆದುಕೊಳ್ಳೋಣ. ಹದಿನಾಲ್ಕನೇ ಹಣಕಾಸು ಆಯೋಗವು ಕೇಂದ್ರದ ಒಟ್ಟು ತೆರಿಗೆ ಆದಾಯದಲ್ಲಿ ರಾಜ್ಯಗಳ ಪಾಲನ್ನು ಶೇ.42ಕ್ಕೆ ಏರಿಸಿತು. ಆಯೋಗದ ಶಿಫಾರಸನ್ನು ಕೇಂದ್ರವು ಯಾವುದೇ ಆಕ್ಷೇಪಣೆಯಿಲ್ಲದೆ ಸ್ವೀಕರಿಸುತ್ತಿದೆ ಎಂಬ ಅಂಶವನ್ನು ಒತ್ತಿಹೇಳಿದ ಸಮಯದಲ್ಲೇ, ಕೇಂದ್ರದಿಂದ ರಾಜ್ಯಗಳಿಗೆ ಮಾಡುವ ಒಟ್ಟು ವರ್ಗಾವಣೆಗಳು ಜಿಡಿಪಿಯ ಅನುಪಾತದಲ್ಲಿ ಹೆಚ್ಚುವ ಬದಲು ಕಡಿಮೆಯಾಗುವುದನ್ನು ಖಚಿತಪಡಿಸಿಕೊಳ್ಳಲು, ಹಣಕಾಸು ಆಯೋಗದ ವ್ಯಾಪ್ತಿಯಿಂದ ಹೊರಗುಳಿದ ಬೇರೆ ಕೆಲವು ಆದಾಯಗಳ ವರ್ಗಾವಣೆಗಳನ್ನು ಕಡಿತಗೊಳಿಸಲಾಗಿತ್ತು. ಅಂದಿನಿಂದಲೂ ರಾಜ್ಯಗಳಿಗೆ ಹಂಚಿಕೆಯಾಗುವ ಒಟ್ಟು ತೆರಿಗೆ ಆದಾಯದ ಪಾಲು ಕುಸಿಯುತ್ತಲೇ ಇದೆ. 2018–19ರಲ್ಲಿ ಶೇ. 36.6ರಷ್ಟಿದ್ದ ರಾಜ್ಯಗಳ ಪಾಲನ್ನು 2021–22ರಲ್ಲಿ ಶೇ. 33.2ಕ್ಕೆ ಮತ್ತು 2022–23ರ ಪರಿಷ್ಕೃತ ಅಂದಾಜಿನ ಶೇ.31.2ರಿಂದ 2023–24ರ ಬಜೆಟ್ ಅಂದಾಜಿನಲ್ಲಿ ಕೇವಲ ಶೇ. 30.4ಕ್ಕೆ ಇಳಿಸಲಾಗಿದೆ. ಈ ಮೋಸವನ್ನು ಎಸಗಿದ ವಿಧಾನವೆಂದರೆ, ರಾಜ್ಯಗಳೊಂದಿಗೆ ಹಂಚಿಕೆಯಾಗದ ಸೆಸ್ ಮತ್ತು ಸರ್ಚಾರ್ಜ್ ರೂಪದ ವಿಶೇಷ ತೆರಿಗೆಗಳೇ. ತನಗೆ ಮಾತ್ರ ದೊರಕುವ ಅಧಿಕ ಸಂಪನ್ಮೂಲಗಳನ್ನು ಸಂಗ್ರಹಿಸಿಕೊಳ್ಳಲು ಕೇಂದ್ರವು ಈ ವಿಧಾನವನ್ನು ಹೆಚ್ಚು ಹೆಚ್ಚಾಗಿ ಬಳಸಿಕೊಳ್ಳುತ್ತಿದೆ. ಒಟ್ಟು ತೆರಿಗೆ ಆದಾಯದಲ್ಲಿ ಇಂತಹ ತೆರಿಗೆಗಳ (ಸೆಸ್ ಮತ್ತು ಸರ್ಚಾರ್ಜ್) ಪಾಲು 2011–12ರಲ್ಲಿದ್ದ ಹತ್ತನೇ ಒಂದು ಭಾಗದಿಂದ 2021–22ರ ವೇಳೆಗೆ ಐದನೇ ಒಂದು ಭಾಗಕ್ಕೆ ದ್ವಿಗುಣಗೊಂಡಿದೆ (ಜಯತಿ ಘೋಷ್ ಅವರ ಲೇಖನ–ದಿ ಟೆಲಿಗ್ರಾಫ್, ಫೆಬ್ರವರಿ 2).



ಜಿಡಿಪಿ ಅನುಪಾತದಲ್ಲೂ ಇಳಿಕೆ

ರಾಜ್ಯಗಳಿಗೆ ಹಂಚಿಕೆಯಾಗುತ್ತಿರುವ ತೆರಿಗೆಗಳ ಅನುಪಾತದ ಕುಸಿತವು ಕೇಂದ್ರದ ಒಟ್ಟು ತೆರಿಗೆ ಆದಾಯಕ್ಕೆ ಹೋಲಿಸಿದಾಗ ಮಾತ್ರವಲ್ಲ; ಜಿಡಿಪಿಯೊಂದಿಗೆ ಹೋಲಿಸಿದಾಗಲೂ ಕುಸಿದಿರುವುದನ್ನು ಕಾಣಬಹುದು. ಇದೇ ಪ್ರವೃತ್ತಿಯು ಇತ್ತೀಚಿನ ಬಜೆಟ್‌ನಲ್ಲೂ ಮುಂದುವರಿದಿದೆ. ಈ ಬಜೆಟ್, 2022–23ಕ್ಕೆ ಹೋಲಿಸಿದರೆ 2023–24ರಲ್ಲಿ ಜಿಡಿಪಿಯು ನಾಮಮಾತ್ರದ ಪರಿಭಾಷೆಯಲ್ಲಿ ಶೇ. 10.5ರಷ್ಟು ವೃದ್ಧಿಸುತ್ತದೆ ಎಂಬ ಊಹೆಯನ್ನು ಆಧರಿಸಿದೆ. ಕೇಂದ್ರದಿಂದ ರಾಜ್ಯಗಳಿಗೆ ಆಗುವ ತೆರಿಗೆ ಹಂಚಿಕೆಯು 948,406 ಕೋಟಿ ರೂ.ಗಳಿಂದ 1021,448 ಕೋಟಿ ರೂ.ಗೆ ಏರಿಕೆಯಾಗಿದೆ ಎಂದು ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ. ಅಂದರೆ, ಏರಿಕೆಯು ಕೇವಲ ಶೇ. 7.7ರಷ್ಟಾಗುತ್ತದೆ. ಇದು ಜಿಡಿಪಿಯ ಬೆಳವಣಿಗೆಯ ದರಕ್ಕಿಂತ ಕಡಿಮೆ ಇದೆ. ಜಿಡಿಪಿಯೊಂದಿಗೆ ಹೋಲಿಸಿದಾಗ ರಾಜ್ಯಗಳಿಗೆ ಮಾಡಿದ ಹಂಚಿಕೆಯ ಪ್ರಮಾಣವು ಶೇ. 3.47ರಿಂದ ಶೇ. 3.38ಕ್ಕೆ ಇಳಿಯುತ್ತದೆ. ಆದ್ದರಿಂದ, ತೆರಿಗೆ–ಹಂಚಿಕೆಯ ಭಾಗವನ್ನು ಪರಿಶೀಲಿಸಿದಾಗ ವರ್ಗಾವಣೆಯು "ತೀವ್ರವಾಗಿ" ಏರಿದೆ ಎಂಬ ಹಣಕಾಸು ಸಚಿವರ ಹೇಳಿಕೆಯು ನಿಜವಲ್ಲ. ವಾಸ್ತವವಾಗಿ, ಕೇಂದ್ರಕ್ಕೆ ದೊರಕುವ ಒಟ್ಟು ತೆರಿಗೆಗಳ ಅನುಪಾತದಲ್ಲಿ ಮತ್ತು ಜಿಡಿಪಿಯ ಅನುಪಾತದಲ್ಲಿ ರಾಜ್ಯಗಳ ಪಾಲು ಕುಸಿದಿದೆ.

ಈಗ ಒಟ್ಟು ವರ್ಗಾವಣೆಯನ್ನು ನೋಡೋಣ. ಇದು ನಾಲ್ಕು ರೀತಿಯ ವರ್ಗಾವಣೆಯನ್ನು ಒಳಗೊಂಡಿದೆ: ಕೇಂದ್ರವು ಸಂಗ್ರಹಿಸಿದ ಒಟ್ಟು ತೆರಿಗೆಗಳಲ್ಲಿ ರಾಜ್ಯಗಳ ಪಾಲು (ಇದನ್ನು ನಾವು "ಹಂಚಿಕೆ" ಎಂದು ಈ ಮೊದಲು ಕರೆದಿದ್ದೇವೆ); ಬಂಡವಾಳ ವೆಚ್ಚಗಳಿಗಾಗಿ ರಾಜ್ಯಗಳಿಗೆ ಒದಗಿಸುವ ವಿಶೇಷ ನೆರವು, ಈಶಾನ್ಯ ರಾಜ್ಯಗಳಿಗೆ ಒದಗಿಸುವ ವಿಶೇಷ ನೆರವು ಮುಂತಾದ ನಿರ್ದಿಷ್ಟ ಶೀರ್ಷಿಕೆಗಳ ಅಡಿಯಲ್ಲಿ ವರ್ಗಾವಣೆ; ಕೇಂದ್ರ ಪ್ರಾಯೋಜಿತ ಯೋಜನೆಗಳು ಮತ್ತು ಕೇಂದ್ರದ ಇತರ ಯೋಜನೆಗಳ ಕಾರಣದಿಂದಾಗಿ ವರ್ಗಾವಣೆ; ಮತ್ತು ಆರೋಗ್ಯ ಮುಂತಾದ ವಲಯಗಳ ನಿರ್ದಿಷ್ಟ ಉದ್ದೇಶಗಳಿಗಾಗಿ ಅಥವಾ ಸ್ಥಳೀಯ ಸಂಸ್ಥೆಗಳಿಗೆ ಹಣಕಾಸು ಆಯೋಗವು ಶಿಫಾರಸು ಮಾಡಿದ ಅನುದಾನಗಳು. ಇವೆಲ್ಲವನ್ನೂ ಗಣನೆಗೆ ತೆಗೆದುಕೊಂಡಾಗ ಒಟ್ಟು ವರ್ಗಾವಣೆಗಳು 2022–23ರ ಪರಿಷ್ಕೃತ ಅಂದಾಜುಗಳ ಪ್ರಕಾರ 17.11 ಲಕ್ಷ ಕೋಟಿ ರೂ.ಗೆ ಬರುತ್ತವೆ ಮತ್ತು 2023–24ರ ಬಜೆಟ್ ಅಂದಾಜಿನ ಪ್ರಕಾರ 18.63 ಲಕ್ಷ ಕೋಟಿ ರೂ.ಗೆ ಏರಲಿವೆ. ಅಂದರೆ, ಶೇ. 8.8ರಷ್ಟು ಏರಿಕೆಯಾಗಲಿವೆ. ಆದರೆ, ಈ ಹೆಚ್ಚಳವೂ ಸಹ, ನಾಮಮಾತ್ರವಾಗಿ ಹೆಚ್ಚುತ್ತದೆ ಎಂದು ಭಾವಿಸಲಾದ ಜಿಡಿಪಿಯ ಶೇ. 10.5ಕ್ಕಿಂತಲೂ ಕಡಿಮೆ ಇದೆ. ಆದ್ದರಿಂದ, ಜಿಡಿಪಿಯ ಅನುಪಾತವಾಗಿ ಕೇಂದ್ರದಿಂದ ರಾಜ್ಯಗಳಿಗೆ ವರ್ಗಾವಣೆಯಾಗುವ ಒಟ್ಟು ಪಾಲು 2022–23ರ ಶೇ. 6.267ರಿಂದ 2023–24ರಲ್ಲಿ ಶೇ. 6.174ಕ್ಕೆ ಇಳಿಯುತ್ತದೆ.

ಫ್ಯಾಸಿಸ್ಟ್ ಕೇಂದ್ರೀಕರಣದ ಭಾಗ

ಮೋದಿ ಸರ್ಕಾರದ ಅಡಿಯಲ್ಲಿ ನಡೆಯುತ್ತಿರುವ ಸಂಪನ್ಮೂಲಗಳ ಕೇಂದ್ರೀಕರಣವು ಕೇವಲ ಒಂದು ಆಕಸ್ಮಿಕ ವಿದ್ಯಮಾನವೇನಲ್ಲ. ಅಥವಾ, ಲಭ್ಯವಿರುವ ಅತ್ಯಲ್ಪ (ಶ್ರೀಮಂತರ ಮೇಲೆ ಸಾಕಷ್ಟು ತೆರಿಗೆ ವಿಧಿಸದ ಕಾರಣದಿಂದಾಗಿ ಅತ್ಯಲ್ಪ) ಸಂಪನ್ಮೂಲಗಳ ಹೆಚ್ಚಿನ ಪಾಲನ್ನು ತನಗಾಗಿ ಇಟ್ಟುಕೊಳ್ಳಲು ಕೇಂದ್ರವು ಮೋಸದ ವಿಧಾನಗಳ ಮೂಲಕ ಪ್ರಯತ್ನಿಸುವ ಕೇವಲ ಹತೋಟಿಗಾಗಿ ನಡೆಯುವ ಒಂದು ಕಿತ್ತಾಟದ ಫಲಿತಾಂಶವೂ ಅಲ್ಲ. ಈ ಕ್ರಮವು ವಿಶ್ವದ ಇತಿಹಾಸದಲ್ಲಿ ಕಂಡುಬಂದ ಪ್ರತಿಯೊಂದೂ ಫ್ಯಾಸಿಸ್ಟ್ ಆಳ್ವಿಕೆಯ ಮೂಲ ಸಿದ್ಧಾಂತಕ್ಕೇ ಅನುಗುಣವಾಗಿದೆ. ಆದರೆ, ಭಾರತದ ನಿರ್ದಿಷ್ಟ ಪ್ರಕರಣದಲ್ಲಿ, ಸಂಪನ್ಮೂಲಗಳ ಕೇಂದ್ರೀಕರಣದ ಈ ಸಂಗತಿಯನ್ನು "ಸಹಕಾರಿ ಒಕ್ಕೂಟ ತತ್ವ" ಎಂಬ ಒಂದು ಆಕರ್ಷಕ ಪದಪುಂಜದ ಅಡಿಯಲ್ಲಿ ಮರೆಮಾಚುವ ಪ್ರಯತ್ನವನ್ನು ಮಾಡಲಾಗಿದೆ. ಕೇಂದ್ರೀಕರಣವು ಸಾಂಸ್ಥಿಕ ಏರ್ಪಾಟಾಗಿ ಒಂದು ಫ್ಯಾಸಿಸ್ಟ್ ಸಂಘಟನೆಯ ಸಾಮಾನ್ಯ ಲಕ್ಷಣವಾಗಿರುತ್ತದೆ ಮಾತ್ರವಲ್ಲ, ಅದರ ಅಡಿಯಲ್ಲಿ ನಡೆಯುವ ಸರ್ಕಾರಿ ವ್ಯವಸ್ಥೆಯ ಲಕ್ಷಣವೂ ಆಗಿರುತ್ತದೆ. ಏಕೆಂದರೆ, ಇಂತಹ ಆಳ್ವಿಕೆಯು ತನಗೆ ಅಧಿಕಾರ ಚಲಾಯಿಸುವ ಜವಾಬ್ದಾರಿಯನ್ನು ನೀಡಿದ ಜನರ ಚಿಂತನಶೀಲ ಬೇಡಿಕೆಗಳಿಗೆ ಸ್ಪಂದಿಸಬೇಕು ಎಂದು ನಂಬಿರುವಂತದ್ದು ಅಲ್ಲ. ಬದಲಿಗೆ, ಅಧಿಕಾರ ಪಡೆದ ನಂತರ, ಅದು ಜನರ ಭಾವನೆಗಳನ್ನು ಕೆರಳಿಸಿ ಅವರನ್ನು ಪದೇ ಪದೇ ಧಾರ್ಮಿಕ–ಕೋಮು ಉನ್ಮಾದದತ್ತ ತಿರುಗಿಸಿ ಲಾಭ ಪಡೆಯುವ ವಿಧಾನದಲ್ಲಿ ನಂಬಿಕೆ ಇಟ್ಟಿದೆ ಮತ್ತು ಅದಕ್ಕಾಗಿಯೇ ಕೆಲವು ಅಲ್ಪಸಂಖ್ಯಾತ ಗುಂಪುಗಳ ಬಗ್ಗೆ ದ್ವೇಷವನ್ನು ಹುಟ್ಟಿಹಾಕುತ್ತದೆ. ಹಾಗಾಗಿ, ಒಂದು ಫ್ಯಾಸಿಸ್ಟ್ ಆಳ್ವಿಕೆಯು ಯಾವಾಗಲೂ ಅಧಿಕಾರ–ಸಂಬಂಧಗಳನ್ನು ತಲೆಕೆಳಗಾಗಿಸುತ್ತದೆ. ಜನಸಾಮಾನ್ಯರಿಗೆ ಉತ್ತರಿಸಬೇಕಾದ ತನ್ನ ಕರ್ತವ್ಯವನ್ನು ನಿರ್ಲಕ್ಷಿಸುತ್ತದೆ ಮತ್ತು "ನಾಯಕ"ನನ್ನು ದೇವತ್ವಕ್ಕೇರಿಸುತ್ತದೆ. ಇದುವೇ ಕಾರಣ, ಫ್ಯಾಸಿಸ್ಟ್ ಆಳ್ವಿಕೆಯಲ್ಲಿ ಸಾಮೂಹಿಕ ನಾಯಕತ್ವವೇ ಇಲ್ಲದಿರಲು. ದೇವತ್ವಕ್ಕೇರಿದ "ನಾಯಕ"ನ ಸಾರ್ವಜನಿಕ ಭಾಷಣಗಳಲ್ಲಿ ಜನರ ಬುದ್ಧಿಮತ್ತೆಯನ್ನು ಗೌರವಿಸುವ ತರ್ಕವಿರುವುದಿಲ್ಲ. ಬದಲಿಗೆ, ಜನರ ಭಾವನೆಗಳನ್ನು ಬಡಿದೆಬ್ಬಿಸುವ ತಂತ್ರಗಾರಿಕೆ ಮತ್ತು ಅದಕ್ಕೆ ತಕ್ಕ ಹಾವ–ಭಾವಗಳಿರುತ್ತವೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಸಂಪನ್ಮೂಲಗಳ ಮೇಲೆ ಕೇಂದ್ರ ಮತ್ತು ರಾಜ್ಯಗಳು ಹೊಂದಿರುವ ಹಕ್ಕುಗಳ ಸಂಘರ್ಷವನ್ನು ತರ್ಕಬದ್ಧವಾಗಿ ಇತ್ಯರ್ಥಪಡಿಸುವುದು ಸಾಮಾನ್ಯವಾಗಿ ಫ್ಯಾಸಿಸ್ಟ್ ಆಡಳಿತದ ರೀತಿ–ನೀತಿಯಲ್ಲ. ಬದಲಿಗೆ, ಅದು ಒಂದಲ್ಲಾ ಒಂದು ನೆಪದ ಮೇಲೆ ಸಂಪನ್ಮೂಲಗಳನ್ನು ಕೇಂದ್ರೀಕರಿಸುತ್ತದೆ. ಮತ್ತು, ಕೇಂದ್ರ ಸರ್ಕಾರವನ್ನು ಒಂದು ಫ್ಯಾಸಿಸ್ಟ್ ಸಂಘಟನೆಯು ನಡೆಸುತ್ತಿರುವಾಗ, ಅದರ ಸಿದ್ಧಾಂತವನ್ನು ಒಪ್ಪದ ವಿರೋಧ ಪಕ್ಷಗಳು ರಾಜ್ಯಗಳಲ್ಲಿ ಸರ್ಕಾರಗಳನ್ನು ನಡೆಸುತ್ತಿರುವಾಗ, ಸಂಪನ್ಮೂಲಗಳ (ಮತ್ತು ಅಧಿಕಾರದ) ಕೇಂದ್ರೀಕರಣದ ಈ ಸ್ವಾಭಾವಿಕ ಪ್ರವೃತ್ತಿಯು ಪ್ರತಿಪಕ್ಷಗಳ ಆಡಳಿತದ ರಾಜ್ಯಗಳನ್ನು ಹಿಂಡುವ ಕೇಂದ್ರದ ಬಯಕೆಗೆ ಮತ್ತಷ್ಟು ಪೂರಕವಾಗಿದೆ.

ಏಕಸ್ವಾಮ್ಯಗಳತ್ತ ತಿರುಗಿಸಲಿಕ್ಕಾಗಿ

ಸಂಪನ್ಮೂಲಗಳ ಮತ್ತು ಅಧಿಕಾರದ ಈ ರೀತಿಯ ಕೇಂದ್ರೀಕರಣಕ್ಕೆ ಮತ್ತೊಂದು ಪ್ರಬಲ ಕಾರಣವೂ ಇದೆ. ಫ್ಯಾಸಿಸ್ಟ್ ಆಳ್ವಿಕೆಯು, ಆಡಳಿತ ಮತ್ತು ಆಡಳಿತದ ಅನುಗ್ರಹಕ್ಕೆ ಪಾತ್ರವಾದ ಕೆಲವು ಏಕಸ್ವಾಮ್ಯ ಗುಂಪುಗಳ ನಡುವೆ ನಿಕಟ ಸಂಬಂಧವನ್ನು ಒಳಗೊಂಡಿರುತ್ತದೆ. ಭಾರತದ ಮಟ್ಟಿಗೆ ಇದು ನಿಜ ಎಂಬುದನ್ನು ಇತ್ತೀಚೆಗೆ ಬಯಲಾದ ಸರ್ಕಾರದ ನೆಚ್ಚಿನ ಏಕಸ್ವಾಮ್ಯ ಸಮೂಹವಾದ ಅದಾನಿ ಕಂಪೆನಿಗಳ ಆರ್ಥಿಕ–ದುಷ್ಕೃತ್ಯಗಳ ಬಗ್ಗೆ ಸರ್ಕಾರದ ಸಂಪೂರ್ಣ ಮೌನ ಮತ್ತು ಯಾವುದೇ ಕ್ರಮ ಕೈಗೊಳ್ಳಲು ಅದರ ನಿರಾಕರಣೆ ಇವು ಸಾಬೀತುಪಡಿಸುತ್ತವೆ. ಸಂಪನ್ಮೂಲಗಳ ಕೇಂದ್ರೀಕರಣವು ಸಂಪನ್ಮೂಲಗಳನ್ನು ಜನರ ಅಗತ್ಯಗಳಿಗಾಗಿ ಬಳಸುವುದರ ಬದಲು ನೇರವಾಗಿ ಅಥವಾ ಪರೋಕ್ಷವಾಗಿ ಏಕಸ್ವಾಮ್ಯ ಗುಂಪಿಗೆ/ಗುಂಪುಗಳಿಗೆ

ಪುಟ 15 ಕ್ಕೆ



ಫೆಬ್ರುವರಿ 24ಕ್ಕೆ ಉಕ್ರೇನ್ ಯುದ್ಧ ಆರಂಭವಾಗಿ ಒಂದು ವರ್ಷ ಕಳೆದಿದೆ. ಈ ಯುದ್ಧ ಇಷ್ಟು ದೀರ್ಘವಾಗಿ ನಡೆಯಬಹುದೆಂದು ಯಾರೂ ನಿರೀಕ್ಷಿಸಿರಲಿಲ್ಲ. ಸಮಬಲ ಇರುವುದರಿಂದ ಮತ್ತು ಅಂತರಾಷ್ಟ್ರೀಯ ಒತ್ತಡದಿಂದ ಬೇಗನೇ ಚೌಕಾಶಿ ನಡೆದು ಒಂದು ಒಪ್ಪಂದಕ್ಕೆ ಬರಬಹುದೆಂದು ನಿರೀಕ್ಷಿಸಲಾಗಿತ್ತು. ಒಂದು ವರ್ಷದ ನಂತರವೂ ಸಂಘರ್ಷ ನಿಲುಗಡೆ ಹೋಗಲಿ, ಆ ಕುರಿತು ಮಾತುಕತೆಗೆ ಪ್ರಯತ್ನಗಳ ಕುರುಹೂ ಇಲ್ಲದ ಪರಿಸ್ಥಿತಿಯಿದೆ. ವಿಶ್ವಸಂಸ್ಥೆಯ ಮಹಾಸಭೆ ಒಂದು ನಿರ್ಣಯ ತೆಗೆದುಕೊಂಡಿದೆ ಎಂಬುದನ್ನು ಬಿಟ್ಟರೆ ಸಂಘರ್ಷ ನಿಲುಗಡೆಯ ಯಾವುದೇ ಗಂಭೀರ ಪ್ರಯತ್ನವಿಲ್ಲ. ಬದಲಾಗಿ, ಕಳೆದ ವಾರದ ಅನಿರೀಕ್ಷಿತ ಘಟನೆಗಳಲ್ಲಿ ಯುದ್ಧ ಇನ್ನಷ್ಟು ತೀವ್ರಗೊಳ್ಳುವ ಅಪಾಯ ಕಂಡುಬಂದಿದೆ.

ಉಕ್ರೇನ್ ಸಂಘರ್ಷ ವಿಶ್ವ ಅಣು ಸಮರದತ್ತ ಹೋಗುತ್ತಿದೆಯೇ?

ಜಗದ ಸುತ್ತ

ವಸಂತರಾಜ ಎನ್.ಕೆ.

ಬಿಡೆನ್ ಹಠಾತ್ ಭೇಟಿ, ಪುಟಿನ್ ಆತಂಕ–ಆಕ್ರೋಶ

ಅಮೆರಿಕದ ಅಧ್ಯಕ್ಷ ಹಠಾತ್ತಾಗಿ ಉಕ್ರೇನಿಗೆ ಅಘೋಷಿತವಾಗಿ ರಹಸ್ಯವಾಗಿಡಲಾಗಿದ್ದ ಭೇಟಿಯಿತ್ತರು. ಉಕ್ರೇನ್ ಅಧ್ಯಕ್ಷರ ಜತೆ ಜಂಟಿ ಪತ್ರಿಕಾಗೋಷ್ಠಿ ನಡೆಸಿ 'ಉಕ್ರೇನ್ ಜತೆ ನಾವಿದ್ದೇವೆ, ಎಂದೆಂದಿಗೂ ಇರುತ್ತೇವೆ' ಎಂಬ ಹೇಳಿಕೆಯಿತ್ತರು. ಹೊವಿಟ್ಝರ್ ಗಳಿಗೆ ಮದ್ದುಗುಂಡು, ಹಿಮಾರ್ ರಾಕೆಟುಗಳು, ಜಾವೆಲಿನ್ ಕ್ಷಿಪಣಿಗಳು, ಕಣ್ಗಾವಲ ರಾಡಾರುಗಳು – ಮುಂತಾದ ಸುಮಾರು 45 ಕೋಟಿ ಬೆಲೆಯ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಕಳಿಸುವ ಘೋಷಣೆ ಮಾಡಿದರು. ರಶ್ಯಾದ ವಿರುದ್ಧ ಇನ್ನಷ್ಟು ಆರ್ಥಿಕ ದಿಗ್ಬಂಧನಗಳನ್ನು ಹಾಕುವ ಘೋಷಣೆಯನ್ನೂ ಮಾಡಿದರು. ಚೋದ್ಯದ ವಿಷಯವೆಂದರೆ, ಅದರ ಜತೆಗೆ ರಶ್ಯಾಕ್ಕೆ ಶಸ್ತ್ರಾಸ್ತ್ರಗಳನ್ನು ಪೂರೈಕೆ ಮಾಡುವ ದೇಶಗಳ ವಿರುದ್ಧವೂ ಆರ್ಥಿಕ ದಿಗ್ಬಂಧನಗಳನ್ನು ವಿಧಿಸುವುದಾಗಿ ಎಚ್ಚರಿಕೆ ನೀಡುತ್ತಾ ತಮ್ಮ "ಮೂಗಿನ ನೇರದ ತರ್ಕ"ವನ್ನು ಪ್ರದರ್ಶಿಸಿದರು. ಯುದ್ಧದಲ್ಲಿ ತೊಡಗಿರುವ ದೇಶಗಳಿಗೆ ಶಸ್ತ್ರಾಸ್ತ್ರಗಳನ್ನು ಪೂರೈಕೆ ಮಾಡುವುದು ಅಂತರಾಷ್ಟ್ರೀಯ ಕಟ್ಟಳೆ. ಉಕ್ರೇನ್ ಗೆ ನಾಟೋ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಕಳಿಸುವುದು ನ್ಯಾಯಯುತವಾದರೆ, ರಶ್ಯಕ್ಕೆ ಇತರ ದೇಶಗಳು ಶಸ್ತ್ರಾಸ್ತ್ರಗಳನ್ನು ಪೂರೈಕೆ ಮಾಡುವುದು ಅಪರಾಧ ಹೇಗಾಗುತ್ತದೆ? ಅಪರಾಧವೇ ಅಲ್ಲದ ಅದಕ್ಕೆ ಆರ್ಥಿಕ ದಿಗ್ಬಂಧನದ ಶಿಕ್ಷೆ ವಿಧಿಸುವುದನ್ನು ಹೇಗೆ ಸಮರ್ಥಿಸಬಹುದು.

ಈವರೆಗೆ ಉಕ್ರೇನಿಗೆ ಕೊಡಲಾಗಿರುವ ಅತ್ಯಾಧುನಿಕ ಶಸ್ತ್ರಾಸ್ತ್ರಗಳು ಯುದ್ಧರಂಗದವುಗಳು ಆಗಿದ್ದು, ಅವುಗಳಿಗೆ ರಶ್ಯಾದ ಪ್ರದೇಶಗಳಿಗೆ ದಾಳಿ ಮಾಡುವ ಸಾಮರ್ಥ್ಯವಿಲ್ಲ. ಉಕ್ರೇನ್ ಅಧ್ಯಕ್ಷರು ಈ ಸಾಮರ್ಥ್ಯವಿರುವ ಎಫ್–16 ವಿಮಾನಗಳು, ದೂರಗಾಮಿ ಕ್ಷಿಪಣಿಗಳನ್ನು ಕೊಡಬೇಕೆಂದು ಒತ್ತಾಯಿಸುತ್ತಿದ್ದಾರೆ. ಇತ್ತೀಚಿಗಷ್ಟೇ ಭೂಯುದ್ಧದಲ್ಲಿ ತಿರುವು ತರಬಲ್ಲ ಅತ್ಯಾಧುನಿಕ ಟ್ಯಾಂಕುಗಳನ್ನು ಉಕ್ರೇನಿಗೆ ಪೂರೈಸಲಾಗಿದ್ದು, ಅದು ಇದುವರೆಗೆ ಪರಿಣಾಮಕಾರಿಯಾಗದೆ ಇರುವುದರಿಂದ, ಎಫ್–16 ವಿಮಾನಗಳು, ದೂರಗಾಮಿ ಕ್ಷಿಪಣಿಗಳನ್ನು ಅಮೆರಿಕ ಕೊಡಲು ನಿರ್ಧರಿಸಿದೆಯೇ ಎಂಬ ಆತಂಕ ರಶ್ಯವನ್ನು ಕಾಡುತ್ತಿದೆ. ಬಿಡೆನ್ ಅವರ ಈ ಸವಾಲಿಗೆ ಪ್ರತಿಯಾಗಿ 2010ರಲ್ಲಿ ಸಹಿ ಹಾಕಲಾದ ಸ್ಟಾರ್ಟ್ (ಖಿಱಿಂಖಿಖಿ) ಒಪ್ಪಂದದಲ್ಲಿ ರಶ್ಯಾದ ಪಾಲುಗೊಳ್ಳುವಿಕೆಯನ್ನು ಅಮಾನತಿನಲ್ಲಿ ಇಟ್ಟಿದ್ದೇವೆ ಎಂದು ರಶ್ಯದ ಅಧ್ಯಕ್ಷ ಪುಟಿನ್ ಘೋಷಿಸಿದ್ದಾರೆ.

ಈ ಒಪ್ಪಂದ ಅಣು ಶಸ್ತ್ರಾಸ್ತ್ರಗಳ ಸಂಖ್ಯೆಯನ್ನು ಮಿತಿಗೊಳಪಡಿಸುತ್ತದೆ, ಅವುಗಳ ಪರಸ್ಪರ ಪರೀಕ್ಷಣೆಗೆ ಅವಕಾಶ ಕೊಡುತ್ತದೆ, ಹೊಸ ಅಣು ಶಸ್ತ್ರಾಸ್ತ್ರಗಳ ಪರೀಕ್ಷಣೆಯನ್ನು ನಿಷೇಧಿಸುತ್ತದೆ. ಒಂದು ಕಡೆ ಕೊವಿಡ್ ಸಂದರ್ಭದಲ್ಲಿ ಪರಸ್ಪರ ಪರೀಕ್ಷಣೆ ನಿಂತು ಹೋಗಿದ್ದು, ಅದನ್ನು ಉಕ್ರೇನ್ ಸಂಘರ್ಷ ನಂತರ ಪುನರಾರಂಭಿಸಬೇಕೆಂದು ಅಮೆರಿಕ ಒತ್ತಡ ಹಾಕುತ್ತಿತ್ತು. ಇನ್ನೊಂದು ಕಡೆ ಅಣು ಶಸ್ತ್ರಾಸ್ತ್ರಗಳ ರಶ್ಯನ್ ಕೇಂದ್ರಗಳ ಮೇಲೆ ದಾಳಿ ಮಾಡಲು ಉಕ್ರೇನಿನ ಜತೆ ಯೋಜನೆ ಹಾಕುತ್ತಿದೆ. ಇದು ಒಪ್ಪಂದದ ಹೂರಣಕ್ಕೆ ವಿರುದ್ಧವಾದ ಗೋಸುಂಬೆತನವಾಗಿದ್ದು, ಅದಕ್ಕಾಗಿ ಈ ಒಪ್ಪಂದವನ್ನು ಅಮಾನತಿನಲ್ಲಿಡುತ್ತಿದ್ದೇವೆ. ಅಮೆರಿಕ ಯಾವುದೇ ಹೊಸ ಹೊಸ ಅಣು ಶಸ್ತ್ರಾಸ್ತ್ರಗಳ ಪರೀಕ್ಷಣೆಯನ್ನು ಮಾಡಿದರೆ ರಶ್ಯಾ ಸಹ ತನ್ನ ಪರೀಕ್ಷಣೆಯನ್ನು ಆರಂಭಿಸುತ್ತದೆ ಎಂದು ಪುಟಿನ್ ಹೇಳಿಕೆ ನೀಡಿದ್ದಾರೆ. ಯು.ಎಸ್ ಮತ್ತು ನಾಟೋ ಉಕ್ರೇನ್ ಮೂಲಕ ಪ್ರಾಕ್ಸಿ ಕದನ ನಡೆಸುತ್ತಿದೆ. ರಶ್ಯಾದ ಮೇಲೆ ಉಕ್ರೇನಿನ ಮೇಲೆ ದಾಳಿ ನಡೆದರೆ ಪ್ರಾಕ್ಸಿ ಕದನದಲ್ಲಿ ಭಾಗವಹಿಸುತ್ತಿರುವ ಎಲ್ಲ ದೇಶಗಳ ಮೇಲೂ ಪ್ರತಿದಾಳಿ ನಡೆಸುವ ಹಕ್ಕನ್ನು ರಶ್ಯ ಕಾಯ್ದಿರಿಸಿದೆಯೆಂದು ಎಚ್ಚರಿಸಿದ್ದಾರೆ.

ವಿಶ್ವ ಅಣು ಸಮರದ ಭೀತಿ

ಉಕ್ರೇನ್ ಸಂಘರ್ಷದಲ್ಲಿ ಮೊದಲ ಕೆಲವು ತಿಂಗಳುಗಳಲ್ಲಿ ರಶ್ಯಾ ಮೇಲುಗೈ ಆಗಿತ್ತು. ನಂತರದ ತಿಂಗಳುಗಳಲ್ಲಿ ಅದು ಪೂರ್ವ ಪ್ರದೇಶಗಳಿಗೆ ಹಿಂತೆಗೆದು ಕೆಲವು ಪ್ರದೇಶಗಳನ್ನು ಗೆದ್ದು ಹಿಡಿತದಲ್ಲಿ ಇರಿಸಿಕೊಂಡಿದೆ. ದಕ್ಷಿಣದಲ್ಲಿ ಕಪ್ಪು ಸಮುದ್ರದ ತಟ ಪ್ರದೇಶಗಳನ್ನು ಹಿಡಿಯಲು ಪ್ರಯತ್ನಿಸುತ್ತಿದೆ. ಮುಂದೊಂದು ದಿನ ಯುದ್ಧನಿಲುಗಡೆ ಒಪ್ಪಂದವಾದಾಗ ವಶದಲ್ಲಿರುವ ಪ್ರದೇಶಗಳಲ್ಲಿ ಯಥಾಸ್ಥಿತಿ ಕಾಪಾಡುವ ಸಾಧ್ಯತೆ ಹೆಚ್ಚಿರುವುದರಿಂದ ರಶ್ಯಾ ಪೂರ್ವ ಮತ್ತು ದಕ್ಷಿಣದ ಪ್ರದೇಶಗಳನ್ನು ವಶದಲ್ಲಿ ಇಟ್ಟುಕೊಳ್ಳಲು ತನ್ನೆಲ್ಲ ಸಂಪನ್ಮೂಲಗಳನ್ನೂ ಸಾಮರ್ಥ್ಯವನ್ನು ಮುಡಿಪಾಗಿರಿಸಿದೆ. ರಶ್ಯಾವನ್ನು ಆರ್ಥಿಕ ದಿಗ್ಬಂಧನದಿಂದ ಜರ್ಝರಿತಗೊಳಿಸಿ ಸೋಲಿಸಬಹುದೆಂಬ ವ್ಯೂಹ ಕೆಲಸ ಮಾಡಿಲ್ಲವೆಂಬುದು ಮಿಲಿಟರಿ ಕಾರ್ಯಾಚರಣೆಯ ನಿರ್ಣಾಯಕತೆಯನ್ನು ಹೆಚ್ಚಿಸಿದೆ. ಅದೇ ಕಾರಣಕ್ಕೆ ಉಕ್ರೇನ್ ಯು.ಎಸ್–ನಾಟೋ ಬೆಂಬಲದೊಂದಿಗೆ ದಕ್ಷಿಣ ಪೂರ್ವ ಪ್ರದೇಶಗಳಲ್ಲಿ ರಶ್ಯದ ಹಿಡಿತ ಮುರಿಯಲು ಪಣತೊಟ್ಟಿದೆ. ಇದು ನಿರ್ಣಾಯಕ ಹಂತ ತಲುಪಿದ್ದು, ಚಳಿಗಾಲ ಮುಗಿಯುತ್ತಿದ್ದಂತೆ ಭೀಕರ ಸಂಘರ್ಷ ನಡೆಯಲಿದೆ. ಇದರ ಜತೆಗೆ ಉಕ್ರೇನ್–ರಶ್ಯಾ ಎರಡೂ ಕಡೆ ಸರಕಾರ ಬದಲಾವಣೆಯೂ ಉದ್ದೇಶವಾಗಿದ್ದು ಅದಕ್ಕೂ ನಿರ್ಣಾಯಕ ಮುನ್ನಡೆ ಅಗತ್ಯವಾಗಿದೆ. ಹೀಗೆ ಮೇಲುಗೈ ಸಾಧಿಸಲು ಪಾರಂಪರಿಕ 'ಲಕ್ಷ್ಮಣ ರೇಖೆ' ಗಳನ್ನು (ರಶ್ಯಾ ನಾಗರಿಕ ಪ್ರದೇಶಗಳ ಮೇಲೆ ದಾಳಿ, ಯುರೋಪಿನ ನಾಟೋ ದೇಶಗಳ/ನೆಲೆಗಳ ಮೇಲೆ ದಾಳಿ) ಎರಡೂ ಕಡೆಯಿಂದ ದಾಟುವ ಒತ್ತಡ ನಿರ್ಮಾಣವಾಗಬಹುದು. ಇದಕ್ಕಾಗಿ ಅಣ್ವಸ್ತ್ರ ಬಳಸುವ ಚಡಪಡಿಕೆ ಬರಬಹುದು. ಹೀಗಾದರೆ ಇದು ಅಣ್ವಸ್ತ್ರ ಸಮರ, ವಿಶ್ವ ಸಮರಕ್ಕಡೆ ಮಾಡಿಕೊಡಬಹುದು. ಹಿಂದೆಂದಿಗಿಂತಲೂ ಇದರ ಸಾಧ್ಯತೆ ಬಹಳಷ್ಟು ಹೆಚ್ಚಿದೆ.

ಮೂರನೇ ಜಗತ್ತಿನ ದೇಶಗಳನ್ನು ರಶ್ಯಾ ದ ವಿರುದ್ಧ ತಿರುಗಿಸಿ ಬಳಸುವ ಯು.ಎಸ್–ನಾಟೋ ಗಳ ತಂತ್ರ ಫಲಿಸಿಲ್ಲ. ರಶ್ಯಾದ ವಿರುದ್ಧ ಆರ್ಥಿಕ ದಿಗ್ಬಂಧನಗಳಲ್ಲಿ ಭಾಗವಹಿಸಬೇಕು, ರಶ್ಯಾದ ತೈಲ, ಗ್ಯಾಸ್ ಕೊಳ್ಳಬಾರದು ಎಂದು ಒತ್ತಡ, ಇಲ್ಲದಿದ್ದರೆ ದಿಗ್ಬಂಧನದ ಬೆದರಿಕೆಗೆ ಅವು ಸೊಪ್ಪು ಹಾಕಿಲ್ಲ. ಹಾಗಾಗಿ ಅದನ್ನು ಕೈ ಬಿಟ್ಟು, ಈಗ ರಶ್ಯಾಕ್ಕೆ ಶಸ್ತ್ರಾಸ್ತ್ರಗಳ ಪೂರೈಕೆ ಮಾಡಿದರೆ ಆರ್ಥಿಕ ದಿಗ್ಬಂಧನ ಹಾಕಲಾಗುವುದು ಎಂಬ ಬೆದರಿಕೆ ಹಾಕಲಾಗುತ್ತಿದೆ. ಸಾಮಾನ್ಯವಾಗಿ ಪಾಶ್ಚಿಮಾತ್ಯ–ಪರ ವಿದೇಶಾಂಗ ನೀತಿಯುಳ್ಳ (ಭಾರತ ಸೇರಿದಂತೆ) ದೇಶಗಳು ಸಹ ಉಕ್ರೇನ್ ಸಂಘರ್ಷದಲ್ಲಿ ಯು.ಎಸ್–ನಾಟೋ ಗಳಿಗೆ ಸಾಥ್ ನೀಡಿಲ್ಲ, ಇತ್ತೀಚೆಗೆ ಭಾರೀ ಒತ್ತಡವಿದ್ದರೂ ರಶ್ಯಾದ ವಿರುದ್ಧ ನಿರ್ಣಯ ಕೈಗೊಳ್ಳಲು ಜಿ–20 ಶೃಂಗಸಭೆ ನಿರಾಕರಿಸಿದೆ. ಇದೂ ಯು.ಎಸ್–ನಾಟೋ ಕೂಟದ ಹತಾಶೆ ಹೆಚ್ಚಿಸಿದೆ.

ಆರ್ಥಿಕ ದಿಗ್ಬಂಧನ ಬ್ಯೂಮರಾಂಗ್

ಕಳೆದ ಒಂದು ವರ್ಷದ ಉಕ್ರೇನ್ ಸಂಘರ್ಷ ಇಡೀ ಜಗತ್ತಿನ ಮೇಲೆ ಬೀರಿದ ಪರಿಣಾಮಗಳತ್ತ ಹಿನ್ನೋಟ ಬೀರುವುದೂ ಈ ಸಂದರ್ಭದಲ್ಲಿ ಸೂಕ್ತ. ಈಗಾಗಲೇ ಹೇಳಿದ ಹಾಗೆ ರಶ್ಯಾ ಆರ್ಥಿಕ ದಿಗ್ಬಂಧನಗಳಿಂದ ಜರ್ಝರಿತವಾಗಿ ಜನ ದಂಗೆಯೆದ್ದು ಬದಲಿ ಸರಕಾರ ಬರಬಹುದೆಂಬ ಯು.ಎಸ್–ನಾಟೋ ನಿರೀಕ್ಷೆ ಹುಸಿಯಾಗಿದೆ. ಆರ್ಥಿಕ ದಿಗ್ಬಂಧನಗಳಿಂದ ಜಾಗತಿಕ ತೈಲ, ಗ್ಯಾಸ್ ಪೂರೈಕೆ ಕಡಿಮೆಯಾಗಿದೆ,. ಆದರೆ ಅದರಿಂದ ಅದರ ಬೆಲೆಯೂ ಜಾಸ್ತಿಯಾಗಿ ರಶ್ಯಾಕ್ಕೆ ಲಾಭವೇ ಆಗಿದೆ. ರಶ್ಯಾ ಯುರೋಪಿನ ಮಾರುಕಟ್ಟೆಯನ್ನು ಕಳೆದುಕೊಂಡಿದೆ, ಆದರೆ ಅದು ಇಂಡಿಯಾ. ಚೀನಾ ಮುಂತಾದ ಬದಲಿ ಮಾರುಕಟ್ಟೆಯನ್ನು ಪಡೆದಿದೆ. ಐ.ಎಂ.ಎಫ್ ದಿಗ್ಬಂಧನಗಳಿಂದ ರಶ್ಯಾದ ಆರ್ಥಿಕ ಶೇ.8.5 ರಷ್ಟು ಸಂಕುಚಿತಗೊಳ್ಳಬಹುದು ಎಂದು ಅಂದಾಜು ಮಾಡಿತ್ತು. ಆದರೆ ಸಂಕುಚನ ಶೇ.2.2 ಕ್ಕೆ ಮಿತಿಗೊಂಡಿದೆ. 2023ರಲ್ಲಿ 0.3 ರಷ್ಟು ಬೆಳವಣಿಗೆ ಸಹ ಕಾಣಬಹುದು ಎಂದು ಅಂದಾಜಿದೆ.

46 ಶತಕೋಟಿ ಡಾಲರ್ ಆರ್ಥಿಕ ನೆರವು ಮತ್ತು 67 ಶತಕೋಟಿ ಡಾಲರ್ ಮಿಲಿಟರಿ ನೆರವು ಇದ್ದಾಗ್ಯೂ ಉಕ್ರೇನಿನ ಆರ್ಥಿಕ ಶೇ.35ರಷ್ಟು ಸಂಕುಚಿತಗೊಂಡಿದೆ.

ಯುರೋಪಿನ ದೇಶಗಳು ನಿರೀಕ್ಷೆಗಿಂತ ಹೆಚ್ಚಿನ ಆರ್ಥಿಕ ನಷ್ಟ ಅನುಭವಿಸಿವೆ. ಬ್ರಿಟನ್ ಆರ್ಥಿಕ 0.6% ರಷ್ಟು ಸಂಕುಚನ ಅನುಭವಿಸಲಿದೆ. 2022ರಲ್ಲಿ ಜರ್ಮನಿಯ ಆರ್ಥಿಕ ಬೆಳವಣಿಗೆ ಶೇ.1.9ಕ್ಕೆ ಇಳಿದಿದ್ದು, 2023ರಲ್ಲಿ ಶೇ.0.1ಕ್ಕೆ ಇಳಿಯಲಿದೆ. ಏಕೆಂದರೆ 2021ರಲ್ಲಿ ಇಂಧನಗಳಿಗೆ ಮಾಡಿದ ಖರ್ಚಿಗಿಂತ ಶೇ. 4ರಷ್ಟು ಹೆಚ್ಚು 2023ರಲ್ಲಿ ಅದು ತೆರಲಿದೆ. ಅದರ ಪ್ರಸಿದ್ಧ ಕೈಗಾರಿಕಾ ನೆಲೆಗೆ ತೀವ್ರ ಅಪಾಯ ಕಾದಿದೆ. ಯುರೋ ಕೂಟದ ಬೆಳವಣಿಗೆ 3.5% ನಿಂದ 0.7% ಗೆ ಕುಸಿಯಲಿದೆ. ಹೀಗೆ ರಶ್ಯಾದ ಮೇಲೆ ಹೇರಿದ ದಿಗ್ಬಂಧನ ಯುರೋಪಿನ ಮೇಲೆ ಬ್ಯೂಮರಾಂಗ್ ಆಗಿದೆ.

ಯು.ಎಸ್ ಮೇಲೆ ಈ ಪರಿಣಾಮ ಹೆಚ್ಚಿಲ್ಲದಿದ್ದರೂ, ಅದರ ಬೆಳವಣಿಗೆ ದರ ವರ್ಷದಿಂದ ವರ್ಷಕ್ಕೆ ಕುಸಿಯಲಿದೆ – 5.9% (2021), 2% (2022), 1.4% (2023).

ತೈಲ, ಗ್ಯಾಸ್, ಶಸ್ತ್ರಾಸ್ತ್ರಗಳ ಕಂಪನಿಗಳಿಗೆ ಸೂಪರ್ ಲಾಭ ಎಲ್ಲ ದೇಶಗಳು ದ ಂ ಷ್ ಪ ರಿ ಣಾ ಾ ವ ಂ ಅನುಭವಿಸುತ್ತಿರುವಾಗ, ಈ ಯುದ್ಧದಿಂದ ಯಾರಿಗೂ ಲಾ ಭ ' ವಾ ಗ ' ಲಿ ಲ್ಲ ವೇ ? ಹಾಗಾದರೆ ಯುದ್ಧ ಯಾಕೆ ಮುಂದುವರೆಯುತ್ತಿದೆ. ಯು.ಎಸ್–ಯುರೋಪಿನ ತೈಲ–ಗ್ಯಾಸ್ ಕಂಪನಿಗಳು 200 ಶತಕೋಟಿ ಡಾಲರುಗಳ – ಶೆಲ್ (40), ಶೇವ್ರಾನ್ (36), ತೋಟಲ್ (36), ಬಿಪಿ (28) – ರೆಕಾರ್ಡ್ ಸೂಪರ್ ಲಾಭ ಹೊಡೆದಿವೆ. ಅತ್ಯಂತ ಕಡಿಮೆ ಲಾಭ ಪಡೆದ ಬಿಪಿ ಯ ಲಾಭ 2021ರ ಇಮ್ಮಡಿ. ಯುರೋಪಿನಲ್ಲಿ ನಾರ್ಡ್ ಸ್ಟ್ರೀಮ್ ಪೈಪ್ ಲೈನ್ ಸ್ಫೋಟದ ನಂತರ ಶೇನಯರ್ ಮತ್ತು ಟೋಟಲ್ ಗಳು ಎಲ್.ಎನ್.ಜಿ ಗ್ಯಾಸನ್ನು ಪೂರೈಸಿ ಸೂಪರ್ ಲಾಭ ಗಳಿಸಿದವು. ಇದಕ್ಕೆ ಯುರೋಪಿನ ಬಳಕೆದಾರರು ಯು.ಎಸ್ ಬಳಕೆದಾರರಿಗಿಂತ ನಾಲ್ಕು ಪಟ್ಟು ಹೆಚ್ಚು ಬೆಲೆ ತೆರಬೇಕಾಯಿತು. 2022ರ ಬೇಸಿಗೆಯಲ್ಲಿ ಯುರೋಪಿನಲ್ಲಿ ಇಂದನ ಬೆಲೆ 2021ರ 5 ಪಟ್ಟು ಆಗಿತ್ತು. ಇದನ್ನು ಯುರೋಪಿನ ಜನರ ದೇಶಗಳ ಹಿತಾಸಕ್ತಿ ಬಲಿಗೊಟ್ಟು, ಸರಕಾರಗಳ ಮೇಲೆ ಅಸಾಧ್ಯ ಒತ್ತಡ ಹಾಕಿ ಸಾಧಿಸಲಾಯಿತು. ತಕ್ಷಣದಲ್ಲಿ ಇದನ್ನು ಸಾಧಿಸಲಾಗಿದ್ದರೂ ಇದರ ದೀರ್ಘ ಕಾಲೀನ ಪರಿಣಾಮ ಯುರೋ ಕೂಟ–ಯು.ಎಸ್ ಗಳ ನಡುವೆ ತೀವ್ರ ಬಿರುಕು, ವಿಶ್ವಾಸಾರ್ಹತೆಯ ಕೊರತೆಗೆ ಕಾರಣವಾಗಬಹುದು.

ತೈಲ, ಗ್ಯಾಸ್ ಕಂಪನಿಗಳಲ್ಲದೆ ಶಸ್ತ್ರಾಸ್ತ್ರಗಳ ಕಂಪನಿಗಳು. ಉಕ್ರೇನಿಗೆ ಯು.ಎಸ್–ನಾಟೋ ದ ದಾಸ್ತಾನಿದ್ದ ಹಳೆಯ ಶಸ್ತ್ರಾಸ್ತ್ರಗಳನ್ನು ಕಳಿಸಲಾಯಿತು. ಆದರೆ ಉಕ್ರೇನ್ ಯುದ್ಧದ ನೆಪ ಬಳಸಿ ಇನ್ನಷ್ಟು ದೊಡ್ಡ ಶಸ್ತ್ರಾಸ್ತ್ರಗಳ ದಾಸ್ತಾನನ್ನು ಸೃಷ್ಟಿಸಲು 'ಸಿಂಗಲ್ ಟೆಂಡರ್ ತುರ್ತು ಆರ್ಡರ್' ಗಳನ್ನು ಕೊಡಲಾಗಿದೆ. ಹಿಂದಿನ ದಾಸ್ತಾನಿನ 500 ಪಟ್ಟು ದಾಸ್ತಾನಿಗೆ ಆರ್ಡರ್ ಕೊಡಲಾಗಿದೆ.

ದಿನದ ಕೆಲಸದ ಅವಧಿ 3 ಗಂಟೆ ಹೆಚ್ಚಳ: ಮಾರ್ಚ್ 1 ರಂದು ರಾಜ್ಯವ್ಯಾಪಿ ಪ್ರತಿಭಟನೆಗೆ ಸಿಐಟಿಯು ಕರೆ

ಕಾರ್ಖಾನೆಗಳಲ್ಲಿ ದಿನದ ಕೆಲಸದ ಅವಧಿಯನ್ನು ಗರಿಷ್ಟ 9 ಗಂಟೆಯಿಂದ 12 ಗಂಟೆಗೆ ಹೆಚ್ಚಿಸಿ ಮತ್ತು ದುಡಿಯುವ ಮಹಿಳೆಯರನ್ನು ರಾತ್ರಿ ಪಾಳಿಯಲ್ಲಿ ದುಡಿಸಿಕೊಳ್ಳಲು ಅವಕಾಶ ಕಲ್ಪಿಸಿ ಕಾರ್ಖಾನೆ ಕಾಯ್ದೆ – 1948ಕ್ಕೆ ತಿದ್ದುಪಡಿ ಮಾಡಿ, ಕಾರ್ಖಾನೆಗಳ (ಕರ್ನಾಟಕ ತಿದ್ದುಪಡಿ) ವಿಧೇಯಕ 2023 ನ್ನು ರಾಜ್ಯ ಸರ್ಕಾರ ವಿಧಾನ ಸಭೆಯಲ್ಲಿ ಮಂಡಿಸಿ ಅಂಗೀಕಾರ ಪಡೆದಿದೆ. ಇದು ಕಾರ್ಮಿಕ ವಿರೋಧಿಯಾಗಿದ್ದು, ಚುನಾವಣೆ ಹೊಸ್ತಿಲಲ್ಲಿ ಬಂಡವಾಳಗಾರರನ್ನು ಓಲೈಸುವ ಕ್ರಮವಾಗಿದೆ ಎಂದಿರುವ ಸಿಐಟಿಯು, ಈ ತಿದ್ದುಪಡಿ ವಿದೇಯಕವನ್ನು ತೀವ್ರವಾಗಿ ವಿರೋಧಿಸಿದೆ. ಕೂಡಲೇ ಈ ವಿಧೇಯಕವನ್ನು ವಾಪಸ್ಸು ಪಡೆಯಬೇಕೆಂದು ರಾಜ್ಯ ಸರ್ಕಾರವನ್ನು ಅದು ಒತ್ತಾಯಿಸಿದೆ.

ಸರ್ಕಾರದ ಈ ಕಾರ್ಮಿಕ ವಿರೋಧಿ ವಿದೇಯಕವನ್ನು ವಿರೋಧಿಸಿ ಮಾರ್ಚ್ 1 ರಂದು ರಾಜ್ಯವ್ಯಾಪಿ ಪ್ರತಿಭಟನೆಗೆ ಸಿಐಟಿಯು ಕರೆ ನೀಡಿದೆ.

ಪ್ರಸ್ತುತ ಕಾಯ್ದೆಯಲ್ಲಿ ದಿನದ ಕೆಲಸದ ಅವಧಿಯ ಆರಂಭದಿಂದ ಗರಿಷ್ಠ 5 ಗಂಟೆಗೆ 30 ನಿಮಿಷ ವಿರಾಮವನ್ನು ನೀಡಬೇಕು. ಆದರೆ ಈ ತಿದ್ದುಪಡಿ ವಿಧೇಯಕದಲ್ಲಿ ವಿರಾಮವಿಲ್ಲದೆ ದುಡಿಮೆ ಮಾಡುವ ಅವಧಿ ಗರಿಷ್ಠ 5 ಗಂಟೆಯಿಂದ 6 ಗಂಟೆಗೆ ಹೆಚ್ಚಿಸಲಾಗಿದೆ. ಹಾಗೂ ಕಾರ್ಮಿಕರ ದಿನದ ಕೆಲಸದ ಗರಿಷ್ಠ ಅವಧಿ 9 ಗಂಟೆಯಿಂದ 12 ಗಂಟೆಗೆ ಹೆಚ್ಚಿಸಲಾಗಿದೆ. ಇದು ಕಾರ್ಮಿಕರ ಶೋಷಣೆಗೆ ಮತ್ತಷ್ಟು ಅವಕಾಶ ಕಲ್ಪಿಸಿದೆ. ರಾಜ್ಯ ಬಿಜೆಪಿ ಸರ್ಕಾರದ ಇಂತಹ ಧೋರಣೆಯನ್ನು ಸಿಐಟಿಯು ರಾಜ್ಯ ಸಮಿತಿ ಬಲವಾಗಿ ಖಂಡಿಸಿದೆ.



ಪ್ರಸ್ತುತ ಉದ್ಯೋಗದ ಕಡಿತ, ಕಡಿಮೆ ವೇತನಕ್ಕೆ ದುಡಿಮೆ, ಅಧಿಕ ಉತ್ಪಾದನೆ ಮಾಡಿಸಿಕೊಳ್ಳುವುದು ಹೆಚ್ಚಾಗಿದೆ. ಈ ತಿದ್ದುಪಡಿಗಳು ಕಾರ್ಮಿಕರ ಮೇಲೆ ವಿರಾಮವಿಲ್ಲದೆ ಅಧಿಕ ಉತ್ಪಾದನೆ ಮಾಡಬೇಕೆನ್ನುವ ಒತ್ತಡ, ಶೋಷಣೆ ಹೆಚ್ಚಿಸಲಿದೆ. ಹಲವು ಕಾರ್ಖಾನೆಗಳ ಮಾಲಿಕರಿಗೆ 6 ದಿನಗಳಲ್ಲಿ ಆಗುತ್ತಿದ್ದ ಉತ್ಪಾದನೆ 4 ದಿನಗಳಲ್ಲೇ ಕಾರ್ಮಿಕರ ಶ್ರಮದ ಶೋಷಣೆಯಿಂದ ಸಿಗಲಿದೆ. ಮೂರು ಶಿಫ್ಟ್ ಗಳಿಗೆ ಒದಗಿಸ ಬೇಕಾದ ಸಾರಿಗೆ ಸೌಲಭ್ಯ ಹಾಗೂ ಕ್ಯಾಂಟೀನ್ ಮತ್ತು ಇನ್ನಿತರ ಸೌಲಭ್ಯಗಳನ್ನು ಉಳಿಸಲು ಇದು ಅವಕಾಶ ಕಲ್ಪಸುತ್ತದೆ. ಚಾರಿತ್ರಿಕ 8 ಗಂಟೆ ಕೆಲಸ 8 ಗಂಟೆ ವಿರಾಮ ಮತ್ತು 8 ಗಂಟೆ ಮನೋರಂಜನೆ ಎಂಬ ಜೀವಪರ ತಾತ್ವಿಕ ನೆಲೆಯನ್ನು ಕಳಚಿ ಹಾಕಿ ಬಂಡವಾಳಕ್ಕೆ ಲಾಭ ಮಾಡಿಕೊಡುವ ನವಉದಾರವಾದಿ ಆರ್ಥಿಕ ನೀತಿಯ ಜಾರಿಯ ನಿಟ್ಟಿನಲ್ಲಿ ಬಿಜೆಪಿ ಸಕಾ9ರವು ಈ ತಿದ್ದುಪಡಿಗೆ ಕ್ರಮ ವಹಿಸಿದೆ.

ದುಡಿಯುವ ಮಹಿಳೆಯರ ಸುರಕ್ಷತೆ, ಕೆಲಸದ ಭದ್ರತೆ, ಸಾರಿಗೆ, ಸೇವಾ ಸೌಲಭ್ಯಗಳಿಂದ ಮಹಿಳಾ ಕಾರ್ಮಿಕರು ವಂಚಿತರಾಗಿದ್ದಾರೆ. ಕೆಲಸದ ಸ್ಥಳಗಳಲ್ಲಿ ಮಹಿಳೆಯರ ಕಿರುಕುಳ ಹೆಚ್ಚಾಗಿದೆ. ಕಡಿಮೆ ವೇತನಕ್ಕೆ ದುಡಿಸಿಕೊಳ್ಳಲಾಗುತ್ತಿದ್ದು, ಕೆಲಸದ ಅಭದ್ರತೆಯಿಂದಾಗಿ ಉದ್ಯೋಗದಿಂದ ವಂಚಿತರಾಗುತ್ತಿದ್ದಾರೆ. ಹೀಗಿರುವಾಗ ಮಹಿಳಾ ಕಾರ್ಮಿಕರನ್ನು ರಾತ್ರಿಪಾಳಿಯಲ್ಲಿ ದುಡಿಮೆ ಮಾಡಿಕೊಳ್ಳಲು ಕಾರ್ಖಾನೆ ಮಾಲಿಕರಿಗೆ ಅನುವುಗೊಳಿಸಿ ತಿದ್ದುಪಡಿ ಮಾಡಿರುವುದು ಮಹಿಳಾ ಕಾರ್ಮಿಕರನ್ನು ದುಡಿಮೆಯಿಂದ ಹೊರಗಿಡುವ ಹುನ್ನಾರವಾಗಿದೆ.

ಈ ಹಿಂದೆ ಕೋವಿಡ್ ಸಂದರ್ಭದಲ್ಲಿ ಬಿಜೆಪಿ ಸರ್ಕಾರ 2020 ರಲ್ಲಿ ಕಾರ್ಮಿಕ ವಿರೋಧಿಯಾಗಿ ಈ ಕಾಯ್ದೆಗೆ ತಿದ್ದುಪಡಿಯನ್ನು ಮಾಡಿ ಸುಗ್ರೀವಾಜ್ಞೆ ಹೊರಡಿಸಲಾಗಿತ್ತು. ಈ ತಿದ್ದುಪಡಿ ವಿಧೇಯಕ ವಿಧಾನ ಸಭೆಯಲ್ಲಿ ಅಂಗೀಕಾರ ಮಾಡಿದರು ಕಾರ್ಮಿಕರ ತೀವ್ರ ವಿರೋಧದಿಂದಾಗಿ ವಿಧಾನ ಪರಿಷತ್ತಿನಲ್ಲಿ ಸೋಲಾಗಿತ್ತು. ಈಗ ಬಿಜೆಪಿ ಸರ್ಕಾರ ಚುನಾವಣೆ ಹೊಸ್ತಿಯಲ್ಲಿ ಬಂಡವಾಳಗಾರರ ಲಾಭವನ್ನು ಹೆಚ್ಚಿಸಲು ಈ ತಿದ್ದುಪಡಿ ವಿಧೇಯಕವನ್ನು ಶಾಸನ ಸಭೆಯಲ್ಲಿ ಅಂಗೀಕಾರ ಮಾಡಿರುವುದು ಕಾರ್ಮಿಕ ವಿರೋಧಿ ನಡೆಯಾಗಿದೆ.

ಕಾರ್ಖಾನೆಗಳಲ್ಲಿ ಹೊಸ ಉದ್ಯೋಗ ಅವಕಾಶಗಳ ಸೃಷ್ಟಿ, ಕಾರ್ಮಿಕರ ಮೇಲೆ ಅಧಿಕ ಉತ್ಪಾದನೆ ಮಾಡಬೇಕೆನ್ನುವ ಒತ್ತಡಗಳನ್ನು ಕಡಿಮೆ ಮಾಡಲು, ಕಾರ್ಮಿಕರ ಜೀವನವನ್ನು ಉತ್ತಮಪಡಿಸಲು 'ವಾರಕ್ಕೆ 5 ದಿನ ಕೆಲಸ, ದಿನಕ್ಕೆ 7 ಗಂಟೆ, ವಾರಕ್ಕೆ 35 ಗಂಟೆ ಕೆಲಸದ ಅವಧಿ' ನಿಗದಿ ಪಡಿಸಿ ಕಾಯ್ದೆಗೆ ತಿದ್ದುಪಡಿ ಮಾಡಬೇಕೆಂದು ಹಾಗೂ ಕಾರ್ಮಿಕ ವಿರೋಧಿ ತಿದ್ದುಪಡಿಗಳನ್ನು ಒಳಗೊಂಡಿರುವ ಕಾರ್ಖಾನೆಗಳ (ಕರ್ನಾಟಕ ತಿದ್ದುಪಡಿ) ವಿಧೇಯಕ 2023 ನ್ನು ವಾಪಸ್ಸು ಪಡೆಯಬೇಕೆಂದು ಸಿಐಟಿಯು ಒತ್ತಾಯಿಸಿದೆ. ಫೆಬ್ರವರಿ 28 ರಂದು ಎಲ್ಲಾ ಕಾರ್ಖಾನೆ ಗೇಟ್ ಬಳಿ ಕಾರ್ಮಿಕರಿಂದ ವಿಧೇಯಕ ಪತ್ರಿ ದಹನ ಮತ್ತು ಮಾರ್ಚ್ 1 ರಂದು ರಾಜ್ಯವ್ಯಾಪಿ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆಗೆ ಸಿಐಟಿಯು ಕರ್ನಾಟಕ ರಾಜ್ಯ ಸಮಿತಿ ಕರೆ ನೀಡಿದೆ.

ರಾಜ್ಯಗಳಿಗೆ ಸಂಪನ್ಮೂಲ ವರ್ಗಾವಣೆ ಏರಿಲ್ಲ, ಇಳಿದಿದೆ ಏಕಸ್ವಾಮ್ಯ ಬಂಡವಾಳಿಗರ ಪ್ರಯೋಜನದತ್ತ .... ಪುಟ 13 ರಿಂದ

ಪ್ರಯೋಜನವಾಗುವ ರೀತಿಯಲ್ಲಿ ತಿರುಗಿಸುವ ಒಂದು ಮಾರ್ಗವೂ ಆಗಿದೆ.

ಸಂಪನ್ಮೂಲಗಳನ್ನು ಏಕಸ್ವಾಮ್ಯ ಗುಂಪಿಗೆ ಪ್ರಯೋಜನವಾಗುವ ರೀತಿಯಲ್ಲಿ ತಿರುಗಿಸುವುದಕ್ಕೆ ಈ ವರ್ಷದ ಬಜೆಟ್ ಒಂದು ಉತ್ತಮ ಉದಾಹರಣೆಯಾಗಿದೆ. ಕೋವಿಡ್ ಸಾಂಕ್ರಾಮಿಕದಿಂದ "ಚೇತರಿಕೆ" ಹೊಂದಿದೆ ಎಂದು ಹೇಳಲಾದ ಅರ್ಥವ್ಯವಸ್ಥೆಯಲ್ಲಿ ಖಾಸಗಿ ಬಳಕೆಯು ತುಲನಾತ್ಮಕವಾಗಿ ನಿಗ್ರಹಿಸಲ್ಪಟ್ಟಿದೆ ಮತ್ತು ಜನರ ಸಂಕಷ್ಟಗಳನ್ನು ಶಾಶ್ವತಗೊಳಿಸಲಾಗಿದೆ. ಈ ಸಂಕಷ್ಟಗಳನ್ನು ನಿವಾರಿಸುವ ಯಾವ ಸೂಚನೆಯೂ ಈ ಬಜೆಟ್‌ನಲ್ಲಿ ದೊರಕುವುದಿಲ್ಲ. ಆದರೆ ಇನ್ನೊಂದು ಕಡೆಯಲ್ಲಿ, ಕೇಂದ್ರ ಸರ್ಕಾರವು ತನ್ನ ಒಟ್ಟಾರೆ ವೆಚ್ಚಗಳನ್ನು ಊಹನೆಯ ನಾಮಮಾತ್ರ ಜಿಡಿಪಿಯ ಬೆಳವಣಿಗೆಯ ದರಕ್ಕಿಂತಲೂ ಕೆಳಗೆ ಇರಿಸಿಕೊಂಡು, ಮೂಲಸೌಕರ್ಯ ಯೋಜನೆಗಳ ಮೇಲೆ ತನ್ನ ಬಂಡವಾಳ ವೆಚ್ಚಗಳನ್ನು ಹೆಚ್ಚಿಸಿದೆ. ಈ ಮೂಲಸೌಕರ್ಯ ಯೋಜನೆಗಳಲ್ಲಿ ಹೆಚ್ಚಿನವು ಅದಾನಿ ಉದ್ದಿಮೆ–ಸಮೂಹದ ಹಿತ ಹೊಂದಿವೆ. ಹಾಗಾಗಿ, ಅದಾನಿ ಉದ್ದಿಮೆ–ಸಮೂಹವು ಈ ಯೋಜನೆಗಳನ್ನು ಕಾರ್ಯಗತಗೊಳಿಸುವಲ್ಲಿ ಸರ್ಕಾರದೊಂದಿಗೆ ಸಹಯೋಗ ಹೊಂದಿರುತ್ತವೆ ಅಥವಾ ಈ ಯೋಜನೆಗಳಿಗೆ ಬೇಕಾಗುವ ನಾನಾ ರೀತಿಯ ಸರಕು–ಸಾಮಗ್ರಿಗಳನ್ನು ಒದಗಿಸುತ್ತವೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಕೇಂದ್ರವು ತನ್ನ ಬಂಡವಾಳ ವೆಚ್ಚಗಳನ್ನು ಹೆಚ್ಚಿಸುವ ಆಲೋಚನೆಯ ಹಿಂದಿರುವ ಉದ್ದೇಶವು ಅದಾನಿ ಉದ್ದಿಮೆ–ಸಮೂಹಕ್ಕೆ ಮಾರುಕಟ್ಟೆಯನ್ನು ಒದಗಿಸುವುದೇ ಆಗಿದೆ.

ಸಾರ್ವಜನಿಕ ಸಂಪನ್ಮೂಲಗಳ ಕೇಂದ್ರೀಕರಣದ ಪ್ರವೃತ್ತಿಯು ಫ್ಯಾಸಿಸ್ಟ್ ಆಳ್ವಿಕೆಗೆ ಮಾತ್ರ ಸೀಮಿತವಲ್ಲ. ಈ ವಿದ್ಯಮಾನವು, ನಾವು ಮೇಲೆ ಚರ್ಚಿಸಿದ ಅದೇ ಕಾರಣಗಳಿಗಾಗಿ ಏಕಸ್ವಾಮ್ಯ ಬಂಡವಾಳಶಾಹಿಯ ಸ್ವರೂಪವನ್ನು ಬಹುವಾಗಿ ನಿರೂಪಿಸುತ್ತದೆ. ಅಂದರೆ, ಸಾರ್ವಜನಿಕ ಸಂಪನ್ಮೂಲಗಳನ್ನು ದುಡಿಯುವ ಜನರಿಗೆ ಪರಿಹಾರ ನೀಡಲು "ವ್ಯರ್ಥ" ಮಾಡುವ ಬದಲು ಏಕಸ್ವಾಮ್ಯ ಉದ್ದಿಮೆಗಳಿಗೆ ಮಾರುಕಟ್ಟೆಯನ್ನು ಒದಗಿಸಲು ಬಳಸಲಾಗುತ್ತದೆ ಎಂದು ಖಚಿತಪಡಿಸಿಕೊಳ್ಳುವ ಬಯಕೆ! ಫ್ಯಾಸಿಸ್ಟ್ ಆಳ್ವಿಕೆಯಲ್ಲಿ ಈ ಪ್ರವೃತ್ತಿಯು ಹೆಚ್ಚು ಬಲಗೊಳ್ಳುತ್ತದೆ: ಜನರ ಲೌಕಿಕ ಜೀವನ ಮಟ್ಟವನ್ನು ಸುಧಾರಿಸುವ ಅಗತ್ಯವಿಲ್ಲ ಎಂದು ಪರಿಗಣಿಸಿ ಅವರನ್ನು ಮತೀಯ ಕೋಮುವಾದದಲ್ಲಿ ತೊಡಗಿಸಿ, ಸಂಪನ್ಮೂಲಗಳನ್ನು ಜೋಪಾನವಾಗಿ ಆರಿಸಿದ ಕೆಲವು ಏಕಸ್ವಾಮ್ಯ ಉದ್ದಿಮೆಗಳಿಗೆ ಪ್ರಯೋಜನವಾಗುವ ರೀತಿಯಲ್ಲಿ ಬಳಸಲಾಗುತ್ತದೆ. ಮೋದಿ ಆಡಳಿತವು ಈ ರೀತಿಯ ಕೇಂದ್ರೀಕರಣವನ್ನು ಅದರ ತುತ್ತತುದಿಗೆ ಕೊಂಡೊಯ್ದಿರುವುದು ಆಶ್ಚರ್ಯವೇನಲ್ಲ.

ಹೀಗಾಗಿ ಪ್ರಮುಖ ಶಸ್ತ್ರಾಸ್ತ್ರಗಳ ಕಂಪನಿಗಳ ಶೇರುಗಳು ಹಮನಾರ್ಹವಾಗಿ ಏರಿವೆ – ಲಾಕ್ ಹೀಡ್ ಮಾರ್ಟಿನ್ (37%), ನಾರ್ತ್ ರಾಪ್ ಗ್ರುಮನ್ (41%), ರಾತಿಯನ್ (17%), ಜನರಲ್ ಡೈನಾಮಿಕ್ಸ್ (19%).

ತೈಲ, ಗ್ಯಾಸ್, ಶಸ್ತ್ರಾಸ್ತ್ರಗಳ ಕಂಪನಿಗಳಿಗೆ ಸೂಪರ್ ಲಾಭ ವಾಗುತ್ತಿದ್ದು, ಅವುಗಳೇ ಯು.ಎಸ್ ಮತ್ತು ಯುರೋ ಕೂಟದ ಸರಕಾರಗಳ ಜತೆ ಲಾಬಿ ಮೂಲಕ ಈ ಯುದ್ಧವನ್ನು ತೀವ್ರವಾಗಿ ಮುಂದುವರೆಸುತ್ತಿವೆ.

ಉಕ್ರೇನ್ ಮತ್ತು ರಶ್ಯಾ ಜನ ನೇರವಾಗಿ ಸಂಘರ್ಷದಿಂದಾಗಿ ಸಂಕಷ್ಟಗೊಳಗಾಗಿದ್ದಾರೆ. ಆದರೆ ಜಗತ್ತಿನ ಎಲ್ಲ ದೇಶಗಳ ಜನರು ಸ್ವಲ್ಪ ಹೆಚ್ಚು ಸ್ವಲ್ಪ ಕಡಿಮೆ ಉಕ್ರೇನ್ ಸಂಘರ್ಷದಿಂದ ಬಳಲುತ್ತಿದ್ದಾರೆ. ಯು.ಎಸ್, ಯುರೋಪ್ ಜನ ಇಂಧನ ಸೇರಿದಂತೆ ಜೀವನಾವಶ್ಯಕ ವಸ್ತುಗಳ ಭಾರೀ ಬೆಲೆ ಏರಿಕೆ, ನಿರುದ್ಯೋಗ, ಪೆನ್ಶನ್ ಮುಂತಾದ ಕಲ್ಯಾಣ ಯೋಜನೆಗಳಲ್ಲಿ ಕಡಿತ ಅನುಭವಿಸುತ್ತಿದ್ದಾರೆ. ಇದನ್ನು ಹೆಚ್ಚು ಕಡಿಮೆ ಎಲ್ಲ ದೇಶಗಳ ಜನ ಅನುಭವಿಸುತ್ತಿದ್ದಾರೆ. ಉಕ್ರೇನ್, ರಶ್ಯದ ಜನರಂತೂ ಯುದ್ಧ ಪರಿಸ್ಥಿತಿಯಿಂದ ಸೈನಿಕರ ನಾಗರಿಕರ ಸಾವು–ನೋವು ಅಲ್ಲದೆ, ತೀವ್ರ ಆರ್ಥಿಕ ಏರುಪೇರು ಕಾಣುತ್ತಿದ್ದಾರೆ.

ಆದರೆ ಉಕ್ರೇನ್, ರಶ್ಯಾಗಳ ಗೋಧಿ ಮೇಲೆ ಹೆಚ್ಚಿನ ಮಟ್ಟಿಗೆ (ಪೂರ್ಣವಾಗಿ ಅವಲಂಬಿಸಿರುವ ಬಾಂಗ್ಲಾದೇಶ, ಪಾಕಿಸ್ತಾನ, ಲಾವೋಸ್, ವಾರ್ಂಡಾ, ಸೋಮಾಲಿಯ; ಹಾಗೂ ಅರ್ಧಕ್ಕೂ ಹೆಚ್ಚು ಆಮದು ಮಾಡುವ 15 ಆಫ್ರಿಕನ್ ದೇಶಗಳು) ಅವಲಂಬಿಸಿರುವ ಕೆಲವು ದೇಶಗಳು ತೀವ್ರ ಆಹಾರ ಕೊರತೆ ಮತ್ತು ಹಸಿವು ಎದುರಿಸುತ್ತಿವೆ. ಭಾರತ ಸೇರಿದಂತೆ ಹೆಚ್ಚಿನ ದೇಶಗಳು ರಾಸಾಯನಿಕ ಗೊಬ್ಬರಗಳಿಗೆ ಸಹ ಉಕ್ರೇನ್, ರಶ್ಯಾಗಳ ಮೇಲೆ ಹೆಚ್ಚಾಗಿ ಅವಲಂಬಿಸಿವೆ. ವಿಶ್ವಸಂಸ್ಥೆ ಮಧ್ಯಸ್ತಿಕೆಯಿಂದ ಗೋದಿಯ ರಫ್ತಿನ ಮೇಲೆ ದಿಗ್ಬಂಧನ ಸಡಿಸಲಾಯಿತು. ಆದರೆ ರಾಸಾಯನಿಕ ಗೊಬ್ಬರದ ರಫ್ತಿನ ಮೇಲೆ ದಿಗ್ಬಂಧನ ಮುಂದುವರೆದಿದೆ.

ಹತ್ತು ಲಕ್ಷ ಜನ ಭಾಗವಹಿಸಿದ ನಾಲ್ಕನೇ 'ಕೆಂಪು ಪುಸ್ತಕ ದಿನ'....... ಪುಟ 16 ರಿಂದ

ಪ್ರಣಾಳಿಕೆಯ ಭಾಗಗಳ ಓದು (ಬಸವರಾಜ ಪೂಜಾರ, ಮಾಲಿನಿ ಮೇಸ್ತ), ಹಾಡು (ಕೆ. ಎಸ್.ಲಕ್ಷ್ಮಿ), ಕವನ ವಾಚನ (ಯಮುನಾ, ಲಿಂಗರಾಜು) ಗಳೂ ಸೇರಿದ್ದವು. ಮುಂದಿನ ಎರಡು ವಾರಗಳಲ್ಲಿ ಫೇಸ್ ಬುಕ್ ನಲ್ಲಿ "ನಾನು ಕಮ್ಯುನಿಸ್ಟ್ ಪ್ರಣಾಳಿಕೆ ಓದಿದ್ದು" ಅನುಭವ ಕಥನ" ಮತ್ತು ಪ್ರಣಾಳಿಕೆಯ ಭಾಗಗಳ ಓದುಗಳನ್ನು ಪ್ರಸಾರ ಮಾಡಲಾಗುವುದು. ಬೆಂಗಳೂರು ದಕ್ಷಿಣ, ಕಲಬುರ್ಗಿ, ಹಾಸನ ಮುಂತಾದ ಕಡೆ ಜಿಲ್ಲಾ ಮಟ್ಟದ ಕೆಂಪು ಪುಸ್ತಕ ದಿನ ಆಚರಣೆಯ ವರದಿಗಳು ಬಂದಿವೆ.

ವಿಶ್ವದೆಲ್ಲೆಡೆ ಕೆಂಪು ಪುಸ್ತಕ ದಿನ

ಕೆಂಪು ಪುಸ್ತಕ ವೆಂದರೆ ಕಮ್ಯುನಿಸ್ಟ್ ಪ್ರಣಾಳಿಕೆ ಅಥವಾ ಮಾರ್ಕ್ಸ್ ಏಂಗೆಲ್ಸ್ ಅಥವಾ ಮಾರ್ಕ್ಸ್ ವಾದಿ ಕೃತಿಗಳು ಮಾತ್ರವಲ್ಲ. ಈಗಿರುವ ಶೋಷಕ ವ್ಯವಸ್ಥೆಯನ್ನು ಕಿತ್ತೆಸೆಯುವ ಮತ್ತು ಸಮಸಮಾಜದ ಕನಸು ಬಿತ್ತುವ, ಪ್ರಜ್ಞೆ ಬೆಳೆಸುವ, ಅದನ್ನು ಸಾಧಿಸಲು ಹೋರಾಟಕ್ಕೆ ಪ್ರೇರಣೆ ಕೊಡುವ ಎಲ್ಲ ಪುಸ್ತಕಗಳೂ ಕೆಂಪು ಪುಸ್ತಕಗಳೇ ಎಂದು ಪರಿಗಣಿಸಲಾಗಿದೆ. ಕೆಂಪು ಪುಸ್ತಕ ದಿನವೆಂದರೆ ಓದು ಮಾತ್ರವಲ್ಲ. ಹಾಡು, ಕವನ ವಾಚನ, ಪೋಸ್ಟರ್, ಕಲಾಕೃತಿ, ಫಿಲಂ ಪ್ರದರ್ಶನಗಳು ಕೂಡಾ. ಇವುಗಳ ಮೂಲಕ ಸಮಾಜವಾದಿ ಸೆಕ್ಯುಲರ್ ಆಧಾರದ ಮೇಲೆ ಜನ ಕಳೆದುಕೊಳ್ಳುತ್ತಿರುವ ಸಾರ್ವಜನಿಕ ಜಾಗಗಳನ್ನು, ಸಾಮೂಹಿಕ ಜೀವನವನ್ನು ಮರಳಿ ಪಡೆಯುವ ದಿನವಾಗಿ ಹಬ್ಬದಂತೆ ಆಚರಿಸಬೇಕಾದ ದಿನ.

ಈ ವರ್ಷ ಜೆ.ಎನ್.ಯು, ಹೈದರಾಬಾದ್, ಜಾಮಿಯ ಮಿಲಿಯ, ದೆಹಲಿ, ಪ್ರೆಸಿಡೆನ್ಸಿ ಮುಂತಾದ ಹಲವು ವಿವಿ ಗಳಲ್ಲಿ ಕೆಂಪು ಪುಸ್ತಕ ಓದು, ಹಾಡು, ಕವನ ವಾಚನ, ಪೋಸ್ಟರ್, ಕಲಾಕೃತಿ, ಫಿಲಂ ಪ್ರದರ್ಶನಗಳ ಮೂಲಕ ಆಚರಿಸಲಾಯಿತು. ದೆಹಲಿಯಲ್ಲಿ ಲೆಫ್ಟ್ ವರ್ಡ್ ಸಂಘಟಿಸಿದ ತಡರಾತ್ರಿಯವರೆಗೆ ನಡೆದ ಸಭೆಯಲ್ಲಿ ಭಾರತದ ಮತ್ತು ವಿದೇಶಗಳ 10ಕ್ಕೂ ಹೆಚ್ಚು ಭಾಷೆಗಳಲ್ಲಿ ಪ್ರಣಾಳಿಕೆಯ ಭಾಗಗಳನ್ನು ಓದಿದ್ದು ಮತ್ತು ಜನಂ ನಾಟಕ ಪ್ರದರ್ಶಿಸಿದ್ದು ವಿಶೇಷವಾಗಿತ್ತು.

ಭಾರತದ ಹೊರಗೂ ಈ ಬಾರಿಯ ಕೆಂಪು ಪುಸ್ತಕ ದಿನ ವಿಸ್ತಾರ, ವೈವಿಧ್ಯತೆಗಳನ್ನು ಕಂಡಿತು. ಮಲೇಶಿಯಾ, ಚೀನಾ, ಪಾಕಿಸ್ತಾನ, ಆಫ್ರಿಕಾದ ಕೆಲವು ದೇಶಗಳು ಮೊದಲ ಬಾರಿ ಭಾಗವಹಿಸಿದವು. ಯು.ಎಸ್, ಲ್ಯಾಟಿನ್ ಅಮೆರಿಕ, ಯುರೋಪಿನಲ್ಲಿ ಹಿಂದಿನ ವರ್ಷಗಳಿಗಿಂತಲೂ ಹೆಚ್ಚು ವ್ಯಾಪಕವಾಗಿ ಹೆಚ್ಚಿನ ವ್ಯಕ್ತಿಗಳು, ಗುಂಪುಗಳು, ಸಂಘಟನೆಗಳು ಭಾಗವಹಿಸಿದ್ದವು.

ಈ ಬಾರಿ ಒಟ್ಟು ಹತ್ತು ಲಕ್ಕಕ್ಕೂ ಮೀರಿ ಭಾಗವಹಿಸಿದ ವರದಿಗಳು ಬಂದಿವೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE FEBRUARY 27-MARCH 5, 2023 Price: Rs. 10/- Date of Publication: 24 FEBRUARY 2023 RNI No. KARKAN /2006/17926 Posted on 28-02-2023
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate** - Rs. 2





ಹತ್ತು ಲಕ್ಷ ಜನ ಭಾಗವಹಿಸಿದ ನಾಲ್ಕನೇ 'ಕೆಂಪು ಪುಸ್ತಕ ದಿನ'

ಫೆಬ್ರುವರಿ 21 ರಂದು ತೆಲಂಗಾಣ ದಲ್ಲಿ ರಾಜ್ಯದಾದ್ಯಂತ ಭಗತ್ ಸಿಂಗ್ ಪುಸ್ತಕ ವನ್ನು ಸಾಮೂಹಿಕವಾಗಿ ಓದಲಾಯಿತು. ಆಂದ್ರಪ್ರದೇಶದಲ್ಲಿ ಕ್ರಾಂತಿಕಾರಿ ಕವಿ ಶ್ರೀ ಶ್ರೀ ಅವರ ಪ್ರಸಿದ್ಧ ಕಾವ್ಯ 'ಮಹಾಪ್ರಸ್ಥಾನ' ವನ್ನು ಸಾಮೂಹಿಕವಾಗಿ ಓದಲಾಯಿತು. ತಮಿಳುನಾಡು ಮತ್ತು ಪಾಂಡಿಚೇರಿಯಲ್ಲಿ ಧರ್ಮದ ಕುರಿತು ಮಾರ್ಕ್ಸ್ ಬರಹಗಳನ್ನು ಓದಲಾಯಿತು. ಫೆಬ್ರುವರಿ 14ರಿಂದ 21ರ ವರೆಗೆ ಕೇರಳದಲ್ಲಿ ಪುಸ್ತಕಗಳ, ಲೇಖಕರ ಕುರಿತ ಸಾಹಿತ್ಯೋತ್ಸವ ಜರುಗಿತು. ಹಲವು ರಾಜ್ಯಗಳಲ್ಲಿ ಕಮ್ಯುನಿಸ್ಟ್ ಪ್ರಣಾಳಿಕೆಯನ್ನು ಸಾರ್ವಜನಿಕವಾಗಿ ಸಾಮೂಹಿಕವಾಗಿ ಓದಲಾಯಿತು. ಫೆಬ್ರುವರಿ 21ರಂದು ಏನಿದು ವಿಶೇಷ ಎಂದಿರಾ? ಫೆಬ್ರುವರಿ 21 ನ್ನು 2020 ರಿಂದ ಕೆಂಪು ಪುಸ್ತಕಗಳ ದಿನವಾಗಿ ಜಗತ್ತಿನಾದ್ಯಂತ ಆಚರಿಸಲಾಗುತ್ತಿದೆ.

ಕೆಂಪು ಪುಸ್ತಕ ದಿನ – ಏನಿದು?

ಫೆಬ್ರುವರಿ 21 ಎರಡು ಮಹತ್ವದ ಘಟನೆಗಳು ನಡೆದ ದಿನ. 175 ವರ್ಷಗಳ ಹಿಂದೆ ಈ ದಿನವೇ ಇಬ್ಬರು ಯುವ ಬುದ್ಧಿಜೀವಿಗಳು – ಕಾರ್ಲ್ ಮಾರ್ಕ್ಸ್ ಮತ್ತು ಫ್ರೆಡೆರಿಕ್ ಏಂಗೆಲ್ಸ್ – ಕಮ್ಯುನಿಸ್ಟ್ ಪ್ರಣಾಳಿಕೆಯನ್ನು ಪ್ರಕಟಿಸಿದರು. ಈ ದಿನವನ್ನು 2002ರಿಂದ ವಿಶ್ವಸಂಸ್ಥೆಯ ಕರೆಯ ಮೇರೆಗೆ "ಅಂತರರಾಷ್ಟ್ರೀಯ ಮಾತೃಭಾಷಾ ದಿನ"ವಾಗಿಯೂ ಆಚರಿಸಲಾಗುತ್ತಿದೆ. ಈ ದಿನವನ್ನು 1948ರಲ್ಲಿ ಪೂರ್ವ ಪಾಕಿಸ್ತಾನದಲ್ಲಿ (ಈಗ ಬಾಂಗ್ಲಾದೇಶ) ಉರ್ದು ಭಾಷೆಯ ಹೇರಿಕೆಯ ವಿರುದ್ಧ ಮತ್ತು ಬಾಂಗ್ಲಾ ಭಾಷಾ ಸಂರಕ್ಷಣೆಗೆ ನಡೆದ ಚಳುವಳಿಯನ್ನು ನೆನಪಿಸಲು ಆಯ್ದುಕೊಳ್ಳಲಾಗಿದೆ. ಆ ದಿನ ಡಾಕ್ಕಾ ವಿವಿಯ ಐದು ವಿದ್ಯಾರ್ಥಿಗಳು ಹುತಾತ್ಮರಾಗಿದ್ದರು. ಇದು ಜಗತ್ತಿನಲ್ಲಿ ಮಾತೃಭಾಷೆಯ ಮಹತ್ವ ಮತ್ತು ಎಲ್ಲ ಭಾಷೆಗಳ ಸಮಾನತೆ ತಿಳಿಸುವ ಹಾಗೂ ಭಾಷಾ ಬಹುತ್ವ ವೈವಿಧ್ಯತೆಯನ್ನು ಸಂಭ್ರಮಿಸುವ ದಿನ ಸಹ ಆಗಿದೆ.



2020ರಲ್ಲಿ ಭಾರತದ ಲೆಫ್ಟ್ ವರ್ಡ್ ಸೇರಿದಂತೆ ಕೆಲವು ಎಡ ಪ್ರಕಾಶಕರು ಫೆಬ್ರುವರಿ 21ನ್ನು 'ಕೆಂಪು ಪುಸ್ತಕ ದಿನ'ವಾಗಿ ಆಚರಿಸಬೇಕೆಂದು ನಿರ್ಧರಿಸಿದರು. ಅಂದು ಜಗತ್ತಿನಾದ್ಯಂತ ತಮ್ಮ ಭಾಷೆಯಲ್ಲಿ ಜನರು ತಮ್ಮ ಮಾತೃಭಾಷೆಯಲ್ಲಿ ಕಮ್ಯುನಿಸ್ಟ್ ಪ್ರಣಾಳಿಕೆಯನ್ನು ಸಾಮೂಹಿಕವಾಗಿ ಸಾರ್ವಜನಿಕವಾಗಿ ಓದಬೇಕು ಎಂದು ಕರೆ ಕೊಟ್ಟರು. ಮೊದಲ ವರ್ಷ ಕೆಲವು ಎಡ ಪ್ರಕಾಶಕರು, ಲೇಖಕರು, ಬುದ್ಧಿಜೀವಿಗಳು, ಎಡ ಗುಂಪುಗಳು ಭಾಗವಹಿಸಿದರು. ಇವೇ ಎಡ ಪ್ರಕಾಶಕರು ಮುಂದೆ ಎಡ ಪ್ರಕಾಶಕರ ಅಂತರಾಷ್ಟ್ರೀಯ ಒಕ್ಕೂಟ (IULP - International Union of Left Publishers) ರಚಿಸಿದರು. ಭಾರತದಲ್ಲಿ ಸಿಪಿಐ(ಎಂ) 2021ರಲ್ಲಿ ತನ್ನ ಘಟಕಗಳಿಗೆ 'ಕೆಂಪು ಪುಸ್ತಕ ದಿನ'ವಾಗಿ ಆಚರಿಸಬೇಕು ಎಂದು ಕರೆ ಕೊಡುವ ಮೂಲಕ ಇದಕ್ಕೆ ವ್ಯಾಪಕ ಸಾಮೂಹಿಕ ರೂಪ ಸಿಕ್ಕಿತು. ಲ್ಯಾಟಿನ್ ಅಮೆರಿಕ, ಆಫ್ರಿಕಾ, ಯುರೋಪಿನಲ್ಲೂ ಹಲವು ಎಡ ಸಂಘಟನೆಗಳು, ಚಳುವಳಿಗಳು, ಪಕ್ಷಗಳು ಈ ದಿನವನ್ನು ಆಚರಿಸಲಾರಂಭಿಸಿವೆ. ಕಳೆದ 4 ವರ್ಷಗಳಲ್ಲಿ ಹೆಚ್ಚೆಚ್ಚು ದೇಶಗಳಲ್ಲಿ ಕಾರ್ಮಿಕರು, ರೈತರು, ವಿದ್ಯಾರ್ಥಿಗಳು, ಯುವಜನರು, ಜನ ಚಳುವಳಿಗಳು, ಜನಸಂಘಟನೆಗಳು, ಎಡ ಗುಂಪುಗಳು, ಎಡ ಚಳುವಳಿಗಳು, ಎಡ ಪಕ್ಷಗಳು 'ಕೆಂಪು ಪುಸ್ತಕ ದಿನ'ವನ್ನು ತಮ್ಮದಾಗಿಸಿಕೊಂಡರು.

ನಮ್ಮ ಬರಹಗಾರರು, ನಮ್ಮ ಚಿಂತಕರು, ನಮ್ಮ ಜಾಗಗಳು, ನಮ್ಮ ಜನರು ಮತ್ತು ಜನಪರ ಚಿಂತನೆಗಳು ಜಾಗತಿಕ ಬಂಡವಾಳಶಾಹಿ ಮತ್ತು ಉಗ್ರ ಬಲಪಂಥೀಯರ ಆಕ್ರಮಣಗಳನ್ನು ಎದುರಿಸಬೇಕಾಗಿದೆ. ಈ 'ಚಿಂತನೆಗಳ ಸಮರ' ದಲ್ಲಿ ಪ್ರತಿದಾಳಿಯನ್ನು ಹೂಡಲು ಕೆಂಪು ಪುಸ್ತಕಗಳ ಅಭಿಯಾನ. ಈ ಸಮರದಲ್ಲಿ ಸಾಮಾನ್ಯ ಜನರ ಧ್ವನಿಯನ್ನು ವರ್ಧಿಸುವ ಪುಸ್ತಕಗಳು ನಮ್ಮ ಆಯುಧಗಳಾಗಿವೆ – ಎಂದು ಈ ಸಂದರ್ಭದಲ್ಲಿ IULP ಬಿಡುಗಡೆ ಮಾಡಿದ ಮಾರ್ಮಿಕ ಹೇಳಿಕೆಯಲ್ಲಿ ತಿಳಿಸಿದೆ. (ಈ ಹೇಳಿಕೆಯ ಪೂರ್ಣ ಪಾಠ ಬಾಕ್ಸ್ ನಲ್ಲಿ ನೋಡಿ.)

ಕರ್ನಾಟಕದಲ್ಲಿ ಕೆಂಪು ಪುಸ್ತಕ ಅಭಿಯಾನ

ಕಳೆದ 3 ವರ್ಷದಿಂದ IULP ಸದಸ್ಯ ಸಂಸ್ಥೆಯಾದ ಕ್ರಿಯಾ ಮಾಧ್ಯಮದ ಮತುವರ್ಜಿಯಿಂದ ಕರ್ನಾಟಕದಲ್ಲೂ 'ಕೆಂಪು ಪುಸ್ತಕ ದಿನ'ವನ್ನು ಆಚರಿಸಲಾಗುತ್ತಿದೆ. ಈ ವರ್ಷ ಫೆ.21 ರಿಂದ ಮಾ.14 ರ ವರೆಗಿನ 3 ವಾರಗಳ ಕೆಂಪು ಪುಸ್ತಕ ಅಭಿಯಾನಕ್ಕೆ ಕರೆ ಕೊಡಲಾಗಿದೆ. ಫೆಬ್ರುವರಿ 21ರಂದು ಈ ಅಭಿಯಾನವನ್ನು ಆನ್ ಲೈನಿನಲ್ಲಿ (ಝೂಮ್ ಲಿಂಕ್ ನಲ್ಲಿ ಮತ್ತು ಯೂ ಟ್ಯೂಬ್ ಲೈವ್ ಪ್ರಸಾರದ ಮೂಲಕ) ಚಿಂತಕ ಪ್ರೊ.ರಾಜೇಂದ್ರ ಚೆನ್ನಿ ಉದ್ಘಾಟಿಸಿದರು. ಅವರು ಕಮ್ಯುನಿಸ್ಟ್ ಪ್ರಣಾಳಿಕೆಯ ಮಹತ್ವ ಮತ್ತು ಪ್ರಸ್ತುತತೆ ಕುರಿತು ಮಾತನಾಡಿ, 1848ರಲ್ಲಿದ್ದ ಕೈಗಾರಿಕಾ ಕ್ರಾಂತಿಯ ಆರಂಭದಲ್ಲಿದ್ದ ಬಂಡವಾಳಶಾಹಿ ಸಮಾಜದ ಕುರಿತ ವಿಶ್ಲೇಷಣೆಗೆ ಸೀಮಿತವಾಗಿಲ್ಲವೆಂದರು. ಬಂಡವಾಳಶಾಹಿ ವ್ಯವಸ್ಥೆಯ ಆಂತರಿಕ ತರ್ಕವನ್ನು ಮತ್ತು ಪ್ರವೃತ್ತಿಯನ್ನು ಸರಿಯಾಗಿ ಅರ್ಥೈಸಿದ್ದರಿಂದ ಮತ್ತು ಅದನ್ನು ಬದಲಿಸಲು ಕಾರ್ಮಿಕ ವರ್ಗದ ಸಿದ್ಧತೆ, ಪಾತ್ರಗಳ ಕುರಿತು ಸರಿಯಾಗಿ ಗ್ರಹಿಸಿದ್ದರಿಂದ 175 ವರ್ಷಗಳ ನಂತರವೂ ಪ್ರಸ್ತುತವಾಗಿದೆ, ಮತ್ತು ಅದು ಜಗತ್ತಿನ (ಬೈಬಲ್, ಕುರಾನ್ ಬಿಟ್ಟರೆ) ಅತ್ಯಂತ ಹೆಚ್ಚು ಭಾಷೆಗಳಲ್ಲಿ ಲಭ್ಯವಿರುವ, ಪ್ರಸಾರ ಕಂಡ ಪುಸ್ತಕವಾಗಿದೆ ಎಂದು ತಿಳಿಸಿದರು.

ಸಿಪಿಐ(ಎಂ) ಕಾರ್ಯದರ್ಶಿ ಯು.ಬಸವರಾಜ್ ಪ್ರೇರಣಾ ಮಾತುಗಳನ್ನು ಆಡಿ, ಪಕ್ಷದ ಎಲ್ಲ ಘಟಕಗಳು ಮಾ.14ರ ವರೆಗಿನ ಅವಧಿಯಲ್ಲಿ ಕಮ್ಯುನಿಸ್ಟ್ ಪ್ರಣಾಳಿಕೆಯ ಕುರಿತು ಉಪನ್ಯಾಸ, ಚರ್ಚೆ, ಸಾಮೂಹಿಕ ಸಾರ್ವಜನಿಕ ಓದುಗಳನ್ನು ಸಂಘಟಿಸಬೇಕೆಂದು ಕರೆಕೊಟ್ಟರು. ಉದ್ಘಾಟನಾ ಕಾರ್ಯಕ್ರಮದಲ್ಲಿ "ನಾನು ಕಮ್ಯುನಿಸ್ಟ್ ಪ್ರಣಾಳಿಕೆ ಓದಿದ್ದು" ಅನುಭವ ಕಥನ"(ಕೆ.ಎಸ್.ಲಕ್ಷ್ಮಿ), ಪುಟ 15 ಕ್ಕೆ

ಕೆಂಪು ಪುಸ್ತಕಗಳ ದಿನದಂದು IULP ಕರೆ

ನಾವು, ಎಡ ಪ್ರಕಾಶಕರ ಅಂತರಾಷ್ಟ್ರೀಯ ಒಕ್ಕೂಟ (International Union of Left Publishers) ಕೆಂಪು ಪುಸ್ತಕಗಳ ದಿನವಾದ ಫೆಬ್ರವರಿ 21, 2023 ರಂದು, ಕಮ್ಯುನಿಸ್ಟ್ ಪ್ರಣಾಳಿಕೆಯ ಜೀವಂತ ಸಂದೇಶದ ಸಂಭ್ರಗಮಾಚರಣೆಗೆ ಮತ್ತು ಅದರ ಏಕತೆಯ ಕರೆಗೆ ಬದ್ಧರಾಗಿರಲು ನಮ್ಮೊಂದಿಗೆ ಸೇರಲು ಎಲ್ಲಾ ಪ್ರಕಾಶಕರು, ಬರಹಗಾರರು, ಪುಸ್ತಕ ಮಾರಾಟಗಾರರು, ಶಿಕ್ಷಣತಜ್ಞರು, ವಿದ್ಯಾರ್ಥಿಗಳು, ಕಾರ್ಮಿಕರು ಮತ್ತು ಎಲ್ಲಾ ಹೋರಾಡುತ್ತಿರುವ ಜನರಿಗೆ ಕರೆ ನೀಡುತ್ತೇವೆ.

1848 ರಲ್ಲಿ ಬರೆಯಲಾದ, ಕಮ್ಯುನಿಸ್ಟ್ ಪ್ರಣಾಳಿಕೆಯು ಬಂಡವಾಳಶಾಹಿಯ ದುರಂತದ ಆರಂಭವನ್ನು ಕಣ್ಣಾರೆ ಕಂಡ ಇಬ್ಬರು ಯುವಕರ ದೃಷ್ಟಿಯ ಸ್ಪಷ್ಟತೆಯನ್ನು ಪ್ರತಿನಿಧಿಸುತ್ತದೆ. ಅವರು ಅದರ ಕಾರ್ಯವಿಧಾನವನ್ನು ಅನಾವರಣಗೊಳಿಸಲು ತಮ್ಮ ಜೀವನವನ್ನು ಮುಡಿಪಾಗಿಟ್ಟರು. ಮುಂದೆ ಏನಾಗಬಹುದು ಎಂದು ಅವರು ನಮಗೆ ಎಚ್ಚರಿಕೆ ನೀಡಿದರು. ಆದರೆ ಪ್ರಪಂಚದಾದ್ಯಂತ ಅದನ್ನು ಮಾರ್ದನಿಸುವಂತೆ ಮಾಡಿದ್ದರ ಹೆಗ್ಗಳಿಕೆ, ತಮ್ಮ ಎಲ್ಲವನ್ನೂ ಧಾರೆಯೆರೆದು ವಿಮೋಚನೆ, ಸಾರ್ವಭೌಮತ್ವ ಮತ್ತು ಸಮಾಜವಾದಕ್ಕಾಗಿ ವ್ಯಾಪಕ ಹೋರಾಟಗಳನ್ನು ಕಟ್ಟಿದ, ಪ್ರತಿ ಖಂಡದಲ್ಲಿ ಹೆಸರಾಂತ ಮತ್ತು ಹೆಸರೇ ಗೊತ್ತಿರದ ಕೋಟ್ಯಾಂತರ ಕಮ್ಯುನಿಸ್ಟರಿಗೆ ಸಲ್ಲುತ್ತದೆ. ಈ ಕೋಟ್ಯಾಂತರ ಜನರ ಹೋರಾಟವು ಈ ಪಠ್ಯಕ್ಕೆ ತನ್ನದೇ ಆದ ಜೀವಂತಿಕೆಯನ್ನು ನೀಡಿದೆ. ಅದು ಇಂದು ತಮ್ಮ ಹಕ್ಕುಗಳು ಮತ್ತು ಘನತೆಯ ಜೀವನ ಪರಿಸ್ಥಿತಿಗಳಿಗಾಗಿ ಒತ್ತಾಯಿಸುವ ಹಾಗೂ ಕ್ರಾಂತಿಕಾರಿ ಚಳುವಳಿಗಳನ್ನು ಕಟ್ಟುತ್ತಿರುವ ಎಲ್ಲರಿಗೂ ಸ್ಫೂರ್ತಿಯನ್ನು ನೀಡುತ್ತದೆ.

ನಮ್ಮ ಬರಹಗಾರರು, ನಮ್ಮ ಚಿಂತಕರು, ನಮ್ಮ ಪ್ರದೇಶಗಳು ಮತ್ತು ನಮ್ಮ ಜನರು ಉಗ್ರ ಬಲಪಂಥೀಯರ ತೀವ್ರ ಬೆಳವಣಿಗೆ ಮತ್ತು ತಮ್ಮ ವಿರುದ್ಧವಾದ ಅವರ ವಿವಿಧ ರೀತಿಯಲ್ಲಿ ವೇಗವಾಗಿ ಹಬ್ಬುತ್ತಿರುವ ಆಕ್ರಮಣಗಳನ್ನು ಎದುರಿಸುತ್ತಿದ್ದಾರೆ. ಜಾಗತಿಕ ಬಂಡವಾಳಶಾಹಿ ಮಾರುಕಟ್ಟೆಗಳು ಪ್ರಕಾಶನ ಉದ್ಯಮವನ್ನು ಉಸಿರುಗಟ್ಟಿಸುತ್ತಿವೆ. ಈ ಹಿನ್ನೆಲೆಯಲ್ಲಿ ಈ 'ಚಿಂತನೆಗಳ ಸಮರ' ದಲ್ಲಿ ಪ್ರತಿದಾಳಿಯನ್ನು ಪ್ರಾರಂಭಿಸಲು, ನಾವು 2020 ರ ಕೆಂಪು ಪುಸ್ತಕಗಳ ದಿನದಂದು ನಮ್ಮ ಜಾಲವನ್ನು ಸ್ಥಾಪಿಸಿದ್ದೇವೆ. ಈ ಸಮರದಲ್ಲಿ ಸಾಮಾನ್ಯ ಜನರ ಧ್ವನಿಯನ್ನು ವರ್ಧಿಸುವ ಪುಸ್ತಕಗಳು ಮತ್ತು ಎಲ್ಲಾ ಖಂಡಗಳಾದ್ಯಂತ ಇರುವ ಒಡನಾಡಿಗಳ ಬಲವಾದ ಜಾಲವು ನಮ್ಮ ಆಯುಧಗಳಾಗಿವೆ. ಈ ಜಾಲದ ಒಡನಾಡಿಗಳು ಪ್ರಪಂಚದಾದ್ಯಂತದ ಜನಪರ ಚಿಂತನೆಗಳನ್ನು ಬೆಂಬಲಿಸುವ ಅಂತರಾಷ್ಟ್ರೀಯ ಸಹಯೋಗದ ಕ್ರಿಯಾಶೀಲ ಆಚರಣೆಗೆ ಬದ್ಧರಾಗಿರುವವರು. ಬಹುಪಾಲು ಮಾನವೀಯತೆಯ ಕಾರ್ಯಸೂಚಿಯನ್ನು ಪ್ರತಿನಿಧಿಸುವ ಈ ಚಿಂತನೆಗಳು ಜಾಗತಿಕ ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿಯ ಯಜಮಾನಿಕೆಗೆ ನೇರ ಬೆದರಿಕೆಯಾಗಿದೆ. ಹಾಗಾಗಿ ಈ ಚಿಂತನೆಗಳನ್ನು ದಮನಿಸಲು ಬಲಪಂಥೀಯ ಶಕ್ತಿಗಳು, ಅವರ ಆಳುವ ವರ್ಗಗಳ ಬೆಂಬಲಿಗರೊಂದಿಗೆ ಭೌತಿಕ ಮತ್ತು ಸೈದ್ಧಾಂತಿಕ ದಾಳಿಗಳನ್ನು ಮುಂದುವರೆಸುತ್ತವೆ.

IULP ಯ ನಾವು, ಭವಿಷ್ಯದ ಹಾದಿಯನ್ನು ಬೆಳಗಿಸುವ ವಿಚಾರಗಳ ದಮನವನ್ನು ಸಹಿಸಲು ನಿರಾಕರಿಸುತ್ತೇವೆ ಹಾಗೂ ನಮ್ಮ ಒಡನಾಡಿಗಳು ಮತ್ತು ನಮ್ಮ ಜನರ ಒಗ್ಗಟ್ಟಿನಿಂದ ನಾವು ನಮ್ಮ ಬಲವನ್ನು ಪಡೆಯುತ್ತೇವೆ.

ತಮ್ಮ ಲಾಭಗಳನ್ನು ಉತ್ಪಾದಿಸುವವರಿಗೆ ಹೆದರಿ ತಮ್ಮ ಲಾಭವನ್ನು ಮುಚ್ಚಿಟ್ಟುಕೊಳ್ಳುವ ಆಳುವ ವರ್ಗಗಳನ್ನು, ಕಮ್ಯುನಿಸಂ ಪ್ರೇತ ಭೀತಿಯಂತೆ ಕಾಡಲಿ. ಆದರೆ ಕಮ್ಯುನಿಸಂ, ಪ್ರಪಂಚದ ಜನರು ತಮ್ಮ ಸ್ವಂತ ಅಗತ್ಯಗಳಿಗೆ ಅನುಗುಣವಾಗಿ, ಎಲ್ಲರಿಗೂ ಅದನ್ನು ಒದಗಿಸುವ, ತಮ್ಮ ಸ್ವಂತ ಕೈಗಳಿಂದಲೇ ಕಟ್ಟುವ ಭವಿಷ್ಯದ ಕಡೆಗಿನ ಹಾದಿಯನ್ನು ತೋರುವ ಪತಾಕೆ.

ವಿಶ್ವದ ಕಾರ್ಮಿಕರೇ ಒಂದಾಗಿ! ಸಾಮ್ರಾಜ್ಯಶಾಹಿ ಬಿದ್ದು ಹೋಗಲಿ!! ಸಮಾಜವಾದದತ್ತ ಮುನ್ನಡೆಯೋಣ!!

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**